ದುಡಿಯುವ
ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 16 | ಏಪ್ರಿಲ್ 11-17, 2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಕಾಂ. ಸೀತಾರಾಂ ಯೆಚೂರಿ
ಪ್ರಧಾನ ಕಾರ್ಯದರ್ಶಿಯಾಗಿ
ಪುನರಾಯ್ಕೆ

23ನೇ ಮಹಾಧಿವೇಶನ

ಭಾರತವನ್ನು ಉಳಿಸಲು ಜಾತ್ಯಾತೀತ ಶಕ್ತಿಗಳ ವಿಶಾಲ ರಂಗ

- ಸಿಪಿಐ(ಎಂ) ಕರೆ





ಭಾರ ಹೊತ್ತ ಬೆನ್ನಿಗೆ
ಮತ್ತೆ ಮತ್ತೆ
ಬೆಲೆ ಏರಿಕೆಯ ಬರೆ



ಬೇಜವಾಬ್ದಾರಿ
ಗೃಹಮಂತ್ರಿ
ಅಧಿಕಾರದಲ್ಲಿ
ಇರಬೇಕೆ?



ಜಾತಿ ಮತ್ತು ಮತೀಯವಾದ
ಡಾ. ಬಿ.ಆರ್. ಅಂಬೇಡ್ಕರ್
ಚಿಂತನೆಗಳು

ಸಿಪಿಐ(ಎಂ)ನ 23ನೇ ಮಹಾಧಿವೇಶನ ಪ್ರಧಾನ ರಾಜಕೀಯ ನಿರ್ಣಯವನ್ನಲ್ಲದೆ, ಕೆಲವು ಮಹತ್ವದ ಪ್ರಶ್ನೆಗಳನ್ನು ಇನ್ನಷ್ಟು ಆಳವಾಗಿ ಪರಿಶೀಲಿಸುವ ನಿರ್ಣಯಗಳನ್ನು ಅಂಗೀಕರಿಸಿತು. ಇವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ. ಉಳಿದವುಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

ನಿರುದ್ಯೋಗದ ಬೃಹತ್ ಸಮಸ್ಯೆಯ ಪರಿಹಾರಕ್ಕೆ ಆಗ್ರಹ ಪ್ರಜಾಸತ್ತಾತ್ಮಕ ಅಭಿವೃದ್ಧಿಯ ಹಾದಿಯ ಹೋರಾಟಕ್ಕೆ ಕರೆ

ನಿಧಾನಗತಿಯ ಆರ್ಥಿಕ ಬೆಳವಣಿಗೆ, ಜೊತೆಗೆ ವಿನಾಶಕಾರಿ ನೋಟು ರದ್ಧತಿ ಮತ್ತು ಜಿಎಸ್‌ಟಿಯಿಂದಾಗಿ ನಿರುದ್ಯೋಗ ಹೆಚ್ಚು ಕಡಿಮೆ ನಿರಂತರವಾಗಿ ಏರುತ್ತಿದೆ. ಇದೊಂದು ಬೃಹತ್ ಸಮಸ್ಯೆಯಾಗಿ ಬೆಳೆಯುತ್ತಿದೆ ಎಂದಿರುವ ಸಿಪಿಐ(ಎಂ)ನ 23ನೇ ಮಹಾಧಿವೇಶನ ಒಂದು ನಿರ್ಣಯವನ್ನು ಅಂಗೀಕರಿಸಿ ಸರಕಾರ ಖಾಲಿ ಬಿದ್ದಿರುವ ಹುದ್ದೆಗಳನ್ನು ಭರ್ತಿ ಮಾಡಬೇಕು, ಮನರೇಗದಲ್ಲಿ ಕೆಲಸದ ದಿನಗಳನ್ನು 200ಕ್ಕೆ ಏರಿಸಬೇಕು ಮತ್ತು ಈ ಯೋಜನೆಯನ್ನು ನಗರಗಳಲ್ಲೂ ಜಾರಿಗೆ ತರಬೇಕು ಎಂದು ಆಗ್ರಹಿಸಿದೆ. ನವ ಉದಾರವಾದಿ ನೀತಿಗಳನ್ನು ಹಿಮ್ಮೆಟ್ಟಿಸುವ ಮತ್ತು ಎಲ್ಲರಿಗೂ ಘನತೆಯ ಉದ್ಯೋಗಗಳು ಹಾಗೂ ಜೀವನ ವೇತನವನ್ನು ಸೃಷ್ಟಿಸುವ ಪ್ರಜಾಸತ್ತಾತ್ಮಕ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುವ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಅದು ಜನಗಳಿಗೆ ಕರೆ ನೀಡಿದೆ.

ಈ ನಿರ್ಣಯದ ಪೂರ್ಣಪಾಟವನ್ನು ಈ ಮುಂದೆ ಕೊಡಲಾಗಿದೆ:

ಭಾರತದಲ್ಲಿ ನಿರುದ್ಯೋಗವು ಒಟ್ಟು ಸಂಖ್ಯೆಯಲ್ಲಿಯೂ ಮತ್ತು ಶ್ರಮಿಕ ಬಲದ ಪ್ರಮಾಣದಲ್ಲಿಯೂ 22ನೇ ಪಕ್ಷದ ಮಹಾಧಿವೇಶನದ ನಂತರದ ಈ ನಾಲ್ಕು ವರ್ಷಗಳಲ್ಲಿ ತೀವ್ರವಾಗಿ ಏರಿದೆ.

ನಿರುದ್ಯೋಗದ ಅಧಿಕೃತ ದತ್ತಾಂಶವು ಬಹಳಷ್ಟು ಕಡಿಮೆ ಅಂದಾಜನ್ನು ಕೊಡುತ್ತದೆ. ಬಹುಪಾಲು ಜನಸಂಖ್ಯೆಗೆ ಯಾವುದೇ ಅರ್ಥಪೂರ್ಣ ಸಾಮಾಜಿಕ ಭದ್ರತೆಯನ್ನು ಒದಗಿಸದೇ ಇರುವುದರಿಂದಾಗಿ ಸಂಕಟವು ಬಹಳಷ್ಟು ತೀವ್ರವಾಗಿದೆ.



ಕಳೆದ ಹಲವಾರು ವರ್ಷಗಳಿಂದ ನಿರುದ್ಯೋಗದ ಏರಿಕೆಯು, ಅರ್ಥವ್ಯವಸ್ಥೆಯ ನಿಧಾನಗತಿಯ ಜೊತೆಗೆ ವಿನಾಶಕಾರಿ ನೋಟು ರದ್ಧತಿ (ನವೆಂಬರ್, 2016) ನಂತರ ಅನೌಪಚಾರಿಕ ವಲಯಕ್ಕೆ ತೀವ್ರ ಹಿನ್ನಡೆ ಮತ್ತು ಕೆಟ್ಟದಾಗಿ ವಿನ್ಯಾಸಗೊಳಿಸಿದ ಮತ್ತು ಜಾರಿಗೊಳಿಸಿದ ಜಿಎಸ್‌ಟಿ (ಜುಲೈ 1, 2017 ರಿಂದ)ಯಿಂದ ಹೆಚ್ಚು–ಕಡಿಮೆ ನಿರಂತರವಾಗಿದೆ. 2017–18 ರ ಉಲ್ಲೇಖ ವರ್ಷಕ್ಕೆ 'ಆವಧಿಕ ಶ್ರಮ ಬಲ ಸಮೀಕ್ಷೆ' **(Periodic Labour Force Survey)**ಯ ದತ್ತಾಂಶವು ಎಲ್ಲಾ ನಿರುದ್ಯೋಗ ಸೂಚಕಗಳು 2011–12 ಮತ್ತು 2017–18 ರ ನಡುವೆ ತೀವ್ರವಾಗಿ ಏರಿರುವುದನ್ನು ತೋರಿಸಿದೆ. 'ಸಾಮಾನ್ಯ ಸ್ಥಿತಿಗತಿ ನಿರುದ್ಯೋಗ ದರ' ಎಂದು ಕರೆಯಲ್ಪಡುವ ದರವು 2011–12 ರಲ್ಲಿ ಶೇಕಡಾ 2.2 ರಿಂದ 2017–18 ರಲ್ಲಿ ಶೇಕಡಾ 6.1 ಕ್ಕೆ ಏರಿದೆ. ಇದಕ್ಕೆ ಸಂವಾದಿಯಾದ 'ಪ್ರಸಕ್ತ ಸಾಪ್ತಾಹಿಕ ಸ್ಥಿತಿಗತಿ' ದರಗಳು 2017–18 ರಲ್ಲಿ ಯುವಜನರಿಗೆ ಸಂಬಂಧಪಟ್ಟಂತೆ 10%ದ ಹತ್ತಿರ ಮತ್ತು ಕೆಲವು ಮಟ್ಟದ ಔಪಚಾರಿಕ ಶಿಕ್ಷಣವನ್ನು ಹೊಂದಿರುವವರಿಗೆ ಇನ್ನೂ ಹೆಚ್ಚು ಆಗಿದೆ. ಕೇಂದ್ರ ಸರ್ಕಾರವು ಮಹಾಸೋಂಕನ್ನು ನಿರ್ವಹಿಸಿದ ವಿಧಾನದಿಂದ ಮತ್ತು ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಕುಟುಂಬಗಳಿಗೆ ಸಾಕಷ್ಟು ಪ್ರಮಾಣದಲ್ಲಿ ನಗದು ಮತ್ತು ಧಾನ್ಯ ವರ್ಗಾವಣೆಯನ್ನು ಒದಗಿಸದೇ ಇರುವ ಅದರ ಅತಿ–ನವ ಉದಾರವಾದಿ ಆರ್ಥಿಕ ನೀತಿಗಳಿಂದ ನಿರುದ್ಯೋಗವು ಗಣನೀಯವಾಗಿ ಹದಗೆಟ್ಟಿದೆ.

15 ರಿಂದ 29 ವಯೋಮಾನದ ವ್ಯಕ್ತಿಗಳಲ್ಲಿ ಮತ್ತು ಕೆಲವು ಔಪಚಾರಿಕ ಶಿಕ್ಷಣ ಹೊಂದಿರುವವರಲ್ಲಿ ನಿರುದ್ಯೋಗ ದರಗಳು ತುಂಬಾ ಹೆಚ್ಚಿವೆ. 20 ರಿಂದ 24 ವರ್ಷಗಳು ಮತ್ತು 25 ರಿಂದ 29 ವರ್ಷ ವಯಸ್ಸಿನವರ, 2020–21 ರ ನಿರುದ್ಯೋಗ ದರಗಳು ಕ್ರಮವಾಗಿ 39% ಮತ್ತು 13%. 12 ವರ್ಷಗಳ ಔಪಚಾರಿಕ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿದ ವ್ಯಕ್ತಿಗಳಲ್ಲಿ ಈ ದರವು ಶೇಕಡಾ 10 ಕ್ಕಿಂತ ಹೆಚ್ಚು ಮತ್ತು ಪದವಿ ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದವರಲ್ಲಿ 20.4 %. ಮಹಿಳೆಯರಲ್ಲೂ ನಿರುದ್ಯೋಗ ಬಹಳ ವೇಗವಾಗಿ ಹೆಚ್ಚುತ್ತಿದೆ. ಸುಮಾರು 35% ಮಹಿಳಾ ಪದವೀಧರರು ನಿರುದ್ಯೋಗಿಗಳಾಗಿದ್ದಾರೆ. ಈ ಮಾಹಿತಿಗಳು ಆರ್ಥಿಕತೆಯಲ್ಲಿ ಅರೆಉದ್ಯೋಗದ ಬೃಹತ್ ಸಮಸ್ಯೆಯನ್ನು ಪತ್ತೆ ಹಚ್ಚುವುದಿಲ್ಲ.

ಕೇಂದ್ರ, ರಾಜ್ಯ ಸರ್ಕಾರಗಳು ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ವಿವಿಧ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಬಿದ್ದಿವೆ. ಅವುಗಳಲ್ಲಿ ಹಲವು ಹುದ್ದೆಗಳ ಅಧಿಸೂಚನೆಗಳನ್ನು ರದ್ದು (ಡಿನೋಟಿಫೈ) ಮಾಡಲಾಗುತ್ತಿದೆ. ಈ ಖಾಲಿ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕೆಂದು 23 ನೇ ಮಹಾಧಿವೇಶನ ಒತ್ತಾಯಿಸಿದೆ.



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ(ಮನರೇಗ) ಅಡಿಯಲ್ಲಿ ಪ್ರತಿ ಕಾರ್ಮಿಕರಿಗೆ 200 ವ್ಯಕ್ತಿ–ದಿನಗಳ ಉದ್ಯೋಗವನ್ನು ಒದಗಿಸಬೇಕು ಮತ್ತು ಭಾರತದ ಎಲ್ಲಾ ನಗರ ಪ್ರದೇಶಗಳಲ್ಲಿ ನಗರ ಉದ್ಯೋಗ ಖಾತ್ರಿಯನ್ನು ಆರಂಭಿಸಸಬೇಕು ಎಂದು ಸಿಪಿಐ(ಎಂ)ನ 23 ನೇ ಮಹಾಧಿವೇಶನ ಆಗ್ರಹ ಪಡಿಸಿದೆ. ಸರ್ಕಾರವು ಶಿಕ್ಷಣ ಮತ್ತು ಮೂಲಸೌಕರ್ಯಗಳ ಮೇಲಿನ ತನ್ನ ವೆಚ್ಚವನ್ನು ಗಣನೀಯವಾಗಿ ಹೆಚ್ಚಿಸಬೇಕು ಮತ್ತು ಆ ಮೂಲಕ ಉದ್ಯೋಗವನ್ನು ಸೃಷ್ಟಿಸಬೇಕು. ನವ ಉದಾರವಾದಿ ನೀತಿಗಳನ್ನು ಹಿಮ್ಮೆಟ್ಟಿಸುವ ಮತ್ತು ಎಲ್ಲರಿಗೂ ಘನತೆಯ ಉದ್ಯೋಗಗಳು ಹಾಗೂ ಜೀವನ ವೇತನವನ್ನು ಸೃಷ್ಟಿಸುವ ಪ್ರಜಾಸತ್ತಾತ್ಮಕ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುವ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಸಿಪಿಐ(ಎಂ) ಮಹಾಧಿವೇಶನ ಕರೆ ನೀಡಿದೆ.

ಕೆ.ಎನ್.ಉಮೇಶ್ ಮಂಡಿಸಿದ, ಪೊಲಿಟ್ ಬ್ಯುರೊ ಸದಸ್ಯ ಬಿ.ವಿ. ರಾಘವುಲು ಅನುಮೋದಿಸಿದ ಈ ನಿರ್ಣಯವನ್ನು ಮಹಾಧಿವೇಶನ ಸರ್ವಾನುಮತದಿಂದ ಅಂಗೀಕರಿಸಿತು.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆ

ಎನ್‌ಡಿಎ ಆಡಳಿತದ ಅವಧಿಯಲ್ಲಿ ಹೇರಲಾದ ಹೆಚ್ಚುವರಿ ತೆರಿಗೆಗಳನ್ನು ತಕ್ಷಣವೇ ಹಿಂಪಡೆಯಬೇಕು



ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಶಾಮೀಲಿನೊಂದಿಗೆ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಪಟ್ಟುಬಿಡದೆ ಹೆಚ್ಚಿಸುತ್ತಿರುವುದನ್ನು ಸಿಪಿಐ(ಎಂ) 23 ನೇ ಮಹಾಧಿವೇಶನ ಪ್ರತಿಭಟಿಸಿದೆ. ಎನ್‌ಡಿಎ ಆಡಳಿತದ ಅವಧಿಯಲ್ಲಿ ಹೇರಲಾದ ಹೆಚ್ಚುವರಿ ತೆರಿಗೆಗಳನ್ನು ತಕ್ಷಣವೇ ಹಿಂಪಡೆಯುವಂತೆ ಆಗ್ರಹಿಸಿದೆ. ಸರ್ಕಾರವು ಶ್ರೀಮಂತರ ಮೇಲೆ ತೆರಿಗೆಯನ್ನು ಹೆಚ್ಚಿಸಬೇಕು, ನಿಯಂತ್ರಣಗಳನ್ನು ಹಾಕಬೇಕು ಮತ್ತು ಪೆಟ್ರೋಲ್ ಉತ್ಪನ್ನಗಳ ಚಿಲ್ಲರೆ ಬೆಲೆಗಳನ್ನು ಇಳಿಸಬೇಕು ಮತ್ತು ಪೆಟ್ರೋಲಿಯಂ ರಂಗದಲ್ಲಿ ಸಾರ್ವಜನಿಕ ವಲಯದ ಉದ್ಯಮಗಳ ಖಾಸಗೀಕರಣವನ್ನು ನಿಲ್ಲಿಸಬೇಕು ಎಂದೂ ಅದು ಒತ್ತಾಯಿಸಿದೆ. ಇದನ್ನು ದೇಶದಾದ್ಯಂತ ಬೃಹತ್ ಪ್ರಮಾಣದಲ್ಲಿ ಪ್ರತಿಭಟಿಸಬೇಕು ಎಂದು ಈ ದೇಶದ ಜನಗಳನ್ನು ಮಹಾಧಿವೇಶನ ಆಗ್ರಹ ಪಡಿಸಿದೆ.

ಪೆಟ್ರೋಲಿಯಂ ಬೆಲೆಗಳ ಏರಿಕೆಗಳು ಹಣದುಬ್ಬರಕ್ಕೆ ಇಂಧನವಾಗುತ್ತಿವೆ, ಮತ್ತು ಆ ಮೂಲಕ ದುಡಿಯುವ ಜನರಿಂದ ಆಳುವ ವರ್ಗಗಳಿಗೆ ಮತ್ತು ಭಾರತ ಸರ್ಕಾರಕ್ಕೆ ಸಂಪನ್ಮೂಲಗಳ ದೊಡ್ಡ ಪ್ರಮಾಣದ ವರ್ಗಾವಣೆಯನ್ನು ಸೂಚಿಸುತ್ತವೆ. ಬಿಜೆಪಿ ನೇತೃತ್ವದ ಸರ್ಕಾರದ ಮೊದಲ ವರ್ಷವಾದ **2014–15ರಲ್ಲಿ ತೈಲ ವಲಯದಿಂದ ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹವು 0.74 ಲಕ್ಷ ಕೋಟಿಯಿದ್ದದ್ದು 2021–22ರಲ್ಲಿ ಸುಮಾರು 3.5 ಲಕ್ಷ ಕೋಟಿಗಳಿಗೆ ಏರಿದೆ. ಕೇಂದ್ರ ಸರ್ಕಾರದ ಆದಾಯದಲ್ಲಿ ಪೆಟ್ರೋಲಿಯಂ ತೆರಿಗೆಗಳ ಪಾಲು ಶೇ.5.4ರಿಂದ ಶೇ.12.2ಕ್ಕೆ ಏರಿದೆ.**

ಮಾರ್ಚ್ 22 ರಿಂದ ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಬೆಲೆಗಳು ಪ್ರತಿದಿನ ಹೆಚ್ಚುತ್ತಲೇ ಇವೆ. ಅಂದಿನಿಂದ ಈ ಮಹಾಧಿವೇಶನದ ಉದ್ಘಾಟನೆಯ ದಿನದ ವರೆಗೆ ಒಟ್ಟಾಗಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಕ್ರಮವಾಗಿ 10.83ರೂ. ಮತ್ತು 10.47 ರೂ. ಏರಿಕೆಯಾಗಿದೆ ಎಂದು ಈ ನಿರ್ಣಯ ಗಮನಿಸಿದೆ.

ಪೆಟ್ರೋಲಿಯಂ ಬೆಲೆಗಳ ನಿಯಂತ್ರಣವನ್ನು ತೆಗೆದುಹಾಕುವುದು ಮತ್ತು ತೈಲ ಮಡು (ಆಯಿಲ್ ಪೂಲ್) ಖಾತೆ ವ್ಯವಸ್ಥೆಯನ್ನು ದುರ್ಬಲಗೊಳಿಸುವುದರಿಂದ, ತೈಲ ಕಂಪನಿಗಳಿಗೆ ಚಿಲ್ಲರೆ ಬೆಲೆಗಳನ್ನು ನಿಗದಿಪಡಿಸಲು ಮುಕ್ತ ಅವಕಾಶವನ್ನು ಕೊಟ್ಟಂತಾಗಿದೆ. **ಆಯಿಲ್ ಪೂಲ್ ಖಾತೆಯಿಂದ ಸಬ್ಸಿಡಿ ನೀಡಲಾಗದ ರಿಲಯನ್ಸ್ ಪೆಟ್ರೋಲಿಯಂನಂತಹ ಚಿಲ್ಲರೆ ವಲಯಕ್ಕೆ ಹೊಸದಾಗಿ ಪ್ರವೇಶಿಸುವ ಖಾಸಗಿಯವರಿಗೆ ಅನುಕೂಲಗಳನ್ನು ನೀಡುವುದು ನಿಯಂತ್ರಣಗಳನ್ನು ತೆಗೆಯುವುದರ ಹಿಂದಿನ ನಿಜವಾದ ಉದ್ದೇಶವಾಗಿತ್ತು** ಎಂದು ಈ ನಿರ್ಣಯ ಹೇಳಿದೆ.


ಮಾರುಕಟ್ಟೆಗಳು ಬೆಲೆಗಳನ್ನು ನಿಗದಿಪಡಿಸುವುದು ಹೆಚ್ಚು ದಕ್ಷವಾದ ಕ್ರಮ ಎಂಬುದು ಈ ರೀತಿ ನಿಯಂತ್ರಣ ತೆಗೆಯಲು ಕೊಟ್ಟ ತೋರಿಕೆಯ ಕಾರಣ. ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಕಚ್ಚಾ ತೈಲದ ಮಾರುಕಟ್ಟೆ ಬೆಲೆಯಲ್ಲಿನ ಇಳಿಕೆಯಿಂದ ಜನರಿಗೆ ಯಾವುದೇ ಪ್ರಯೋಜನವನ್ನು ನಿರಾಕರಿಸುವ ಸಲುವಾಗಿ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರ ತೆರಿಗೆಗಳಲ್ಲಿ ಕೈಚಳಕ ನಡೆಸುತ್ತಿದೆ. ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಕೇಂದ್ರ ತೆರಿಗೆಗಳನ್ನು ಕ್ರಮವಾಗಿ 3.5 ಮತ್ತು 9 ಪಟ್ಟು ಹೆಚ್ಚಿಸಲಾಯಿತು. ಕಚ್ಚಾ ತೈಲದ ಅಂತರರಾಷ್ಟ್ರೀಯ ಬೆಲೆಗಳು ತೀವ್ರವಾಗಿ ಕುಸಿಯುತ್ತಿರುವುದರಿಂದ ಹೆಚ್ಚಿನ ತೆರಿಗೆಗಳಿಂದಾಗಿ ಚಿಲ್ಲರೆ ಬೆಲೆಗಳಲ್ಲಿ ಏರಿಕೆಯಾಗುವುದಿಲ್ಲ ಎಂದು ಈ ಸಾಟಿಯಿಲ್ಲದ ತೆರಿಗೆ ಹೆಚ್ಚಳವನ್ನು ಸಮರ್ಥಿಸಿಕೊಳ್ಳಲಾಯಿತು. ಅದೇ ತರ್ಕದ ಪ್ರಕಾರ ಈಗ ಅಂತರ್ರಾಷ್ಟ್ರೀಯ ಕಚ್ಚಾ ತೈಲದ ಬೆಲೆಗಳು ಏರಲಾರಂಭಿಸಿರುವಾಗ ಭಾರತ ಸರಕಾರ ತೆರಿಗೆಗಳನ್ನು ಹಿಂದಿನ ಮಟ್ಟಕ್ಕೆ ಇಳಿಸಬೇಕಾಗಿತ್ತು. ಇದರ ಪರಿಣಾಮವೆಂದರೆ ಇತ್ತೀಚಿನ ರಾಜ್ಯ ಚುನಾವಣೆಗಳ ಅವಧಿಯಲ್ಲಿ ಉದ್ದೇಶಪೂರ್ವಕವಾಗಿ ಹಾಕಿದ್ದ ಲಗಾಮನ್ನು ತೆಗೆದ ನಂತರ ಚಿಲ್ಲರೆ ಬೆಲೆಗಳು ಅಂತರಾಷ್ಟ್ರೀಯ ಕಚ್ಚಾ ತೈಲ ಬೆಲೆಗಳ ಮಟ್ಟಕ್ಕೆ ಏರಲಾರಂಭಿಸಿವೆ. ಈ ಪ್ರವೃತ್ತಿ ಕೋವಿಡೋತ್ತರ ಅವಧಿಯಲ್ಲಿ ಕಂಡು ಬಂದಿದ್ದು ಉಕ್ರೇನ್ ಬಿಕ್ಕಟ್ಟಿನ ಸಮಯದಲ್ಲಿ ತೀವ್ರ ಉಬ್ಬರ ವನ್ನು ಕಾಣುತ್ತಿದೆ.

ರಾಜ್ಯ ಸರ್ಕಾರಗಳು ರಾಜ್ಯ ತೆರಿಗೆಯನ್ನು ಕಡಿಮೆ ಮಾಡುವ ಮೂಲಕ ಜನರ ಮೇಲಿನ ಹೊರೆಯನ್ನು ತಗ್ಗಿಸಬೇಕು ಎಂದು ಬಿಜೆಪಿ ವಾದಿಸುತ್ತಿದೆ. ಆದರೆ ಕಚ್ಚಾ ತೈಲ ಬೆಲೆ ಕುಸಿದಾಗ ತೆರಿಗೆ ಹೆಚ್ಚಿಸಿದ್ದು ರಾಜ್ಯ ಸರ್ಕಾರಗಳಲ್ಲ ಕೇಂದ್ರ ಸರ್ಕಾರ. ಜನಗಳ ಒತ್ತಡದಿಂದಾಗಿ, ಕೇಂದ್ರ ಸರ್ಕಾರವು ನವೆಂಬರ್‌ನಲ್ಲಿ ತೆರಿಗೆ ಹೆಚ್ಚಳವನ್ನು ಭಾಗಶಃ ಹಿಂತೆಗೆದುಕೊಳ್ಳಲೇ ಬೇಕಾಯಿತು. ಈಗಲೂ ಸಹ, ಕೋವಿಡ್ ನಂತರದ ಚೇತರಿಕೆಯ ಉಸಿರುಗಟ್ಟಿಸುವ ಬೆಲೆ ಸುರುಳಿಯ ಅಪಾಯವನ್ನು ದೇಶವು ಎದುರಿಸುತ್ತಿರುವಾಗ, ಸರ್ಕಾರವು ವಿಧಿಸಿರುವ ಹೆಚ್ಚುವರಿ ತೆರಿಗೆಯನ್ನು ಸಂಪೂರ್ಣವಾಗಿ ಹಿಂಪಡೆಯಲು ನಿರಾಕರಿಸುತ್ತಿದೆ.

ಒಕ್ಕೂಟ ಸರಕಾರ ಕ್ರೋಢೀಕರಿಸಿದ ಹೆಚ್ಚುವರಿ ಆದಾಯ ವನ್ನು ರಾಜ್ಯ ಸರ್ಕಾರ ಗಳೊಂದಿಗೆ ಹಂಚಿಕೊಳ್ಳುವುದನ್ನು ತಪ್ಪಿಸಲು, ಹಂಚಿಕೊಳ್ಳಬಹುದಾದ ಸಂಗ್ರಹದ ವ್ಯಾಪ್ತಿಯಿಂದ ಹೊರಗಿರುವ ತೆರಿಗೆಗಳನ್ನು ಅವಲಂಬಿಸುತ್ತಿದೆ. 2018–19 ರ ಬಜೆಟ್‌ನಲ್ಲಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 9 ರೂ.ಗಳಷ್ಟು ಕಡಿಮೆಗೊಳಿಸಿದರೆ, ರಾಜ್ಯಗಳೊಂದಿಗೆ ಹಂಚಿಕೊಳ್ಳಲಾಗದ ರಸ್ತೆ ಸೆಸ್ ಅನ್ನು ಅದೇ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ನವೆಂಬರ್ 2021 ರಲ್ಲಿ, ತೆರಿಗೆಗಳನ್ನು ಕಡಿಮೆ ಮಾಡಲೇ ಬೇಕಾಗಿ ಬಂದಾಗ, ಬಿಜೆಪಿ ಸರ್ಕಾರವು ರಾಜ್ಯ ಸರಕಾರಗಳೊಂದಿಗೆ ಹಂಚಿ ಕೊಳ್ಳಬೇಕಾದ ಅಬಕಾರಿಯನ್ನು ಕಡಿಮೆ ಮಾಡಿತು.

ಪ್ರಸ್ತುತ ಪೆಟ್ರೋಲಿಯಂ ಬೆಲೆ ಏರಿಕೆಗೆ ರಾಜ್ಯ ಸರ್ಕಾರಗಳ ಕ್ರಮಗಳು ಯಾವುದೇ ರೀತಿಯಲ್ಲಿ ಕೊಡುಗೆ ನೀಡಿಲ್ಲ ಎಂಬ ಸಂಗತಿಯತ್ತವೂ ಗಮನ ಸೆಳೆದಿರುವ ಸಿಪಿಐ(ಎಂ)ನ 23ನೇ ಮಹಾಧಿವೇಶನ ಎನ್‌ಡಿಎ ಆಡಳಿತದ ಅವಧಿಯಲ್ಲಿ ಹೇರಲಾದ ಹೆಚ್ಚುವರಿ ತೆರಿಗೆಗಳನ್ನು ತಕ್ಷಣವೇ ಹಿಂಪಡೆಯುವಂತೆ ಆಗ್ರಹಿಸಿದೆ. ಸರ್ಕಾರವು ಶ್ರೀಮಂತರ ಮೇಲೆ ತೆರಿಗೆಯನ್ನು ಹೆಚ್ಚಿಸಬೇಕು, ನಿಯಂತ್ರಣಗಳನ್ನು ಹಾಕಬೇಕು ಮತ್ತು ಪೆಟ್ರೋಲ್ ಉತ್ಪನ್ನಗಳ ಚಿಲ್ಲರೆ ಬೆಲೆಗಳನ್ನು ಇಳಿಸಬೇಕು ಮತ್ತು ಪೆಟ್ರೋಲಿಯಂ ರಂಗದಲ್ಲಿ ಸಾರ್ವಜನಿಕ ವಲಯದ ಉದ್ಯಮಗಳ ಖಾಸಗೀಕರಣವನ್ನು ನಿಲ್ಲಿಸಬೇಕು ಎಂದು ಅದು ಒತ್ತಾಯಿಸಿದೆ.

ತಮ್ಮ ಜೀವನೋಪಾಯದ ಮೇಲೆ ಅಭೂತಪೂರ್ವ ಹಲ್ಲೆಗಳ ಬೆನ್ನು ಮುರಿವ ಪರಿಣಾಮಗಳಿಂದ ನರಳುತ್ತಿರುವ ಈ ದೇಶದ ಜನಗಳು ಇದನ್ನು ದೇಶದಾದ್ಯಂತ ಬೃಹತ್ ಪ್ರಮಾಣದಲ್ಲಿ ಪ್ರತಿಭಟಿಸಬೇಕು ಎಂದು ಸಿಪಿಐ(ಎಂ)ನ 23ನೇ ಮಹಾಧಿವೇಶನ ಆಗ್ರಹ ಪಡಿಸಿದೆ.



ಡಾ..ಥಾಮಸ್ ಐಸಾಕ್ ಮಂಡಿಸಿದರು, ಸ್ವದೇಶ ದೇಬ್‌ರಾಯ್ ಅನುಮೋದಿಸಿದ ಈ ನಿರ್ಣಯವನ್ನು ಮಹಾಧಿವೇಶನ ಸರ್ವಾನುಮತದಿಂದ ಅಂಗೀಕರಿಸಿತು.

ಸಂಪಾದಕೀಯ

ಬೇಜವಾಬ್ದಾರಿ ಗೃಹಮಂತ್ರಿ ಅಧಿಕಾರದಲ್ಲಿರಬೇಕೇ?

ಕೇಂದ್ರ ಸರಕಾರದ ಮಟ್ಟದಲ್ಲಿ ಆಗಲಿ ಅಥವಾ ರಾಜ್ಯದಲ್ಲಿಯೇ ಆಗಲಿ ಗೃಹ ಇಲಾಖೆ ಅತ್ಯಂತ ಪ್ರಮುಖವಾದದ್ದು. ನಮ್ಮ ಸಂವಿಧಾನದ ಪ್ರಕಾರ ಕಾನೂನು–ಸುವ್ಯವಸ್ಥೆ ರಾಜ್ಯಗಳ ಹೊಣೆಗಾರಿಕೆಯಾಗಿದೆ. ಹೀಗಾಗಿ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ, ಕಾನೂನುಬದ್ಧ ಆಡಳಿತದ ಕಾರ್ಯನಿರ್ವಹಣೆಯನ್ನು ಜತನದಿಂದ ಕಾಪಾಡಿಕೊಂಡು ನಾಗರಿಕರ ಪ್ರಾಣ ಮತ್ತು ಆಸ್ತಿಯನ್ನು ಸಂರಕ್ಷಿಸಿ ಸಮರ್ಥವಾಗಿ ಕಾರ್ಯ ನಿರ್ವಹಿಸುವ ಬಹುದೊಡ್ಡ ಜವಾಬ್ದಾರಿ ಗೃಹ ಇಲಾಖೆಗೆ ಇರುತ್ತದೆ. ಹಿಂದೆಲ್ಲಾ ಮುಖ್ಯಮಂತ್ರಿಯವರಷ್ಟೇ ದಕ್ಷತೆ ಮತ್ತು ಪ್ರಾಮುಖ್ಯತೆಯಿಂದ ಕೆಲಸ ಮಾಡಿದ ಹಲವಾರು ಗೃಹ ಸಚಿವರುಗಳನ್ನು ನಾವು ಕಂಡಿದ್ದೇವೆ. ಆದರೆ ಬಿಜೆಪಿ ಸರ್ಕಾರಗಳು ಅಧಿಕಾರಕ್ಕೆ ಬಂದಿರುವಾಗಲೆಲ್ಲಾ ರಾಜ್ಯದಲ್ಲಿ ಅಂತಹ ಬದ್ಧತೆ ಮತ್ತು ಸೂಕ್ಷ್ಮ ಸಂವೇದನೆ ಇರುವವರನ್ನು ನೇಮಿಸುವ ಪರಿಪಾಠ ತೀರಾ ವಿರಳವಾಗಿದೆ. ಬಹುತೇಕವಾಗಿ ಸಂಘಪರಿವಾರದ ಆಜ್ಞೆಗಳನ್ನು ಪಾಲಿಸುವ ಕೈಗೊಂಬೆಗಳನ್ನೇ ನೇಮಿಸಲಾಗುತ್ತದೆ ಎನ್ನುವ ಆರೋಪಗಳನ್ನು ಸುಲಭವಾಗಿ ತಳ್ಳಿಹಾಕುವಂತೆಯೂ ಇಲ್ಲ.

ಅದರಲ್ಲೂ ಈ ಬಾರಿಯಂತೂ ಬಸವರಾಜ ಬೊಮ್ಮಾಯಿಯವರನ್ನು ಅಧಿಕಾರಕ್ಕೆ ತಂದ ನಂತರ ಗೃಹ ಇಲಾಖೆಯ ಮಂತ್ರಿಯಾಗಿರುವ ಆರಗ ಜ್ಞಾನೇಂದ್ರ ರವರು ತಮ್ಮ ನಡೆ ನುಡಿಗಳಿಂದ ಅಪ್ರಬುದ್ಧರು ಮತ್ತು ಸಾಮಾಜಿಕ ಸೂಕ್ಷ್ಮತೆ, ಸಂವಿಧಾನ ಬದ್ಧತೆ ಇಲ್ಲದವರು ಎನ್ನುವುದನ್ನು ಹೆಜ್ಜೆಗಳಲ್ಲಿ ತೋರಿಸುತ್ತಿದ್ದಾರೆ. ಹೀಗಾಗಿ ಅತ್ಯಂತ ಅಪ್ರಬುದ್ಧ ಬೆನ್ನೆಲುಬಿಲ್ಲದ ಮಂತ್ರಿಯ ಬಗ್ಗೆ ಮತ್ತು ಸಂಘಪರಿವಾರದ ಸುಪರ್ದಿಗೆ ಇಲಾಖೆಯನ್ನು ಒಪ್ಪಿಸಿ ಬಿಟ್ಟಿರುವ ಅನುಮಾನ, ಆರೋಪಗಳು ಬರುತ್ತಲೇ ಇವೆ. ಅವರು ಗೃಹ ಸಚಿವರಾದ ಅಂದಿನಿಂದ ಇಂದಿನವರೆಗೆ ಅತ್ಯಂತ ಸೂಕ್ಷ್ಮ ಮತ್ತು ನಿರ್ಣಾಯಕವಾದ ಸಂದರ್ಭಗಳಲ್ಲಿ ಬೇಜವಾಬ್ದಾರಿತನ, ಸಂಕುಚಿತತೆ, ಪಕ್ಷಪಾತತೆ ಮತ್ತು ಸ್ಥಾನಕ್ಕೆ ತಕ್ಕುದಲ್ಲದ ರೀತಿಯಲ್ಲಿ ಅವರು ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ಸಂವಿಧಾನ ಮತ್ತು ಕಾನೂನುಬದ್ಧ ಆಡಳಿತವನ್ನು, ಶಾಂತಿ, ಸುರಕ್ಷತೆ, ಸಾಮರಸ್ಯವನ್ನು ಕಾಪಾಡಿಕೊಳ್ಳುವ ಪ್ರಮಾಣವಚನವನ್ನು ಧಿಕ್ಕರಿಸಿದ್ದಾರೆ.

ಅತ್ಯಂತ ಪ್ರಮುಖ ಖಾತೆ ಯಾಗಿರುವ ಗೃಹ ಖಾತೆಯ ಸಚಿವರು ಮತ್ತು ಸಂಪುಟದ ಇಂತಹದೇ ಇತರ ಮಂತ್ರಿಗಳ ವರ್ತನೆಗಳು ಆಡಳಿತ ವ್ಯವಸ್ಥೆಯನ್ನು ಸಿಥಿಲಗೊಳಿಸುತ್ತವೆ. ಹಲವು ಓರೆಕೋರೆಗಳ ನಡುವಿನಲ್ಲಿಯೂ ಕರ್ನಾಟಕದ ಪೊಲೀಸರು, ಗೃಹ ಇಲಾಖೆ ವೃತ್ತಿಪರತೆ, ಕಾನೂನಿನ ನಿಷ್ಠತೆಯಲ್ಲಿ ದೇಶದಲ್ಲಿ ಒಂದು ಒಳ್ಳೆಯ ಹೆಸರನ್ನು ಪಡೆದಿತ್ತು. ಆದರೀಗ ನಿಧಾನಕ್ಕೆ ಪೊಲೀಸ್ ಇಲಾಖೆಯಲ್ಲಿ ಸಂವಿಧಾನ, ಕಾನೂನು ಬದ್ಧತೆ ಮತ್ತು ನಾಗರೀಕ ನಿಷ್ಠ ಹೊಣೆಗಾರಿಕೆಯನ್ನು ಧಿಕ್ಕರಿಸುವ ವರ್ತನೆಗಳು ಪುನರಾವರ್ತನೆಯಾಗುವುದು, ಆಳುವ ಪಕ್ಷಕ್ಕೆ ಮತ್ತು ಸರ್ಕಾರೇತರ ಶಕ್ತಿಗಳ ಅಣತೆಗಳಿಗೆ ತಲೆಬಾಗುವುದು ರೂಢಿಯಾಗುತ್ತಿರುವುದು ಅತ್ಯಂತ ಅಪಾಯಕಾರಿ ಸೂಚನೆಯಾಗಿದೆ.

ಸಮಾಜದಲ್ಲಿ ಉಂಟಾದ ತ್ವೇಷ ತಗ್ಗಿಸಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದು, ಎಲ್ಲಾ ನಾಗರೀಕರ ಆಸ್ತಿ ಮತ್ತು ಜೀವವನ್ನು ಕಾಪಾಡುವುದು ಗೃಹ ಇಲಾಖೆಯ, ಅದರ ಸಚಿವರ ಜವಾಬ್ದಾರಿ. ಆದರೆ ಇತ್ತೀಚಿನ ದಿನಗಳಲ್ಲಿ ಅವೆಲ್ಲದಕ್ಕೂ ವಿರುದ್ಧವಾಗಿ ಬಜರಂಗದಳ ಅಥವಾ ಸಂಘಪರಿವಾರದ ಕಾರ್ಯಕರ್ತನಂತೆ ಆರಗ ಜ್ಞಾನೇಂದ್ರರವರು ಮಾತನಾಡುತ್ತಿರುವುದು ಶೋಭೆ ತರುವ ವಿಚಾರವಲ್ಲ.

ಇತ್ತೀಚೆಗೆ ಬೆಂಗಳೂರಿನ ಜೆ.ಜೆ. ನಗರದಲ್ಲಿ ಎರಡು ಬೈಕುಗಳು ಪರಸ್ಪರ ಡಿಕ್ಕಿಯಾಗಿ ಒಬ್ಬ ಸಾವಿಗೀಡಾದ ಪ್ರಕರಣವನ್ನು ಹೇಗೆ ಬಳಸಿಕೊಳ್ಳಲು ಪ್ರಯತ್ನಿಸಲಾಯಿತು ಎನ್ನುವುದನ್ನೇ ಗಮನಿಸಬಹುದು. ಸವಾರರಿಬ್ಬರ ನಡುವೆ ನಡೆದ ವಾಗ್ವಾದ ಅತಿರೇಕಕ್ಕೆ ತಿರುಗಿ ಶಾಹಿದ್ ಎನ್ನುವಾತ ಇನ್ನೊಂದು ಬೈಕನ್ನು ಚಲಾಯಿಸುತ್ತಿದ್ದ ಚಂದ್ರಶೇಖರ್ ಎನ್ನುವಾತನಿಗೆ ಚೂರಿಯಿಂದ ಕಾಲಿಗೆ ಚುಚ್ಚಿದ ಪ್ರಸಂಗವೊಂದು ನಡೆದಿದೆ. ಆ ಯುವಕ ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾನೆ. ಈ ಪ್ರಕರಣದ ಬಗ್ಗೆ ವಿಧಾನಸಭೆಯಲ್ಲಿ ವಿವರಣೆ ನೀಡುತ್ತಾ 'ಉರ್ದು ಭಾಷೆ ಮಾತನಾಡದ ಕಾರಣಕ್ಕೆ ದಲಿತ ಯುವಕನನ್ನು ತಿವಿದು ಕೊಲ್ಲಲಾಗಿದೆ' ಎನ್ನುವ ಮಾತನ್ನು ಗೃಹಸಚಿವ ಅರಗ ಜ್ಞಾನೇಂದ್ರ ರವರು ಆಡಿದ್ದಾರೆ. ಇದು ಎರಡು ಕೋಮುಗಳ ನಡುವಿನ ಜಗಳ, ದ್ವೇಷ ಕಾರಣ ಎನ್ನುವ ರೀತಿಯಲ್ಲಿ ಆ ಮಾತು ಅರ್ಥ ಹೊರಡಿಸುತ್ತದೆ. ಇದು ಸರಿಯಾದ ಮಾಹಿತಿ ಅಲ್ಲ. ಒಂದು ವೇಳೆ ಇಂತಹ ಸೂಕ್ಷ್ಮ ಮಾಹಿತಿಯನ್ನುವಿಧಾನಸಭೆಯೊಳಗೆ ಹಂಚಿಕೊಳ್ಳಬೇಕಾದಾಗ ಅದರ ಸತ್ಯಾಸತ್ಯತೆಯ ಖಚಿತತೆಯನ್ನು ಪಡೆದಿರಬೇಕು. ಮೇಲಾಗಿ ಅದು ಸಮಾಜದ ಸ್ವಾಸ್ಥ್ಯತೆಯ ಮೇಲೆ ಬೀರುವ ಪರಿಣಾಮಗಳನ್ನು ಸರಿಯಾಗಿ ಗ್ರಹಿಸಬೇಕು. ಆದರೆ ಇಂತಹ ಯಾವ ಹೊಣೆಗಾರಿಕೆ ಇಲ್ಲದೆ ಗೃಹಸಚಿವರು ಬೇಕಾಬಿಟ್ಟಿ ಆಡಿರುವುದು ಅತ್ಯಂತ ಗಂಭೀರ ವಿಷಯ. ಇದರಿಂದಾಗಿ ಈಗಾಗಲೇ ರಾಜ್ಯದಲ್ಲಿ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಗೆ ಮತ್ತಷ್ಟು ಪೆಟ್ರೋಲ್ ಸುರಿದಂತೆ ಆಗಲಿತ್ತು. ಇವರು ನೀಡಿದ ಕಾರಣ ವದಂತಿಯಾಗಿ ರಾಜ್ಯದಾದ್ಯಂತ ಎಲ್ಲಾ ಮಾಧ್ಯಮಗಳಲ್ಲಿ ಪ್ರಸಾರವಾಗಿ ಬಿಟ್ಟಿತ್ತು. ಅಷ್ಟರಲ್ಲಿ ಪೊಲೀಸ್ ಇಲಾಖೆ ತನ್ನ ತನಿಖೆಯ ಬಳಿಕ 'ಇದು ಎರಡು ಬೈಕ್ ಸವಾರರುಗಳ ನಡುವೆ ನಡೆದಿರುವ ಡಿಕ್ಕಿ. ನಂತರದ ಬೆಳವಣಿಗೆ ವೈಯುಕ್ತಿಕ ಕಾರಣದಿಂದಾದ ಜಗಳ' ಎಂದು ಸ್ಪಷ್ಟಪಡಿಸಿದ್ದಾರೆ. ಆದರೇನು? ಒಂದು ಪ್ರಮುಖ ವೇದಿಕೆಯಲ್ಲಿ ಪ್ರಮುಖ ಸಚಿವರ ಮಾತುಗಳು ವದಂತಿಯಾಗಿ ಎಲ್ಲ ಕಡೆಗಳಲ್ಲಿ ಪಸರಿಸಿತ್ತು. ಆಶಾದಾಯಕ ಸ್ಥಿತಿ ಎಂದರೆ ಜನತೆ ಇಂತಹುದಕ್ಕೆ ಉದ್ರಿಕ್ತ ವಾಗಿ ಪ್ರತಿಕ್ರಿಯಿಸಲಿಲ್ಲ ಎನ್ನುವುದು.



ಇಲ್ಲಿ ಒಂದು ಪ್ರಶ್ನೆ ಬರುವುದೆಂದರೆ ಪೊಲೀಸ್ ಇಲಾಖೆಯ ಸೂಕ್ತವಾದ ತನಿಖೆಯ ನಂತರದಲ್ಲಿ ಮಾಹಿತಿಗಳನ್ನು ಪಡೆಯುವ ಮೊದಲೇ ಇಂತಹ ಕಪೋಲಕಲ್ಪಿತ ವದಂತಿಯನ್ನು

ಪುಟ 4 ಕ್ಕೆ

ಸಚಿವ ಸಂಪುಟವನ್ನು ವಿಸ್ತರಣೆಗೆ ಪಟ್ಟಿ ಹಿಡಿದು ದೆಹಲಿಗೆ ಹೋಗಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬರಿಗೈಯಲ್ಲಿ ವಾಪಸ್ಸಾಗಿದ್ದಾರೆ. ಸಚಿವಾಕಾಂಕ್ಷಿಗಳಾಗಿ ದೆಹಲಿಯಲ್ಲಿ ಬೀಡುಬಿಟ್ಟಿದ್ದ ಅನೇಕರಿಗೆ ನಿರಾಶೆಯಾಗಿದೆ. ಸಚಿವ ಸಂಪುಟದ ವಿಸ್ತರಣೆಯ ಜೊತೆಯಲ್ಲಿ ಪುನರ್ರಚನೆಯ ಪ್ರಸ್ತಾವವು ಬಹಳದಿನಗಳಿಂದ ಚರ್ಚೆಯಾಗುತ್ತಲೇ ಇದೆ. ಅಂತಹವರಿಗೆ ಈ ಮುಂದೂಡಿಕೆ ಒಂದಿಷ್ಟು ಸಮಾಧಾನವನ್ನು ತಂದಿದೆ. ಇದೇ ತಿಂಗಳು 16 ಮತ್ತು 17 ರಂದು ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ನಡೆಯಲಿರುವ ರಾಜ್ಯ ಕಾರ್ಯಕಾರಣಿ ಸಭೆಯ ನಂತರ ಈ ಕುರಿತು ಚಿಂತಿಸೋಣ ಎಂದು ಹೈಕಮಾಂಡ್ ಹೇಳಿ ಬೊಮ್ಮಾಯಿಯವನ್ನು ವಾಪಾಸು ಕಳಿಸಿದೆ.

ಹಳೆಯ ಗಾದೆ ಮಾತಿನಂತೆ 'ರೋಮ್ ಸಾಮ್ರಾಜ್ಯ ಹೊತ್ತಿ ಉರಿಯುವಾಗ ನೀರೋ ಪೀಟಿಲು ಬಾರಿಸುತ್ತಿದ್ದ' ಎನ್ನುವಂತೆ ಮುಖ್ಯಮಂತ್ರಿಯವರು ಕರ್ನಾಟಕ ರಾಜ್ಯದಲ್ಲಿ ಕೋಮುದ್ವೇಷದ ಕಿಡಿಗಳು ಸಿಡಿಯುತ್ತಿರುವಾಗ ಮತ್ತು ಕ್ಯಾಬಿನೆಟ್ ಸಚಿವರಿಂದ ಹಿಡಿದು ಪಕ್ಷದ ನಾಯಕರು, ಸಂಘಪರಿವಾರದ ಅಂಗ ಸಂಸ್ಥೆಗಳ ಪ್ರಮುಖರು ಪ್ರತಿನಿತ್ಯವೂ ಕೋಮುದ್ವೇಷ ಹೆಚ್ಚಿಸಿ ಸಾಮರಸ್ಯ ಕೆಡಿಸುವ ಕೃತದಯಗಳ್ಳಿ ತೊಡಗಿದ್ದಾರೆ. ಇವರಿಗೆ ವಿವೇಕ ಹೇಳಬೇಕಾದ ಪರಿವಾರಸ ಪ್ರಮುಖರು ಕುಮ್ಮಕ್ಕು ನೀಡುತ್ತಿದ್ದಾರೆ. ರಾಜ್ಯದ ಆರ್ಥಿಕತೆಯು ಕುಸಿದಿದೆ. ಹೊಸ ಸಾಧನೆಗಳನ್ನು ಮಾಡಬೇಕಿರುವಾಗ ಮುಖ್ಯಮಂತ್ರಿ ಬೊಮ್ಮಾಯಿ ಯವರು ಕೇವಲ ನವಕರ್ನಾಟಕದ ನಿರ್ಮಾಣಕ್ಕೆ ವಿದೇಶಿ ಸಾಲ, ಹೂಡಿಕೆ ಬಂದರೆ ಸಾಕು ಎನ್ನುವ ಸಮಾಧಾನದಲ್ಲಿ ಇದ್ದಂತೆ ಕಾಣುತ್ತದೆ. ಇಂತಹ ಸನ್ನಿವೇಶದಲ್ಲಿ ಸಚಿವರಾಗಲು ಮುಖ್ಯಮಂತ್ರಿಯವರ ಮೇಲೆ ಸಂಪುಟವನ್ನು ವಿಸ್ತರಿಸಲು ಕೆಲವರು ಸತತ ಒತ್ತಾಯಿಸುತ್ತಲೇ ಇದ್ದಾರೆ. ಕೇವಲ ಒಬ್ಬರಲ್ಲ ಅಧಿಕಾರದಾಹಿಗಳು ಹಲವು ಹನ್ನೊಂದು ನಾಯಕರಿದ್ದಾರೆ. ಅಧಿಕಾರ ಅನುಭವಿಸುವ ಲಾಲಸೆ ಯಲ್ಲಿ ಮಗ್ನರಾಗಿದ್ದಾರೆ.

ಸಚಿವ ಸಂಪುಟ ವಿಸ್ತರಣೆ ಮತ್ತು ಪುನರ್ರಚನೆ ಎನ್ನುವುದು ನುಂಗಲೂ ಆಗದ, ಉಗುಳಲೂ ಬಾರದ ಬಿಸಿ

ಸಂಪುಟ ವಿಸ್ತರಣೆಯ ಒಣ ಕಸರತ್ತು

ಎಸ್.ವೈ. ಗುರುಶಾಂತ್

ಈ ವಾರ

ತುಪ್ಪದಂತೆ ಬೊಮ್ಮಾಯಿ ಅವರ ಬಾಯಲ್ಲಿ ಮಳಲುತ್ತಿದೆ. ರಮೇಶ್ ಜಾರಕಿಹೊಳಿ, ರೇಣುಕಾಚಾರ್ಯ, ಬಸವರಾಜ ಪಾ. ಯತ್ನಾಳ ಅವರನ್ನು ಒಳಗೊಂಡಂತೆ ಹಲವು ಶಾಸಕರು ಸಚಿವ ಹುದ್ದೆಯ ತೀವ್ರ ಆಕಾಂಕ್ಷಿಗಳಾಗಿದ್ದಾರೆ. ಮತ್ತು ಮುಖ್ಯಮಂತ್ರಿಯವರ ಮೇಲೆ ಸತತ ಒತ್ತಡವನ್ನು ಹಾಕುತ್ತಿದ್ದಾರೆ. ಅದರಲ್ಲೂ ರಮೇಶ್ ಜಾರಕಿಹೊಳಿ ತಮ್ಮನ್ನು ಸಂಪುಟಕ್ಕೆ ಸೇರಿಸಿಕೊಳ್ಳದೇ ಇದ್ದರೆ ತನ್ನ ಬೆಂಬಲಿಗರೊಂದಿಗೆ ಪಕ್ಷವನ್ನೇ ತೊರೆಯುವ ಬೆದರಿಕೆಯನ್ನು ಪರೋಕ್ಷವಾಗಿ ಹಾಕುತ್ತಲೇ ಬರುತ್ತಿದ್ದಾರೆ. ಇಂತಹ ಕನಿಷ್ಠ 10 ಸಚಿವಾಕಾಂಕ್ಷಿ ಗಳಿಗೆ ಸ್ಥಾನ ಕಲ್ಪಿಸಿ ಕೊಡಬೇಕೆಂದರೆ ಕೆಲವರನ್ನು ತೆಗೆಯಲೇ ಬೇಕಾದ ಅನಿವಾರ್ಯತೆಯಿದೆ. ಬಿಜೆಪಿಯ ಹೈಕಮಾಂಡ್ ಚುನಾವಣೆಯನ್ನು ಗಮನದಲ್ಲಿರಿಸಿ ಪಕ್ಷದ ಸಂಘಟನೆ ಮತ್ತು ಹೊಸ ಮುಖಗಳನ್ನು ಪರಿಚಯಿಸಬೇಕು ಎನ್ನುವ ದೃಷ್ಟಿಯಲ್ಲಿ ಕೆ.ಎಸ್. ಈಶ್ವರಪ್ಪ, ಆರ್. ಅಶೋಕ್ ಮುಂತಾದವರನ್ನು ಸಚಿವ ಸ್ಥಾನದಿಂದ ಬಿಡಿಸಿ ಅವರನ್ನು ಪಕ್ಷದ ಸಂಘಟನೆಯ ಕೆಲಸಗಳಿಗೆ ತೊಡಗಿಸಬೇಕು ಎನ್ನುವ ಇಂಗಿತವನ್ನು ಎಂದೋ ಕೊಟ್ಟಾಗಿದೆ. ಆ ಕಾರಣದಿಂದಲೇ ಕೆ.ಎಸ್. ಈಶ್ವರಪ್ಪ ನಂತಹವರು ತಮ್ಮ ಕಟ್ಟರ್ ಹಿಂದುತ್ವವಾದವನ್ನು ಪ್ರದರ್ಶಿಸುತ್ತಾ ಆರ್.ಎಸ್.ಎಸ್. ಅನ್ನು ಮೆಚ್ಚಿಸಲು ಇನ್ನಿಲ್ಲದಂತೆ ಉಗ್ರವಾದಿಗಳಾಗಿ ವರ್ತಿಸುತ್ತಿರುವುದು ಗೊತ್ತಿರುವ ಸಂಗತಿ.

ಬಿಜೆಪಿಯಲ್ಲಿ ಸಚಿವರ ದಕ್ಷತೆ ಹೆಚ್ಚು ಗಣನೆಗೆ ಬರುವುದಿಲ್ಲ. ಮೇಲಾಗಿ ಮೋದಿ ಸಂಪುಟದಲ್ಲಾಗಲಿ ಅಥವಾ ಬೊಮ್ಮಾಯಿ ಅವರ ಸಂಪುಟದಲ್ಲಾಗಲೀ ಮಂತ್ರಿಗಳು ನಾಮಕಾವಸ್ಥೆ ಹುದ್ದೆ ಅಲಂಕರಿಸಿ ಓಡಾಡುವುದನ್ನು ಬಿಟ್ಟರೆ ಅವರವರ ಇಲಾಖೆಯಲ್ಲಿ ಅತ್ಯುತ್ತಮವಾದ ರೀತಿಯಲ್ಲಿ ಕಾರ್ಯನಿರ್ವಹಿಸಿ ಜನತೆಗೆ ಸೇವೆ ಸಲ್ಲಿಸಲು ತೊಡಗುವುದು ಒಂದು ವಿರಳ ಸಂಗತಿಯಾಗಿ ಬಿಟ್ಟಿದೆ. ಎಲ್ಲವೂ ಕೆಲವರಲ್ಲೇ ಕೇಂದ್ರೀಕರಣಗೊಂಡು ಸಂಘವೇ ಎಲ್ಲವನ್ನೂ ನಿಯಂತ್ರಿಸುತ್ತದೆ, ನಿರ್ದೇಶಿಸುತ್ತದೆ. ಜನತೆಗೆ ಮಂತ್ರಿಗಳಿಂದ ಪರಿಹಾರ ಸಿಗುತ್ತದೆ ಬಿಡುತ್ತದೆಯೋ,ಇಲ್ಲವೋ ಬೇರೆ ವಿಷಯ. ಆದರೆ ತಮಗೆ ಒಂದಿಷ್ಟು ಆದಾಯ ತರುವ ಖಾತೆಗಳು ಅಥವಾ ಸಚಿವರಾಗಿ, ಜಿಲ್ಲೆಯ ಉಸ್ತುವಾರಿ ಗಳಾಗಿ, ಒಂದಿಷ್ಟು ದುಡ್ಡು ದೋಚುವ ಅವಕಾಶಕ್ಕೆ ಕಾಯುವವರೇ ಹೆಚ್ಚಾಗಿದ್ದಾರೆ.

ವಿಚಿತ್ರವೆಂದರೆ, ಹಿಂದೆ ಯಡಿಯೂರಪ್ಪನವರ ಸಂಪುಟವೇ ಆಗಿರಲಿ ಅಥವಾ ಬೊಮ್ಮಾಯಿ ಅವರ ಆಗಿರಲಿ ಇದುವರೆಗೂ ಬಿಜೆಪಿ ಒಂದು ಸ್ಥಿರವಾದ ಸರ್ಕಾರವನ್ನು, ಸದೃಢವಾದ ಸಂಪುಟವನ್ನು ರಚಿಸುವುದಾಗಿರಲಿ, ಉತ್ತಮ ಆಡಳಿತ ನೀಡುವುದಾಗಲಿ ಆಗಿಲ್ಲ. ಕೇವಲ ಕಾಲಹರಣ ಮತ್ತು ರಾಜ್ಯದ ಲೂಟಿ. ಇವೆರಡೂ ಅಭಾಧಿತವಾಗಿರಲು ಸಮಾಜದ ಒಳಗಡೆಯಲ್ಲಿ ದ್ವೇಷವನ್ನು ಹುಟ್ಟುಹಾಕುವ ಅಪಾಯಕಾರಿ ವರ್ತನೆಗಳು ಸರ್ಕಾರದ ಸಾಧನೆ ಎನ್ನುವಂತೆ ಆಗಿದೆ.

ಸಚಿವ ಸಂಪುಟ ವಿಸ್ತರಿಸುವುದಾಗಲೀ, ಪುನರ್ ಸಂಘಟಿಸುವುದಾಗಲೀ, ಅಥವಾ ಯಥಾರೀತಿ ಮುಂದುವರೆಯುವುದು ಕೂಡ ಅತೃಪ್ತಿ ಮತ್ತು ಅಭದ್ರತೆ ಎನ್ನುವುದು ಬಸವರಾಜ ಬೊಮ್ಮಾಯಿ ಅವರಿಗೆ ಕಟ್ಟಿಟ್ಟ ಬುತ್ತಿ. ಬಿಜೆಪಿಗೂ ಸಂಕಷ್ಟವೇ. ಹೀಗಾಗಿ ಹೈಕಮಾಂಡ್ ಕೂಡ ಎಚ್ಚರಿಕೆಯ ಹೆಜ್ಜೆಗಳನ್ನು ಇರಿಸುತ್ತಿದೆ. ಆದರೆ ಅಧಿಕಾರದ ಲಾಲಸೆ, ಗದ್ದುಗೆಯ ಸುತ್ತ ಸುತ್ತುವ ಪೀಡಕ ಗ್ರಹಗಳೇ ತುಂಬಿರುವಾಗ ಅಂತಿಮವಾಗಿ ಜನತೆಗೆ ಉತ್ತಮ ಆಡಳಿತ ಮರೀಚಿಕೆ.

ದುರ್ಬುದ್ಧಿಯ ಸರಣಿಯಲ್ಲಿ ಈಗ ದೇವರ ಪ್ರಾರ್ಥನೆ!

ಸಂಘ ಪರಿವಾರದ ಖ್ಯಾತೆಗಳು ಈ ವಾರವೂ ಮುಂದುವರಿದಿವೆ ಅಲ್ಪಸಂಖ್ಯಾತರ ಅದರಲ್ಲೂ ವಿಶೇಷವಾಗಿ ಮುಸ್ಲಿಮರ ಮೇಲೆ ನಡೆಸುತ್ತಿರುವ ಸರಣಿ ಧಾಳಿಗಳ ಸಾಲಿನಲ್ಲಿ ಬೆಳಗಿನ ಜಾವ ಪ್ರಾರ್ಥನೆಯ ಅಜಾನ್ ಕೂಗದಂತೆ ನಿರ್ಬಂಧಿಸಬೇಕು ಎನ್ನುವುದು ಸೇರಿದೆ. ಮಸೀದಿಗಳಲ್ಲಿ ಧ್ವನಿವರ್ಧಕದ ಮೂಲಕ ಅಸ್ಸಾಂ ಹೋಗುವುದರ ಬಗ್ಗೆ ಇರುವ ವಿವಾದಗಳು ನ್ಯಾಯಾಲಯದ ಮೆಟ್ಟಿಲನ್ನೂ ಇರುವೆ ಅಲ್ಲಿಂದ ತೀರ್ಪು ಕೂಡ ಬಂದಿವೆ ಎನ್ನುವುದು ನಿಜ ಇಂತಹ ಪ್ರಶ್ನೆಗಳನ್ನು ಅದರ ಜಾರಿ ಮಾಡುವಾಗ ಸರ್ಕಾರಗಳೇ ಸೂಕ್ತವಾದ ಕ್ರಮವಹಿಸುವುದು ಅದರ ಹೊಣೆಗಾರಿಕೆಯಾಗಿದೆ. ಇದ್ದಕ್ಕಿದ್ದಂತೆ ಇದರಲ್ಲಿ ಸರ್ಕಾರೇತರ ಶಕ್ತಿಗಳು ಮಧ್ಯಪ್ರವೇಶಿಸಿ ವಿವಾದಗಳನ್ನು ಹುಟ್ಟಿಸುವುದರ ಅರ್ಥವೇನು? ಸರ್ಕಾರ ತಾನು ಮಾಡಬೇಕಾದ ಕನಿಷ್ಠ ಕರ್ತವ್ಯಗಳನ್ನು ಇಂತಹ ಶಕ್ತಿಗಳಿಗೆ ವಹಿಸಿಕೊಟ್ಟಿದೆಯೇ ಅಥವಾ ಶಾಮಿಲು ಆಗಿದೆಯೇ?

ಇದೇ ಏಪ್ರಿಲ್ 3 ರಿಂದ ರಂಜಾನ್ ಪವಿತ್ರ ಉಪವಾಸ ಆರಂಭಗೊಂಡಿದೆ. ಅಲ್ಲಾಹು ದೇವರ ಸ್ಮರಣೆ, ಧಾರ್ಮಿಕ ವಿಧಿಗಳ ಆಚರಣೆ, ತ್ಯಾಗ, ಸಹಬಾಳ್ವೆಯ ಸಂದೇಶವನ್ನು ಸಾರುವ

ಪುಟ 4 ಕ್ಕೆ



ವಿದ್ಯುತ್ ದರ ಏರಿಕೆ- ಸಿಪಿಐ(ಎಂ) ವಿರೋಧ

ಪ್ರತಿ ಯುನಿಟ್ ವಿದ್ಯುತ್ ಬೆಲೆಯನ್ನು 10 ಪೈಸೆಗಳಿಂದ 20 ಪೈಸೆಗೆ ಮತ್ತು ವಾಣಿಜ್ಯಬಳಕೆಯ ವಿದ್ಯುತ್ ನ್ನು 15 ಪೈಸೆಯಿಂದ 25 ಪೈಸೆಗೆ ಹೆಚ್ಚಳ ಮಾಡುವ ಮೂಲಕ ಜನ ಸಾಮಾನ್ಯರ ಮೇಲೆ ಮತ್ತೊಂದು ಹೊರೆಯನ್ನು ಹೇರಲು ಮುಂದಾದ ವಿದ್ಯುತ್ ಕಂಪನಿಗಳ ಕ್ರಮವನ್ನು ಸಿಪಿಐಎಂ ತೀವ್ರವಾಗಿ ಖಂಡಿಸುತ್ತದೆ ಮತ್ತು ಇದು ಜನತೆಯ ಮೇಲೆ ಎರಡು ರೀತಿಯ ತೆರಿಗೆಯ ಬರೆಯನ್ನು ಎಳೆದಿದ್ದು ಈ ಕೂಡಲೇ ಬೆಲೆ ಏರಿಕೆಯ ಕ್ರಮಗಳನ್ನು ವಾಪಾಸು ಪಡೆಯುವಂತೆ ಬಲವಾಗ ಒತ್ತಾಯಿಸಿದೆ.

ಕಳೆದ 2009 ರಿಂದ 2022 ರ ಇಂದಿನ ವರೆಗೆ ಪ್ರತಿ ಯುನಿಟ್ ವಿದ್ಯುತ್ ಬೆಲೆಯನ್ನು 2.70 ರುಗಳಷ್ಟು ಹೆಚ್ಚಿಸಲಾಗಿದೆ.

ಈ ಬೆಲೆ ಏರಿಕೆಯು ಎಲ್ಲ ಮನೆಗಳ. ಬಿಲ್ ಗಳನ್ನು ಹೆಚ್ಚಿಸಲಿದೆ ಮತ್ತು ವಾಣಿಜ್ಯ ಬಳಕೆಯ ವಿದ್ಯುತ್ ಬೆಲೆಗಳ ಏರಿಕೆಯು ಸಣ್ಣ ಕೈಗಾರಿಕೆಗಳು ಮುಚ್ಚುವಂತಹ ಪರಿಸ್ಥಿತಿಯನ್ನು ವ್ಯಾಪಕಗೊಳಿಸಲಿದೆ ಹಾಗೂ ಜನ ಸಾಮಾನ್ಯರ ಮೇಲೆ ಬೆಲೆ ಏರಿಕೆಯ ಮತ್ತೊಂದು ಹೊರೆಯನ್ನು ಹೇರಲಿದೆ. ಆದ್ದರಿಂದ ಕರ್ನಾಟಕ ರಾಜ್ಯ ಸರಕಾರ ಈ ಕೂಡಲೇ ಬೆಲೆ ಏರಿಕೆಯ ಈ ಕ್ರಮಗಳನ್ನು ಹಿಂಪಡೆಯಲು ಅಗತ್ಯ ಕ್ರಮವಹಿಸಲು ಮುಂದಾಗಬೇಕೆಂದು ಸಿಪಿಐ(ಎಂ) ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ವಿದ್ಯುತ್ ಸರಬರಾಜು ಕಂಪನಿಗಳು ತಮ್ಮ ಸರಬರಾಜುಗಳಲ್ಲಿನ ಸಮಸ್ಯೆಗಳನ್ನು ನಿವಾರಿಸಿಕೊಳ್ಳದೇ ಆ ಮೂಲಕ ಆಗುವ ವಿದ್ಯುತ್ ನಷ್ಟವನ್ನು ಜನ ಸಾಮಾನ್ಯರ ಮೇಲೆ ಹೇರುತ್ತಿರುವುದನ್ನು ಒಪ್ಪಲಾಗದು. ಇದಕ್ಕೆ ಆ ಕಂಪನಿಗಳು ಮತ್ತು ಸರಕಾರ ಅಗತ್ಯ ಕ್ರಮವಹಿಸಬೇಕು ಎಂದಿದೆ.

ಸಾರ್ವಜನಿಕ ಕ್ಷೇತ್ರದ ಕೆಪಿಸಿಲ್ ಮೂಲಕ ಅತ್ಯಂತ ಕಡಿಮೆ ಬೆಲೆಗೆ ವಿದ್ಯುತ್ ಉತ್ಪಾದನೆಯಾಗುತ್ತಿದ್ದರೂ ಖಾಸಗೀ ಕಂಪನಿಗಳ ದುಬಾರಿ ವಿದ್ಯುತ್ ಖರೀದಿಯನ್ನು ಮುಂದುವರೆಸಲು ಆಗಿಂದಾಗ್ಗೆ ರಾಜ್ಯದ ಹಲವು ಘಟಕಗಳಲ್ಲಿ ಸಲ್ಲದ ನೆಪ ಹೇಳಿ ಉತ್ಪಾದನೆಯನ್ನು ಸ್ಥಗಿತಗೊಳಿಸಲಾಗುತ್ತಿದೆ.ಈ ಕುರಿತು ಅಗತ್ಯ ಸ್ವತಂತ್ರ ನ್ಯಾಯಾಂಗದ ತನಿಖೆಗೆ ಕ್ರಮವಹಿಸವುದು ಅಗತ್ಯವಿದೆ.

ಅದೇ ರೀತಿ, ಸಾರ್ವಜನಿಕ ರಂಗದ ವಿದ್ಯುತ್ ಉತ್ಪಾದನೆ (ಕೆಪಿಸಿಎಲ್) ಹಾಗೂ ಸರಬರಾಜು ಕಂಪನಿಗಳನ್ನು ಖಾಸಗೀಕರಿಸುವ ಲೂಟಿಕೋರ ಸಂಚಿನ ದುರುದ್ದೇಶವು ಈ ಬೆಲೆ ಏರಿಕೆಯ ಹಿಂದೆ ಅಡಗಿರುವುದನ್ನು ಸಾರ್ವಜನಿಕರು ಗಮನಿಸಿ ಪ್ರತಿರೋಧಿಸುವಂತೆ ಸಿಪಿಐಎಂ ಕರೆ ನೀಡಿದೆ.

ಹಣ್ಣು ವ್ಯಾಪಾರಿಗಳ ಮೇಲೆ ಶ್ರೀರಾಮ ಸೇನೆಯ ಗುಂಡಾಧಾಳಿ? ಕ್ರಮ ವಹಿಸಿ, ಇಲ್ಲವೇ ತೊಲಗಿ: ಸಿಪಿಐ(ಎಂ) ಒತ್ತಾಯ



ಧಾರವಾಡ ಜಿಲ್ಲೆಯ ನುಗ್ಗಿಕೇರಿಯಲ್ಲಿ ಕಳೆದ ಎರಡು ದಶಕಗಳಿಂದ ಹಣ್ಣು ವ್ಯಾಪಾರದಲ್ಲಿ ತೊಡಗಿದ್ದ ಸಣ್ಣ ವ್ಯಾಪಾರಿಗಳ ಮೇಲೆ ಧಾಳಿ ನಡೆಸಿ ಹಲ್ಲೆ ಮಾಡಿರುವುದಲ್ಲದೇ ಅವರು ಮಾರಾಟಕ್ಕಾಗಿ ಸಂಗ್ರಹಿಸಿದ್ದ ಕಲ್ಲಂಗಡಿ ಹಣ್ಣುಗಳನ್ನು ರಸ್ತೆಗೆ ದೂಡಿ ನಾಶ ಪಡಿಸಿದ ಶ್ರೀ ರಾಮ ಸೇನೆಯ ಗುಂಡಾಧಾಳಿಯನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ ಮಾತ್ರವಲ್ಲಾ, ರಾಜ್ಯ ಸರಕಾರ ಈ ಕೂಡಲೇ ಈ ಗುಂಡಾದಾಳಿಯಲ್ಲಿ ತೊಡಗಿದ ಗುಂಡಾಗಳನ್ನು ಮತ್ತು ಅವರಿಗೆ ನಿರ್ದೇಶನ ನೀಡಿದ ಗುಂಡಾ ನಾಯಕರನ್ನು ಈ ಕೂಡಲೇ ಬಂಧಿಸಿ ಅವರ ಮೇಲೆ ಗುಂಡಾಧಾಳಿಯ ಮೊಕದ್ದಮೆಗಳನ್ನು ಹೂಡಿ ಅಗತ್ಯ ಕಾನೂನಿನ ಕ್ರಮವಹಿಸಬೇಕೆಂದು ಮತ್ತು ನಷ್ಟಕ್ಕೊಳಗಾದ ಮುಸ್ಲಿ ವ್ಯಾಪಾರಿಗಳಿಗೆ ತಕ್ಷಣವೇ ನಷ್ಟ ಪರಿಹಾರವನ್ನು ಒದಗಿಸಲು ಕ್ರಮವಹಿಸಬೇಕೆಂದು ಮುಖ್ಯಮಂತ್ರಿಗಳನ್ನು ಬಲವಾಗಿ ಒತ್ತಾಯಿಸುತ್ತದೆ. ಅದೇ ರೀತಿ, ರಾಜ್ಯದಾದ್ಯಂತ ಇರುವ ಎಲ್ಲ ಅಲ್ಪ ಸಂಖ್ಯಾತ ಹಾಗು ಮುಸ್ಲಿಂ ವ್ಯಾಪಾರಿಗಳಿಗೆ ಇಂತಹ ಗುಂಡಾಗಳಿಂದ ರಕ್ಷಣೆ ಒದಗಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಇಂತಹ ಘಟನೆಗಳು ರಾಜ್ಯದ ಸೌಹಾರ್ಥತೆಯನ್ನು ದುರ್ಬಲಗೊಳಿಸುವುದು ಮಾತ್ರವಲ್ಲ ಎಲ್ಲ ಜನತೆಯ ಮೇಲೆ ಧಾಳಿ ನಡೆಸಿ ಹಫ್ತಾ ವಸೂಲಿ ಮಾಡುವಂಹ ಮಾಫಿಯಾ ಶಕ್ತಿಗಳಿಗೆ ಜನ್ಮ ನೀಡಲಿವೆ. ಇದರಿಂದ ಕೇವಲ ಮುಸ್ಲಿಂ ಧರ್ಮದ ವ್ಯಾಪಾರಿಗಳು ಮಾತ್ರವಲ್ಲಾ ಎಲ್ಲ ಧರ್ಮಿಯರು ಸಂಕಷ್ಟಕ್ಕೆ ಸಿಗುವಂತಾಗುವಂ ತಾಗುತ್ತದೆಯೆಂಬುದನ್ನು ಗಮನಿಸಬೇಕೆಂದು ರಾಜ್ಯದ ಎಲ್ಲ ವ್ಯಾಪಾರಿಗಳಿಗೆ ಮತ್ತು ನಾಗರೀಕರನ್ನು ಎಚ್ಚರಿಸಿದೆ.

ರಾಜ್ಯ ಸರಕಾರವು ಇಂತಹ ಗುಂಡಾ ಧಾಳಿಯನ್ನು ನಿಗ್ರಹಿಸಲಾಗದಂತೆ ದುರ್ಬಲಗೊಳಿಸಲಾಗಿದೆ. ಆರ್.ಎಸ್.ಎಸ್. ಕಂಟ್ರೋಲ್ ನಲ್ಲಿ ಸರಕಾರ ಸಿಲುಕಿರುವುದರಿಂದ ಈ ಮತಾಂಧ ಗುಂಡಾಗಳು ಬಹಿರಂಗ ಧಾಳಿಗೆ ಮುಂದಾಗುತ್ತಿದ್ದಾರೆ. ಇದರಿಂದಾಗಿ ರಾಜ್ಯವನ್ನು ಇಂತಹ ಗುಂಡಾಗಳು ನಡೆಸುವಂತಾಗಿದೆ. ಈಗಾಗಲೇ, ಗದಗ ಜಿಲ್ಲೆಯ ನರಗುಂದದ ಇಬ್ಬರು ಅಲ್ಪ ಸಂಖ್ಯಾತ ಯುವಕರನ್ನು ಬಹಿರಂಗವಾಗಿ ಭಜರಂಗ ದಳದ ಕಾರ್ಯಕರ್ತರು ಮಾರಣಾಂತಿಕ ಹಲ್ಲೆ ನಡೆಸಿ ಒಬ್ಬ ಯುವಕನನ್ನು ಕೊಂದಿದ್ದಾರೆ. ಅದೇ ರೀತಿ ದಕ್ಷಿಣ ಜಿಲ್ಲೆಯ ಆದಿವಾಸಿ ಯುವಕನ ಮೇಲೆಯು ದಾಳಿ ಮಾಡಲಾಗಿದೆ. ಶಿವಮೊಗ್ಗದ ಭಜರಂಗ ದಳದ ಕಾರ್ಯಕರ್ತನನ್ನು ಕೊಲ್ಲಲಾಗಿದೆ.

ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಾಗದಂತೆ ಅಧಿಕಾರಿಗಳನ್ನು ದುರ್ಬಲಗೊಳಿಸಿರುವುದು ತೀವ್ರ ಖಂಡನೀಯ ಎಂದಿದೆ.

ಮುಖ್ಯ ಮಂತ್ರಿಗಳು ಇಂತಹ ಗುಂಡಾ ಮಾಫಿಯಾ ಮತಾಂಧ ಶಕ್ತಿಗಳನ್ನು ನಿಗ್ರಹಿಸಲು ಮಧ್ಯ ಪ್ರವೇಶಿಸಿ ಕಾನೂನು ಸುವ್ಯವಸ್ಥೆಯನ್ನು ಬಲಗೊಳಿಸ ಬೇಕು. ಇಲ್ಲವಾದರೇ ನಿಮ್ಮಂತಹ ಮುಖ್ಯಮಂತ್ರಿಗಳ ಅವಶ್ಯಕತೆ ರಾಜ್ಯಕ್ಕಿಲ್ಲ. ಆದ್ದರಿಂದ ತಾವು ರಾಜಿನಾಮೆ ನೀಡಿ ವಿಧಾನಸಭೆ ವಿಸರ್ಜಿಸಿ ಚುನಾವಣೆ ಎದುರಿಸುವಂತೆ ಒತ್ತಾಯಿಸಿ ಸಿಪಿಐ(ಎಂ) ತನ್ನ ಪ್ರಬಲ ವಿರೋಧವನ್ನು ವ್ಯಕ್ತಪಡಿಸಿದೆ.

ಬೇಜವಾಬ್ದಾರಿ ಗೃಹಮಂತ್ರಿ ಅಧಿಕಾರದಲ್ಲಿರಬೇಕೇ?......... ಪುಟ 3 ರಿಂದ

ಗೃಹಸಚಿವರಿಗೆ ತಲುಪಿಸಿದವರು ಯಾರು? ಅದನ್ನವರು ಯಾಕೆ ತಿರುಚಿ ಹೇಳಿದರು? ಮತ್ತು ಅದನ್ನು ಪರಿಶೀಲಿಸದೇ ವಿಧಾನಸಭೆಯಲ್ಲಿ ಸಚಿವರು ಪ್ರಸ್ತಾಪಿಸಿದರೇ? ಹಾಗಾದರೆ ಇದು ಬೇಜವಾಬ್ದಾರಿತನದ ನಡತೆಯಲ್ಲವೇ? ಜಗಳವಾಡಿಕೊಂಡವರ ಮತ ಧರ್ಮಗಳು ಬೇರೆ ಎಂದಾಕ್ಷಣ ಅದನ್ನು ದುರ್ಬಳಕೆ ಮಾಡಿಕೊಳ್ಳುವ ಧಾವಂತವೇಕೆ? ಘಟನೆಯ ಸತ್ಯಾಸತ್ಯತೆಗಳು ನಿಚ್ಚಳವಾಗಿ ಹೊರಬಂದರೂ ಈಗಲೂ ಶಾಸಕ, ರಾಷ್ಟ್ರೀಯ ಬಿಜೆಪಿ ಕಾರ್ಯದರ್ಶಿ ಸಿ.ಟಿ. ರವಿ ಯಂಥವರು ಜಗಳದಲ್ಲಿ ಉರ್ದು ಭಾಷೆಯ ಸಮಸ್ಯೆ ಇತ್ತು ಎನ್ನುವುದನ್ನು ಪುನರುಚ್ಚರಿಸುತ್ತಿರುವುದು ಏನನ್ನು ಸೂಚಿಸುತ್ತದೆ?

ಇವುಗಳ ನಡುವೆಯೇ ಧಾರವಾಡ ನುಗ್ಗಿಕೇರಿಯ ಆಂಜನೇಯ ದೇವಸ್ಥಾನದ ಬಳಿ ಹಣ್ಣಿನ ಬಡ ವ್ಯಾಪಾರಿಗಳ ಅಂಗಡಿಗಳ ಮೇಲೆ ಧಾಳಿ ಮಾಡಿ ಜೀವದಾಸರೆಯಾಗಿದ್ದ ಹಣ್ಣು, ಅಂಗಡಿಗಳನ್ನು ಬಜರಂಗದಳದ ಪುಂಡರು ಧ್ವಂಸ ಮಾಡಿದ್ದಾರೆ. ಕ್ರಮವಹಿಸದ ಬಗ್ಗೆ ಹಾಗೂ ಪ್ರಕರಣದ ಬಗ್ಗೆ ಪ್ರಶ್ನಿಸಿದ ವಿರೋಧ ಪಕ್ಷದ ನಾಯಕರಿಗೆ ತಾನೇನೂ ನಿಮ್ಮಿಂದ ಬುದ್ಧಿಕಲಿಯಬೇಕಿಲ್ಲ ಎಂಬ ದಾರ್ಷ್ಯದ ಮಾತುಗಳನ್ನು ಗೃಹ ಸಚಿವರು ಆಡಿದ್ದಾರೆ.

ಇಂತಹ ವರ್ತನೆಗಳನ್ನು ಹಿಂದೆಯೂ ಸತತವಾಗಿ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ತೋರಿಸುತ್ತಾ ಬಂದಿದ್ದಾರೆ. ಸಮಾಜದ ಎಲ್ಲಾ ಸಮುದಾಯಗಳನ್ನು ಜೊತೆಗೆ ಕೊಂಡೊಯ್ಯುವ ಕಾಳಜಿ, ಕನಿಷ್ಠ ಅರಿವು ಇಲ್ಲದ ಸೂಕ್ಷ್ಮಮತಿ ಮತ್ತು ಸಾಮಾಜಿಕ, ರಾಜಕೀಯ, ನೈತಿಕ ಹೊಣೆಗಾರಿಕೆ ಇಲ್ಲದ ಇಂಥವರು ಗೃಹ ಸಚಿವರಾಗಿ ಮುಂದುವರೆಯುವುದು ಇನ್ನಷ್ಟು ದುರಂತಗಳನ್ನು ತರಲಿದೆ. ಇಂಥವರು ಕೂಡಲೇ ರಾಜೀನಾಮೆ ಸಲ್ಲಿಸಿ ಕೆಳಗಿಳಿಯ ಬೇಕೆನ್ನುವ ಪ್ರಬಲ ಆಗ್ರಹ ಸೂಕ್ತವಾಗಿದೆ. ಮುಖ್ಯಮಂತ್ರಿ ಬೊಮ್ಮಾಯಿಯವರು ಇಂಥವರನ್ನು ಸಂಪುಟದಿಂದ ಹೊರ ಹಾಕುವುದು ಯಾವಾಗ ಎಂಬುದು ಜನತೆಯ ಪ್ರಶ್ನೆಯಾಗಿದೆ.

ದುರ್ಬುದ್ಧಿಯ ಸರಣಿ......... ಪುಟ 3 ರಿಂದ

ಈ ಹಬ್ಬದಲ್ಲಿ ಮಗ್ನರಾಗಿರುವ ಸಮುದಾಯಕ್ಕೆ ಕಿರಿಕಿರಿಯನ್ನು ಉಂಟು ಮಾಡುವ ದುರುದ್ದೇಶ ಹೊರತುಪಡಿಸಿದರೆ ಸಂಘಪರಿವಾರಕ್ಕೆ ಮತ್ತೇನಿದೆ? ಇಂತಹ ದುರ್ಬುದ್ಧಿಯನ್ನು ಹಿಂದೂ ಧರ್ಮವನ್ನು ಒಳಗೊಂಡು ಯಾವ ಮತಧರ್ಮಗಳೂ ಬೋಧಿಸುವುದಿಲ್ಲ ಮತ್ತು ಸಹಿಸುವುದೂ ಇಲ್ಲ. ಅಮಾನವೀಯ, ಅಸಹಿಷ್ಣುತೆಯ ವರ್ತನೆಗಳು ಧರ್ಮವನ್ನಾಗಲಿ ದೇಶವನ್ನಾಗಲಿ ರಕ್ಷಿಸ ಬಲ್ಲವು ಎನ್ನುವುದು ಒಂದು ಶುದ್ಧ ಭ್ರಾಂತಿ ಎನ್ನುವುದನ್ನು ಯಾರಾದರೂ ಅರ್ಥ ಮಾಡಿಕೊಳ್ಳಬೇಕು. ಬದಲಾಗಿ, ಇಂತಹ ಶಕ್ತಿಗಳು ಉದಾತ್ತತೆಯ ಮೌಲ್ಯಗಳನ್ನು, ಸಮಾಜವನ್ನು ಅವನತಿಯತ್ತ ಕೊಂಡೊಯ್ಯ ಬಲ್ಲವು ಎನ್ನುವುದನ್ನು ಭ್ರಾಂತಿಯಲ್ಲಿರುವವರು ಮನವರಿಕೆ ಮಾಡಿಕೊಳ್ಳಬೇಕು.

ನಿವೃತ್ತಿ ಹೆಸರಿನಲ್ಲಿ 12 ಸಾವಿರ ಬಿಸಿಯೂಟ ನೌಕರರ ವಜಾ: ಸಿಐಟಿಯು ಆಕ್ರೋಶ

ನಿವೃತ್ತಿ ಹೆಸರಿನಲ್ಲಿ 60 ವರ್ಷ ಪೂರ್ಣಗೊಂಡಿದೆ ಎಂಬ ನೆಪವೊಡ್ಡಿ 19 ವರ್ಷ ಸೇವೆ ಸಲ್ಲಿಸಿದ ಬಡ ಮಹಿಳೆಯರನ್ನು ರಾಜ್ಯದಲ್ಲಿನ ಸುಮಾರು 12,000 ಬಿಸಿಯೂಟ ನೌಕರರನ್ನು ಸೇವೆ ವಜಾ ಮಾಡುವ ರಾಜ್ಯ ಸರ್ಕಾರ ನಿರ್ಧಾರಕ್ಕೆ ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ಸುಮಾರು 50 ಲಕ್ಷ ಮಕ್ಕಳಿಗೆ ದಿನ ನಿತ್ಯ ಸ್ವಚ್ಛ ಮತ್ತು ಬಿಸಿ ಬಿಸಿ ಅಡುಗೆ ಮಾಡಿ ಮಕ್ಕಳಿಗೆ ತಾಯ್ತನದ ಊಟವನ್ನು ಬಡಿಸುವ ವ್ಯವಸ್ಥೆ ಜಾರಿಗೆ ಬಂದಿದ್ದು, ಈ ಯೋಜನೆ 2001-02ರಿಂದ ಜಾರಿಯಲ್ಲಿದೆ. ಅಲ್ಲದೆ ಈ ಯೋಜನೆಯಡಿ ರಾಜ್ಯದಲ್ಲಿ 1 ಲಕ್ಷ 18 ಸಾವಿರ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ.

ಆದರೆ ರಾಜ್ಯದ ಬಸವರಾಜ ಬೊಮ್ಮಾಯಿ ಅವರ ಬಿಜೆಪಿ ಸರ್ಕಾರ ಅಂತಹ ಯಾವುದೇ ಪ್ರಯತ್ನಗಳನ್ನು ಮಾಡದೇ ನಿವೃತ್ತಿ ಪರಿಹಾರ ಕೊಡದೇ ಏಕಾಏಕಿ ಸುಮಾರು 12,000 ಜನರನ್ನು ಮಾರ್ಚ್ 31 ರಿಂದ ಕೆಲಸದಿಂದ ವಜಾ ಮಾಡುತ್ತಿರುವ ಕ್ರಮವನ್ನು ಖಂಡಿಸಿದ್ದಾರೆ.

ಬಸವರಾಜ ಬೊಮ್ಮಾಯಿ ಸರ್ಕಾರದ ಅಮಾನವೀಯ ನಡೆಯನ್ನು ಖಂಡಿಸಿರುವ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೆಸ್ತಾ ಅವರು ಕೆಲಸಕ್ಕೆ ತೆಗೆದುಕೊಳ್ಳುವಾಗ ವಯಸ್ಸಿನ ಮಿತಿ ಹಾಕುವ ಸರ್ಕಾರ ಕೆಲಸದಿಂದ ತೆಗೆಯಲು ವಯಸ್ಸಿನ ಮಿತಿ ಹಾಕುವುದಿಲ್ಲ. ಅಲ್ಲದೆ, ಅಕ್ಷರ ದಾಸೋಹ ಸಂಘ 2016ರಿಂದಲೂ ವಯೋಮಿತಿ ಆಧಾರದ ಮೇಲೆ ನಿವೃತ್ತಿ ಸೌಲಭ್ಯ ಕೊಡಬೇಕೆಂದು ಹಲವಾರು ಬಾರಿ ಸರ್ಕಾರಕ್ಕೆ ಮತ್ತು ಶಿಕ್ಷಣ ಇಲಾಖೆಗೆ ಮನವಿ ಯಾವುದೇ ಕ್ರಮವನ್ನು ವಹಿಸಿಲ್ಲ ಎಂದು ಹೇಳಿದ್ದಾರೆ.

ಈಗ ಕೆಲಸದಿಂದ ವಜಾವಾಗುತ್ತಿರುವ ಬಹುತೇಕ ಬಿಸಿಯೂಟ ನೌಕರರು ಕೆಲಸಕ್ಕೆ ತೆಗೆದುಕೊಳ್ಳುವಾಗ ಇದ್ದ ವೇತನ ತಿಂಗಳಿಗೆ 300-650 ರೂಪಾಯಿ ಮಾತ್ರ. ಈಗ ನೌಕರರ ಸಂಘಟಿತ ಹೋರಾಟದಿಂದ 3,600-3,700 ರೂ. ಸಂಬಳ ಪಡೆಯುತ್ತಿದ್ದಾರೆ. ಅಧಿಕಾರಕ್ಕೆ ಬಂದಂತಹ ಯಾವುದೇ ಶಿಕ್ಷಣ ಮಂತ್ರಿಗಳು, ಸರ್ಕಾರಗಳು ಬಿಸಿಯೂಟ ನೌಕರರನ್ನು ಕೆಲಸದಿಂದ ತೆಗೆಯುವ ಪ್ರಸ್ತಾಪಗಳು ಬಂದಾಗ ನಿವೃತ್ತಿ ಸೌಲಭ್ಯ ಕೊಡಲು ಪ್ರಯತ್ನ ಮಾಡುತ್ತಿದ್ದವು ಎಂದು ಹೇಳಿದ್ದಾರೆ.

ತಿಂಗಳಿಗೆ ರೂ. 2,600 (ಬಜೆಟ್‌ನಲ್ಲಿ ಘೋಷಣೆಯಾದ ರೂ. 1,000 ಇನ್ನು ಅನ್ವಯವಾಗಿಲ್ಲ.) ರೂ. ಗಳ ಸಂಬಳಕ್ಕೆ ಈ ಮಹಿಳೆಯರು ದುಡಿಯುತ್ತಾರೆ. ಅಂದರೆ ಇವರ ಕುಟುಂಬಗಳ ಮುಂದಿನ ಪರಿಸ್ಥಿತಿ ಮತ್ತಷ್ಟು ಕಷ್ಟಕರವಾಗಲಿದೆ. ಹಾಗಾಗಿ ಸರ್ಕಾರ ನೌಕರರ ಭವಿಷ್ಯಕ್ಕೆ ನಿರ್ದಿಷ್ಟ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಕೊರಗ ಕುಟುಂಬಗಳಿಗೆ ಭೂಮಿ ನೀಡುವಂತೆ ಕುಂದಾಪುರದಲ್ಲಿ ಧರಣಿ

ವರದಿ: **ವಾ.ಉ.**

ಕೊರಗ ಆದಿವಾಸಿ ಜನಸಮುದಾಯದ ಜನಸಂಖ್ಯೆ ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಪ್ರಾಧ್ಯಾಪಕ ಡಾ.ಮಹಮ್ಮದ್ ಪೀರ್ ಅವರಿಂದ ರಾಜ್ಯ ಸರಕಾರ ಮಾಡಿಸಿದ ಅಧ್ಯಯನ ಕಾರಣವಾಗಿ 1994 ರಲ್ಲಿ ಒಂದು ವರದಿಯನ್ನು ಸಿದ್ಧಪಡಿಸಲಾಗಿತ್ತು. ಅಲ್ಲಿ ಡಾ.ಪೀರ್ ಅವರು ಕೊರಗ ಸಮುದಾಯದ ಅಭಿವೃದ್ಧಿಗಾಗಿ 13 ಶಿಫಾರಸುಗಳನ್ನು ಸೂಚಿಸಿತ್ತು. ಈ ಶಿಫಾರಸುಗಳನ್ನು ಸಂಪೂರ್ಣ ಜಾರಿಗೊಳಿಸುವಂತೆ ಕೊರಗ ಸಮುದಾಯದವರು ಇಷ್ಟು ವರ್ಷಗಳಿಂದ ಪ್ರಯತ್ನಿಸುತ್ತಿದ್ದರೂ, ಸರಕಾರ ಅದನ್ನು ಅರೆಬರೆಯಾಗಿ ಜಾರಿ ಮಾಡುತ್ತಿದೆ.

ಈ ವರದಿಯಲ್ಲಿ ಪ್ರತಿ ಕೊರಗ ಕುಟುಂಬಕ್ಕೆ ತಲಾ 2 ಎಕರೆ ಭೂಮಿ ನೀಡುವ ಪ್ರಸ್ತಾಪವಿದೆ. ಈ ವರೆಗೆ ಕೇವಲ 900 ಎಕರೆ ಭೂಮಿ ಮಾತ್ರ ನೀಡಲಾಗಿದೆ. ಕುಂದಾಪುರ ತಾಲೂಕು ಆಲೂರು ಗ್ರಾಮದಲ್ಲಿ ಅಲ್ಲಿನ ಕೊರಗ ಕುಟುಂಬಗಳಿಗೆ ಭೂಮಿ ನೀಡಬೇಕೆಂದು ಕಳೆದ 6 ವರ್ಷಗಳಿಂದ ಮನವಿ, ಹೋರಾಟ ಮಾಡುತ್ತಿದ್ದರೂ ಪ್ರಯೋಜನ ಆಗಿರಲಿಲ್ಲ.



ಉಡುಪಿ ಜಿಲ್ಲೆಯ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಆಲೂರು ಹಾಗೂ ಸಮೀಪದ 23 ಭೂರಹಿತ ಕೊರಗ ಕುಟುಂಬಗಳಿಗೆ ಭೂಮಿ ನೀಡುವಂತೆ ಆಗ್ರಹಿಸಿ ಆಲೂರು ಗ್ರಾಮ ಪಂಚಾಯತು ಕಚೇರಿ ಎದುರು ಎಪ್ರಿಲ್ 4 ರಂದು ಪ್ರತಿಭಟನಾ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿತ್ತು. ಧರಣಿಯನ್ನುದ್ದೇಶಿಸಿ ಸಮಿತಿಯ ಉಡುಪಿ ಜಿಲ್ಲಾ ಸಂಚಾಲಕರಾದ ಶ್ರೀಧರ ನಾಡ ಅವರು, ಆಲೂರು ಮಾತ್ರವಲ್ಲದೆ ಸುತ್ತಮುತ್ತಲಿನ ಹಕ್ಲಾಡಿ, ಕೆರಾಡಿ, ಬೆಳ್ಳಾಲ, ಇಡೂರು, ಹೇರೂರು ಮೊವಾಡಿ, ಗುಜ್ಜಾಡಿ, ತಲ್ಲೂರು, ಕೆಂಚನೂರು, ನಾಡ ಇನ್ನೂ ಹಲವಾರು ಪ್ರದೇಶಗಳಲ್ಲಿ ಭೂರಹಿತ ಕೊರಗ ಕುಟುಂಬಗಳು ಇವೆ. ಕುಂದಾಪುರ, ಬೈಂದೂರು ತಾಲೂಕುಗಳಲ್ಲಿ ಕೊರಗರ ಭೂಮಿ ಹೋರಾಟವನ್ನು ವಿಸ್ತರಿಸುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ರಮೇಶ್ ಗುಲ್ವಾಡಿ, ಪಡುಕೋಣೆ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ರಾಜೀವ ಪಡುಕೋಣೆ ಭಾಗವಹಿಸಿದ್ದರು. ಸ್ಥಳಕ್ಕೆ ಆಗಮಿಸಿದ ಹೋಬಳಿಯ ಕಂದಾಯ ನಿರೀಕ್ಷಕರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು. ಆದಿವಾಸಿ ಹಕ್ಕುಗಳ ಉಡುಪಿ ಜಿಲ್ಲಾ ಸಮಿತಿ ಸದಸ್ಯರು ಹೋರಾಟಕ್ಕೆ ನೇತೃತ್ವ ನೀಡಿದ್ದರು.


ಉಡುಪಿ



ಧಾರವಾಡ


ಮೈಸೂರು

ಬೆಲೆ ಏರಿಕೆ ವಿರುದ್ಧ ಸಿಪಿಐ(ಎಂ) ನಿಂದ ರಾಜ್ಯಾದ್ಯಂತ ಪ್ರತಿಭಟನೆ

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಔಷಧ ಸೇರಿದಂತೆ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ರಾಷ್ಟ್ರಾದ್ಯಂತ ಪ್ರತಿಭಟನೆ ಮಾಡುವಂತೆ ಪಕ್ಷವು ಕರೆ ನೀಡಿದ ಮೇರೆಗೆ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಎಪ್ರಿಲ್ 4 ರಂದು ಪ್ರತಿಭಟನೆ ನಡೆಯಿತು.

ಬೆಳ್ತಂಗಡಿ ಮಿನಿ ವಿಧಾನಸೌಧದ ಎದುರು ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಸಮಿತಿ ವತಿಯಿಂದ ನಡೆದ ಪ್ರತಿಭಟನೆಯನ್ನುದ್ದೇಶಿಸಿ ತಾಲೂಕು ಸಮಿತಿ ಕಾರ್ಯದರ್ಶಿ ಶಿವಕುಮಾರ್, ಸಮಿತಿ ಸದಸ್ಯರಾದ ಶೇಖರ ಲಾಯಿಲ ಮಾತನಾಡಿದರು.

ಬ್ರಹ್ಮಾವರದ ಆಕಾಶವಾಣಿ ಬಳಿ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಮುಖಂಡರಾದ ಕೆ. ಶಂಕರ್, ಎಚ್. ನರಸಿಂಹ ಮಾತನಾಡಿದರು.

ಬೆಂಗಳೂರು ಪೂರ್ವ ವಲಯ ಸಮಿತಿ ಕೆ.ಆರ್ ಪುರಂ ಬಿಬಿಎಂಪಿ ಕಚೇರಿಯ ಮುಂಭಾಗ, ಏಪ್ರಿಲ್ 07 ರಂದು ಪೆಟ್ರೋಲ್, ಡೀಸೆಲ್, ಎಲ್.ಪಿ.ಜಿ. ಮತ್ತು ಅಗತ್ಯ ವಸ್ತುಗಳ ವಿಪರೀತ ಬೆಲೆ ಏರಿಕೆಯ ವಿರುದ್ಧ ಪ್ರತಿಭಟನೆ ನಡೆಸಿತು.

ಪ್ರತಿಭಟನೆಯನ್ನು ಉದ್ದೇಶಿಸಿ, ಬೆಂಗಳೂರು ಪಕ್ಷದ ಉತ್ತರ ವಲಯ ಕಾರ್ಯದರ್ಶಿ ಕಾಮ್ರೇಡ್ ಎನ್. ನಾಗರಾಜ ರವರು ಮಾತನಾಡುತ್ತಾ, ಕೇಂದ್ರ ಸರ್ಕಾರದ ಜನ ವಿರೋಧಿ ಕ್ರಮಗಳನ್ನು ಉಗ್ರವಾಗಿ ಖಂಡಿಸಿದರು. ಕೂಡಲೇ ಹೆಚ್ಚಿಸಿರುವ ಪೆಟ್ರೋಲ್, ಡೀಸೆಲ್ ಹಾಗೂ ಅಡಿಗೆ ಅನಿಲ ಸಿಲಿಂಡರ್ ಬೆಲೆಗಳನ್ನು ಹಿಂದಕ್ಕೆ ತೆಗೆದುಕೊಳ್ಳ ಬೇಕೆಂದು ಆಗ್ರಹಿಸಿದರು. ಕೇರಳದ ಕಣ್ಣೂರು ನಲ್ಲಿ ನಡೆಯುತ್ತಿರುವ ಪಕ್ಷದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಇದರ ಕುರಿತು ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ. ಸಿಪಿಎಂ ದೇಶಾದ್ಯಂತ ಬೆಲೆ ಏರಿಕೆ ಯ ವಿರುದ್ದ ದೊಡ್ಡ ಆಂದೋಲನ ವನ್ನು ನಡೆಸಲು ಕರೆ ನೀಡಿದೆ. ಇದರ ಭಾಗವಾಗಿ, ಪ್ರತಿಭಟನೆ ನಡೆಸಲಾಯಿತು. ಈ ಪ್ರತಿಭಟನೆಯನ್ನು ಉದ್ದೇಶಿಸಿ,ಜಿಲ್ಲಾ ಮುಂಖಡರಾದ ಗೌರಮ್ಮ ಹಾಗೂ ವಕಯ ಸಮಿತಿಯ ಪಕ್ಷದ ನಾಯಕರಾದ, ಕಾಮ್ರೇಡ್ ಬಿ ಎನ್ ಶ್ರೀನಿವಾಸ್, ಶರಣಪ್ಪ, ಸಿ ರಮೇಶ್, ಮಂಗಳ ಹಾಗೂ ನಂಜೇಗೌಡರು ಮಾತನಾಡಿದರು.


ಬೆಂಗಳೂರು

ಕಾರ್ಮಿಕ ಚಳುವಳಿಯ ಧ್ರುವತಾರೆ ಬಿಟಿಆರ್

ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದ ಬಿಟಿ ರಣದಿವೆಯವರು ಎಳೆಯ ಪ್ರಾಯದಲ್ಲೇ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡರು. ಇದೇ ಸಂದರ್ಭದಲ್ಲಿ ದುಡಿಯುವ ವರ್ಗದ ಸಿದ್ಧಾಂತದ ಮೇಲೆ ಅಪಾರವಾದ ಕಾಳಜಿ ಹೊಂದಿ ಕಾರ್ಮಿಕ ವರ್ಗದ ಸಮರಧೀರ ಹೋರಾಟಗಳಲ್ಲಿ ಸಮರ್ಪಿಸಿಕೊಂಡರು. ಕಾರ್ಮಿಕ ವರ್ಗದ ದೈನಂದಿನ ಹೋರಾಟಗಳನ್ನು ಸಾಮಾಜಿಕ ಪರಿವರ್ತನೆಯ ಅಂತಿಮ ಗುರಿಯೊಂದಿಗೆ ಬೆಸೆಯುತ್ತಿದ್ದ ಬಿಟಿಆರ್, ಕ್ರಾಂತಿಕಾರಿ ಸಿದ್ಧಾಂತ ಹಾಗೂ ಕ್ರಾಂತಿಕಾರಿ ಪಕ್ಷವಿಲ್ಲದೆ ಸಮಾಜದ ಪರಿವರ್ತನೆ ಸಾಧ್ಯವಿಲ್ಲ ಎಂದು ಪ್ರತಿಪಾದಿಸುತ್ತಿದ್ದರು. ಐಕ್ಯತೆ ಮತ್ತು ಹೋರಾಟದ ಸಂದೇಶ ಸಾರಿದ ಬಿಟಿಆರ್ ಕಾರ್ಮಿಕ ಚಳುವಳಿಯ ಧ್ರುವತಾರೆಯಾಗಿ ಹೊರಹೊಮ್ಮಿದ್ದಾರೆ. ಎಂದು ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಅಭಿಪ್ರಾಯಪಟ್ಟರು.

ಸಿಐಟಿಯು ಸಂಸ್ಥಾಪಕ ಅಧ್ಯಕ್ಷರಾದ ಬಿಟಿ ರಣದಿವೆಯವರ 32ನೇ ಸಂಸ್ಮರಣಾ ದಿನಾಚರಣೆಯ ಅಂಗವಾಗಿ ಮಂಗಳೂರಿನಲ್ಲಿ ಆಯೋಜಿಸಿದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಈ ಮಾತುಗಳನ್ನು ಹೇಳಿದರು.



ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡಿ, 'ಎಳೆಯ ಪ್ರಾಯದಲ್ಲೇ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದ ಬಿಟಿಆರ್ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಆಳವಾಗಿ ಅಭ್ಯಸಿಸಿ ಆ ಮೂಲಕ ಭಾರತದಲ್ಲಿ ಕ್ರಾಂತಿಯ ಕನಸು ಕಂಡವರು. ದೇಶದ ಕಾರ್ಮಿಕ ಚಳುವಳಿಗೆ ಸರಿಯಾದ ತಳಹದಿಯನ್ನು ಹಾಕಿ ಮುನ್ನಡೆಸಿರುವುದು ಮಾತ್ರವಲ್ಲದೆ ದುಡಿಯುವ ಮಹಿಳೆ, ಸಾಮ್ರಾಜ್ಯಶಾಹಿ, ನಿರುದ್ಯೋಗ ಸಮಸ್ಯೆಗಳ ಗಂಭೀರತೆಯನ್ನು ತಿಳಿಹೇಳಿ ಕಾರ್ಮಿಕ ಸಂಘಗಳ ಪ್ರಜಾಸತ್ತಾತ್ಮಕ ನಿರ್ವಹಣೆಯ ಮಹತ್ವವನ್ನು ಸಾರಿ ಹೇಳಿದ್ದರು' ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಿಐಟಿಯು ದ.ಕ. ಜಿಲ್ಲಾ ಸಮಿತಿ ಸದಸ್ಯರಾದ ವಿಲಾಸಿನಿ ತೊಕ್ಕೊಟುರವರು ಮಾತನಾಡುತ್ತಾ, 'ಬಂಡವಾಳಶಾಹಿ ವ್ಯವಸ್ಥೆಯಿಂದಾಗಿ ಮಹಿಳೆಯರ ಮೇಲಿನ ಆರ್ಥಿಕ ಶೋಷಣೆ ಹಾಗೂ ಸಾಮಾಜಿಕ ಶೋಷಣೆಗಳ ವಿರುದ್ಧ ಪ್ರಬಲ ಹೋರಾಟಕ್ಕೆ ಕರೆ ನೀಡಿದ್ದ ಬಿಟಿಆರ್, ಕಾರ್ಮಿಕ ಚಳುವಳಿಯಲ್ಲಿ ದುಡಿಯುವ ಮಹಿಳೆಯರಿಗೆ ಪೂರ್ಣ ಸಮಾನತೆ ನೀಡುವಲ್ಲಿ ಸದಾ ಮಾರ್ಗದರ್ಶನ ನೀಡುತ್ತಿದ್ದರು' ಎಂದು ಹೇಳಿದರು.

ಪ್ರಾರಂಭದಲ್ಲಿ ಯೋಗೀಶ್ ಜಪ್ಪಿನಮೊಗರುರವರು ಸ್ವಾಗತಿಸಿದರೆ ಕೊನೆಯಲ್ಲಿ ರವಿಚಂದ್ರ ಕೊಂಚಾಡಿಯವರು ವಂದಿಸಿದರು.

ಕೊವಿಡ್ ಕಾಲದಲ್ಲಿ ಶಿಕ್ಷಣ ವಂಚಿತ ಮಕ್ಕಳ ಶೈಕ್ಷಣಿಕ ಪುನಶ್ಚೇತನ ಕಾರ್ಯಕ್ರಮದ ತುರ್ತು ಅಗತ್ಯ

ಅತಿಥಿ ಅಂಕಣ



ಪ್ರೊ. ಟಿ.ಆರ್. ಚಂದ್ರಶೇಖರ

ಪೆಂಡಮಿಕ್‌ನಿಂದ ದುರ್ಬಲ ವರ್ಗದ ಮಕ್ಕಳು ಶಿಕ್ಷಣದಿಂದ ವಂಚಿತವಾದ ಸಮಸ್ಯೆಯನ್ನು ಒಕ್ಕೂಟ ಸರ್ಕಾರ ತನ್ನ 2022–23ನೆಯ ಸಾಲಿನ ಬಜೆಟ್ಟಿನಲ್ಲಿ ಗುರುತಿಸಿದೆ. ಒಕ್ಕೂಟ ಸರ್ಕಾರವು ಸಮಸ್ಯೆಯನ್ನೇನೋ ಗುರುತಿಸಿದೆ. ಆದರೆ ಅದು ರೂಪಿಸುತ್ತಿರುವ ಡಿಜಿಟಲ್ ಪರಿಹಾರವು ಸಮಸ್ಯೆಯನ್ನು ನಿವಾರಿಸುವುದು ಸಾಧ್ಯವಿಲ್ಲ. 'ಒಂದು ದೇಶ–ಒಂದು ತರಗತಿ' ಎನ್ನುವ ಚೌಕಟ್ಟಿನಲ್ಲಿ ಒಕ್ಕೂಟ ಸರ್ಕಾರವು ಪರಿಹಾರವನ್ನು ಯೋಚಿಸುತ್ತಿದೆ. ಈ ಪರಿಹಾರಾತ್ಮಕ ಪುನಶ್ಚೇತನ ಕಾರ್ಯಕ್ರಮಕ್ಕೆ ಒಕ್ಕೂಟ ಸರ್ಕಾರ ಅನುದಾನವನ್ನು ನೀಡಿಲ್ಲ. ನಮ್ಮ ಕರ್ನಾಟಕ ಸರ್ಕಾರಕ್ಕೆ ಇಂತಹ ಒಂದು ಬೃಹತ್ ಸಮಸ್ಯೆಯನ್ನು ಗುರುತಿಸಲೂ ಸಾಧ್ಯವಾಗಿಲ್ಲ. ಇನ್ನು ಪರಿಹಾರದ ಬಗ್ಗೆ ಯಾವ ಸೂಚನೆಯೂ ಕರ್ನಾಟಕ 2022–23ರ ಬಜೆಟ್ಟಿನಲ್ಲಿ ಇಲ್ಲ.ನಮ್ಮ ಪ್ರಾಥಮಿಕ ಶಿಕ್ಷಣದಲ್ಲಿ ಕೊರೊನಾ ಪೆಂಡಮಿಕ್ ಸಮಸ್ಯೆಯಿಂದಾಗಿ ಮಕ್ಕಳಿಗೆ ಏನೆಲ್ಲ ಸಮಸ್ಯೆಗಳು ಉಂಟಾಗಿವೆ ಎಂಬುದನ್ನು ತಳಸ್ಪರ್ಶಿಯಾಗಿ ಮತ್ತು ಪ್ರಾದೇಶಿಕವಾಗಿ ಮೊದಲು ಗುರುತಿಸುವ ಕೆಲಸವಾಗಬೇಕು.ಗ್ರಾಮೀಣ ಪ್ರದೇಶದಲ್ಲಿ ಡಿಜಿಟಲೈಸೇಶನ್‌ಗೆ ಸ್ವಲ್ಪ ಸಮಯ ಬಿಡುವು ಕೊಟ್ಟು ನೇರ ಪಾಠ ಹೇಳುವ ವಿಧಾನವನ್ನು ಮತ್ತು ಪರಿಣಾಮಕಾರಿ ಕಲಿಕೆಯ ಬಗ್ಗೆ ಬೃಹತ್ ಯೋಜನೆಯನ್ನು ಹಮ್ಮಿಕೊಳ್ಳಬೇಕು. ಜಿಲ್ಲಾಮಟ್ಟದಲ್ಲಿ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ವಿಶೇಷವಾಗಿ ಪರಿಹಾರಾತ್ಮಕ ಶಿಕ್ಷಣ ನೀಡುವದಕ್ಕೆ ನಿವೃತ್ತ ಶಿಕ್ಷಕರ, ಗ್ರಾಮೀಣ ಪ್ರದೇಸದಲ್ಲಿ ನೆಲೆಸಿರುವ ಯುಕ–ಯುವತಿಯರ ಮತ್ತು ಕಾಲೇಜುಗಳಲ್ಲಿ ಕಲಿಯುತ್ತಿರುವ ಆಸಕ್ತ ಯುಜನರ ಒಂದು ಪಡೆಯನ್ನು ಇದಕ್ಕಾಗಿ ರೂಪಿಸುವ ಅಗತ್ಯವಿದೆ.



ಕಳೆದ ಎರಡು ವರ್ಷಗಳಿಂದ(2020–21 ಮತ್ತು 2021–22) ಕೊರೊನ ಪೆಂಡಮಿಕ್ ಕಾರಣದಿಂದ ನಮ್ಮ ಬಹುಪಾಲು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ನಿಜ, ಶಿಕ್ಷಣ ಇಲಾಖೆಯು ಪೆಂಡಮಿಕ್‌ನಿಂದ ವ್ಯತ್ಯಯವಾದ ಶಾಲಾ ಕಾರ್ಯಕ್ರಮವನ್ನು ಸರಿದೂಗಿಸಲು ಆಲ್‌ಲೈನ್ ಪಾಠಗಳನ್ನು ಶ್ರಮವಹಿಸಿ ನಡೆಸಿತು. ಶಿಕ್ಷಕರು ಪೆಂಡಮಿಕ್‌ಗೆ ಹೆದರದೆ ಮಕ್ಕಳಿಗೆ ಪಾಠ ಹೇಳುವ ಬಗ್ಗೆ ಅನೇಕ ಬಗೆಯ ಪ್ರಯತ್ನ ನಡೆಸಿದರು. ಆದರೆ ಪೆಂಡಮಿಕ್‌ನ ಭಯಾನಕ ಪರಿಣಾಮದಿಂದಾಗಿ ಇವಾವುವು ನಮ್ಮ ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದನ್ನು ತಡೆಯಲಾಗಲಿಲ್ಲ. ಏಕೆಂದರೆ ಕುಟುಂಬಗಳ ಬದುಕೇ ಮೂರಾಬಟ್ಟೆಯಾಯಿತು, ಪಾಲಕರು ಉದ್ಯೋಗ ಕಳೆದುಕೊಂಡರು ಮತ್ತು ಅವರು ಕೂಡಿಟ್ಟಿದ್ದ ಹಣವೆಲ್ಲ ಖಾಲಿಯಾಯಿತು. ಬಡಕುಟುಂಬಗಳಲ್ಲಿ ಶಾಲಾ ಶಿಕ್ಷಣದಿಂದ ವಂಚಿತರಾದ ಮಕ್ಕಳು ಕೂಲಿಗೆ ಹೋಗಬೇಕಾಯಿತು. ನಮ್ಮ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿನ ವಿಶೇಷವಾಗಿ ಪ.ಜಾ., ಪ.ಪಂ., ಮತ್ತು ಹಿಂದುಳಿದ ವರ್ಗಗಳ ಮಕ್ಕಳು ಭಯಾನಕ ರೀತಿಯಲ್ಲಿ ಎರಡು ವರ್ಷಗಳ ಕಾಲ ಶಿಕ್ಷಣದಿಂದ ವಂಚಿತರಾಗಿದ್ದಾರೆ. ನಮ್ಮ ರಾಜ್ಯದಲ್ಲಿನ 1 ರಿಂದ 10ನೆಯ ತರಗತಿವರೆಗಿನ ಮಕ್ಕಳ ಸಾಮಾಜಿಕ ಗುಂಪುವಾರು ದಾಖಲಾತಿ ಚಿತ್ರವನ್ನು ಕೋಷ್ಟಕದಲ್ಲಿ ನೀಡಲಾಗಿದೆ.

ಕರ್ನಾಟಕದಲ್ಲಿ ಪ್ರಾಥಮಿಕ–ಪ್ರೌಢ ಶಿಕ್ಷಣ ಎಂದರೆ ಅದು 100 ಲಕ್ಷ ಮೀರಿದ ಮಕ್ಕಳ ಶೈಕ್ಷಣಿಕ ಬದುಕಾಗಿದೆ. ಇದರಲ್ಲಿ ಸಾಮಾನ್ಯ ವರ್ಗದ ಮಕ್ಕಳ ಪ್ರಮಾಣ ಶೇ.12.13 ರಷ್ಟಾದರೆ ಒಬಿಸಿ ವರ್ಗದ ಮಕ್ಕಳ ಪ್ರಮಾಣ ಶೇ.61.32. ಪ.ಜಾ. ಮತ್ತು ಪ.ಪಂ. ಮಕ್ಕಳ ಪ್ರಮಾಣ ಶೇ.26.55. ಒಟ್ಟು ಮಕ್ಕಳಲ್ಲಿ ಸರ್ಕಾರಿ ನೆರವಿನ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಪ್ರಮಾಣ ಶೇ. 61.08.

ಕೊರೊನಾ ಪೆಂಡಮಿಕ್‌ನಿಂದಾಗಿ 2020–21 ಮತ್ತು 2021–22ನೆಯ ಸಾಲುಗಳಲ್ಲಿ ಮಕ್ಕಳ ಶಿಕ್ಷಣ ತೀವ್ರ ವ್ಯತ್ಯಯವಾಗಿದೆ. ವಿಶೇಷವಾಗಿ ಒಬಿಸಿ, ಪ.ಜಾ. ಮತ್ತು ಪ.ಪಂ.ಗಳಿಗೆ ಸೇರಿದ 91.17 ಲಕ್ಷ ಮಕ್ಕಳು ಅಕ್ಷರಶಃ ಶಿಕ್ಷಣ ಧಾರೆಯಿಂದ ಹೊರಬಿದ್ದಿದ್ದಾರೆ. ಉನ್ನತ ವರ್ಗದ ಮತ್ತು ನಗರ ಕೇಂದ್ರಿತ ಮಕ್ಕಳು ಅನೇಕ ರೀತಿಯಲ್ಲಿ ಎಲ್ಲ ಅಡೆತಡೆಗಳನ್ನು ನೀಗಿಕೊಂಡು ಶಿಕ್ಷಣವನ್ನು ಮುಂದುವರಿಸಿದ್ದಾರೆ. ಇಂಟರ್‌ನೆಟ್ ಸಂಪರ್ಕ–ಆನ್ ಲೈನ್ ಕಲಿಕೆ ಸಾಧ್ಯವಾಗದೆ, ವಿದ್ಯುತ್ ಕೊರತೆ–ವ್ಯತ್ಯಯಗಳಿಂದಾಗಿ ಮತ್ತು ದುಡಿಮೆಯ ಅನಿವಾರ್ಯತೆಯಿಂದಾಗಿ ದುರ್ಬಲ ವರ್ಗದ ಮಕ್ಕಳಿಗೆ ಡಿಜಿಟಲ್ ಕಲಿಕೆ ಸಾಧ್ಯವಾಗಿಲ್ಲ.

ಹೀಗೆ ಪೆಂಡಮಿಕ್‌ನಿಂದ ದುರ್ಬಲ ವರ್ಗದ ಮಕ್ಕಳು ಶಿಕ್ಷಣದಿಂದ ವಂಚಿತವಾದ ಸಮಸ್ಯೆಯನ್ನು ಒಕ್ಕೂಟ ಸರ್ಕಾರ ತನ್ನ 2022–23ನೆಯ ಸಾಲಿನ ಬಜೆಟ್ಟಿನಲ್ಲಿ ಹೀಗೆ ಗುರುತಿಸಿದೆ:

'ಪೆಂಡಮಿಕ್‌ನಿಂದ ಶಾಲೆಗಳು ಮುಚ್ಚಿಹೋದ ಕಾರಣ ನಮ್ಮ ಮಕ್ಕಳು, ವಿಶೇಷವಾಗಿ ಗ್ರಾಮೀಣ ಪ್ರದೇಶದ ಮತ್ತು ಪ. ಜಾ., ಪ. ಪಂ., ಹಾಗೂ ಇತರೆ ದುರ್ಬಲ ವರ್ಗದ ಮಕ್ಕಳು ಎರಡು ವರ್ಷಗಳ ಶಾಲಾ ಶಿಕ್ಷಣವನ್ನು ಕಳೆದುಕೊಂಡಿದ್ದಾರೆ. ಇವರಲ್ಲಿ ಅತಿ ಹೆಚ್ಚು ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳಾಗಿದ್ದಾರೆ. ಈ ಸಮಸ್ಯೆಯನ್ನು ಎದುರಿಸುವ ಸಲುವಾಗಿ ಪರಿಹಾರಾತ್ಮಕ ಕಲಿಕೆಯ ಅಗತ್ಯವನ್ನು ನಾವು ಮನಗಂಡಿದ್ದೇವೆ. ಈ ಸಮಸ್ಯೆಯ ಹಿನ್ನೆಲೆಯಲ್ಲಿ ಪರಿಹಾರಾತ್ಮಕ ಶಿಕ್ಷಣವನ್ನು ಹೇಗೆ ಕಟ್ಟಬೇಕು ಎಂಬುದನ್ನು ಗುರುತಿಸಲಾಗಿದೆ. ಈ ಉದ್ದೇಶಕ್ಕಾಗಿ 'ಒಂದು ತರಗತಿ–ಒಂದು ಟಿ.ವಿ. ವಾಹಿನಿ' ಎಂಬ 'ಪಿಎಮ್–ವಿದ್ಯಾ' ಕಾರ್ಯಕ್ರಮದಲ್ಲಿನ 12 ವಾಹಿನಿಗಳ ಸಂಖ್ಯೆಯನ್ನು 200ಕ್ಕೆ ಏರಿಸಲಾಗುವುದು. ಈ ಕಾರ್ಯಕ್ರಮದಿಂದಾಗಿ ರಾಜ್ಯ ಸರ್ಕಾರಗಳು 1 ರಿಂದ 12 ನೆಯ ತರಗತಿಗಳ ಮಕ್ಕಳಿಗೆ ಪರಿಹಾರಾತ್ಮಕ ಶಿಕ್ಷಣ ಕೊಡುವುದು ಸಾಧ್ಯವಾಗುತ್ತದೆ' (ಮೂಲ: ಒಕ್ಕೂಟ ಬಜೆಟ್ 2022–23: ಭಾಷಣ. ಪ್ಯಾರಾ 46).

ಒಕ್ಕೂಟ ಸರ್ಕಾರವು ಸಮಸ್ಯೆಯನ್ನೇನೋ ಗುರುತಿಸಿದೆ. ಆದರೆ ಅದು ರೂಪಿಸುತ್ತಿರುವ ಡಿಜಿಟಲ್ ಪರಿಹಾರವು ಸಮಸ್ಯೆಯನ್ನು ನಿವಾರಿಸುವುದು ಸಾಧ್ಯವಿಲ್ಲ. 'ಒಂದು ದೇಶ–ಒಂದು ತರಗತಿ' ಎನ್ನುವ ಚೌಕಟ್ಟಿನಲ್ಲಿ ಒಕ್ಕೂಟ ಸರ್ಕಾರವು ಪರಿಹಾರವನ್ನು ಯೋಚಿಸುತ್ತಿದೆ. ಈ ಪರಿಹಾರಾತ್ಮಕ ಪುನಶ್ಚೇತನ ಕಾರ್ಯಕ್ರಮಕ್ಕೆ ಒಕ್ಕೂಟ ಸರ್ಕಾರ ಅನುದಾನವನ್ನು ನೀಡಿಲ್ಲ. ನಮ್ಮ ಕರ್ನಾಟಕ ಸರ್ಕಾರಕ್ಕೆ ಇಂತಹ ಒಂದು ಬೃಹತ್ ಸಮಸ್ಯೆಯನ್ನು ಗುರುತಿಸಲೂ ಸಾಧ್ಯವಾಗಿಲ್ಲ. ಇನ್ನು ಪರಿಹಾರದ ಬಗ್ಗೆ ಯಾವ ಸೂಚನೆಯೂ ಕರ್ನಾಟಕ 2022–23ರ ಬಜೆಟ್ಟಿನಲ್ಲಿ ಇಲ್ಲ. ಕರ್ನಾಟಕ ಆರ್ಥಿಕ ಸಮೀಕ್ಷೆ 2021–22ರಲ್ಲಿಯೂ ಇದರ ವಿಶ್ಲೇಷಣೆಯಿಲ್ಲ. ಬರೀ ಪರೀಕ್ಷೆ–ಪರೀಕ್ಷೆ ಎಂದು ನಮ್ಮ ಶಿಕ್ಷಣ ಮಂತ್ರಿಗಳು ಚಡಪಡಿಸಿದರೇ ವಿನಾ ಪೆಂಡಮಿಕ್‌ನಿಂದ ಜರ್ಜರಿತವಾದ ಗ್ರಾಮೀಣ ಪ.ಜಾ., ಪ.ಪಂ. ಮತ್ತು ಒಬಿಸಿ ಮಕ್ಕಳ ಶೈಕ್ಷಣಿಕ ಬದುಕನ್ನು ಮರುಕಟ್ಟುವ ಬಗ್ಗೆ ರವಷ್ಟು ಯೋಚಿಸಿದಂತೆ ಕಾಣಲಿಲ್ಲ. ಈ ಮಕ್ಕಳ ಸಂಖ್ಯೆ 91 ಲಕ್ಷ ಮೀರುತ್ತದೆ. ಈ ಮಕ್ಕಳ ಶೈಕ್ಷಣಿಕ ಪುನಶ್ಚೇತನದ ಬಗ್ಗೆ ಕಾರ್ಯಕ್ರಮ ರೂಪಿಸದಿದ್ದರೆ ಈ 91 ಲಕ್ಷ ಮಕ್ಕಳ ಭವಿಷ್ಯ ಅಂಧಕಾರಮಯವಾಗುತ್ತದೆ. ಅದರಲ್ಲೂ ಹಿಂದುಳಿದ ಜಿಲ್ಲೆಗಳಲ್ಲಿ 6–59 ತಿಂಗಳ ವಯೋಮಾನದ ಒಟ್ಟು ಮಕ್ಕಳಲ್ಲಿ ಶೇ. 70 ರಷ್ಟು ಮಕ್ಕಳು ಅನಿಮಿಯ ಎದುರಿಸುತ್ತಿದ್ದಾರೆ ಎಂಬುದನ್ನು ಎನ್.ಎಫ್.ಎಚ್.ಎಸ್ 5 ವರದಿ (2019–2020) ಬಹಿರಂಗ ಪಡಿಸಿದೆ. ಈ ಜಿಲ್ಲೆಗಳಲ್ಲಿ ಶೇ. 30 ರಿಂದ ಶೇ. 35 ರಷ್ಟು ಜನರು ಬಹುಮುಖಿ ಬಡತನವನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ನೀತಿ ಆಯೋಗದ ಬಹುಮುಖಿ ಬಡತನ ಸೂಚ್ಯಂಕ ವರದಿಯಲ್ಲಿ ಗುರುತಿಸಲಾಗಿದೆ(2021). ಈ ಹಿನ್ನೆಲೆಯಲ್ಲಿ ಪೆಂಡಮಿಕ್‌ನಿಂದಾಗಿ ಶಿಕ್ಷಣ ವಂಚಿತ ಮಕ್ಕಳ ಬದುಕನ್ನು ಕುರಿತು ಯೋಚಿಸಬೇಕಾಗಿದೆ.

ಬಜೆಟ್ಟಿನಲ್ಲಿ ಶಿಕ್ಷಣಕ್ಕೆ ಅನುದಾನ

ಕರ್ನಾಟಕ ಸರ್ಕಾರ 2021–22ರ ಬಜೆಟ್ಟಿನಲ್ಲಿನ ಒಟ್ಟು ಶಿಕ್ಷಣಕ್ಕೆ ಮೀಸಲಿಟ್ಟ ಅನುದಾನ ರೂ.2,63,46.16 ಕೋಟಿ. ಇದು ಅದರ ಒಟ್ಟು ವೆಚ್ಚದ ಶೇ.10.70ರಷ್ಟಾಗುತ್ತದೆ. ಪ್ರಸಕ್ತ ವರ್ಷ 2022–23ರಲ್ಲಿ ಒಟ್ಟು ಶಿಕ್ಷಣಕ್ಕೆ ನೀಡಲಾದ ಅನುದಾನ ರೂ.2,85,558.65 ಕೋಟಿ. ಇದು ಬಜೆಟ್ ವೆಚ್ಚದ ಶೇ. 10.74 ರಷ್ಟಾಗುತ್ತದೆ. ಅಂದರೆ ಅನುದಾನವನ್ನು ತೀವ್ರ ಹೆಚ್ಚಿಸಿಲ್ಲ. ಒಟ್ಟು ಶಿಕ್ಷಣ ಅನುದಾನದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ 2021–22ರಲ್ಲಿ ನೀಡಿದ್ದು ರೂ. 23054.01 ಕೋಟಿಯಾದರೆ 2022–23ರಲ್ಲಿನ ಅನುದಾನ ರೂ.24698.99 ಕೋಟಿ. ಇದರಲ್ಲಿ ಹೆಚ್ಚಿನ ಭಾಗ ರೆವಿನ್ಯೂ ವೆಚ್ಚವಾಗಿದೆ. ಅಂದರೆ ಶಿಕ್ಷಕರ ಸಂಬಳ ಮತ್ತು ಇತರೆ ವೆಚ್ಚಕ್ಕೆ ಹೋಗುತ್ತದೆ. ಇದರಲ್ಲಿ 2021–22 ಮತ್ತು 2022–23ರಲ್ಲಿ ಶೈಕ್ಷಣಿಕ ಧಾರೆಯಿಂದ ಹೊರಬಿದ್ದ ಮಕ್ಕಳಿಗೆ ಸಂಬಂಧಿಸಿದಂತೆ ಯಾವುದೇ ಕಾರ್ಯಕ್ರಮವಿಲ್ಲ. ಈ ಸಮಸ್ಯೆಯ ಬಗ್ಗೆ ಶಿಕ್ಷಣ ಮಂತ್ರಿಯಾಗಲಿ ಅಥವಾ ಹಣಕಾಸು(ಮುಖ್ಯಮಂತ್ರಿ) ಮಂತ್ರಿಗಳಾಗಲಿ ಚಕಾರವೆತ್ತಿಲ್ಲ.

ಈಗಲೂ ಕಾಲ ಮಿಂಚಿಲ್ಲ. ಹಿಜಾಬ್, ಸಮವಸ್ತ್ರ, ಟಿಪ್ಪೂ ಪಾಠ ಬಿಡಬೇಕೋ–ಭಗವದ್ಗೀತೆ ಪಾಠ ಸೇರಿಸಬೇಕೋ, ಹಲಾಲ್, ಮುಸ್ಲಿಮ್ ವ್ಯಾಪಾರಿಗಳಿಗೆ ಬಹಿಷ್ಕಾರ, ಲವ್ ಜಿಹಾದ್, ದೇವಸ್ಥಾನಗಳ ಖಾಸಗೀಕರಣ, ಮಸೀದಿಗಳಲ್ಲಿನ ಧ್ವನಿವರ್ಧಕ ನಿಲ್ಲಿಸುವುದು ಮುಂತಾದ ಭಾವನಾತ್ಮಕ–ವಿಭಜನಾತ್ಮಕ– ದ್ವೇಷಪೂರಿತ ಸಂಗತಿಗಳನ್ನು ಕೈಬಿಟ್ಟು ಘನ ಸರ್ಕಾರವು ಜನರ ಬದುಕನ್ನು, ಅವರ ಜೀವನೋಪಾಯವನ್ನು ಕಟ್ಟುವುದರ ಬಗ್ಗೆ ಮತ್ತು ಸರಿಸುಮಾರು 90 ಲಕ್ಷ ಮಕ್ಕಳ ಶೈಕ್ಷಣಿಕ ಪುನಶ್ಚೇತನದ ಬಗ್ಗೆ ಗಮನ ನೀಡಬೇಕು. ಜಸ್ಟೀಸ್ ಎಚ್. ಎನ್ ನಾಗಮೋಹನದಾಸ್ ಹೇಳುವಂತೆ ಇಂದು ಕರ್ನಾಟಕದಲ್ಲಿ ನಡೆದಿರುವುದು 'ಜನಾಂಗೀಯವಾದ'ವಾಗಿದೆ. ಸಮಾಜದಲ್ಲಿ ಶೇ. 90 ರಷ್ಟಿರುವ ಶೂದ್ರರು–ದಲಿತರ ಮೇಲೆ ಶೇ. 10 ರಷ್ಟಿರುವ ತ್ರೈವರ್ಣಿಕರು ನಡೆಸಿರುವ ಆಕ್ರಮಣ ಇದಾಗಿದೆ. 'ತ್ರೈವರ್ಣೀಕತೆ ವರ್ಸ್‌ಸ್ ದಲಿತಾಯಿಸಮ್–ಶೂದ್ರಾಯಿಸಮ್' ಎಂಬ ಜನಾಂಗೀಯತೆ ಇದಾಗಿದೆ. ಈ ಜನಾಂಗೀಯತೆಯಲ್ಲಿ ನಮ್ಮ 90 ಲಕ್ಷಕ್ಕೂ ಮೀರಿದ ಶಿಕ್ಷಣ ವಂಚಿತ ಮಕ್ಕಳ ಬಗ್ಗೆ ಸರ್ಕಾರ ಘನಮೌನ ವಹಿಸಿದೆ.

ಶೈಕ್ಷಣಿಕ ಪುನಶ್ಚೇತನ ಕಾರ್ಯಕ್ರಮ

ನಮ್ಮ ಪ್ರಾಥಮಿಕ ಶಿಕ್ಷಣದಲ್ಲಿ ಕೊರೊನಾ ಪೆಂಡಮಿಕ್ ಸಮಸ್ಯೆಯಿಂದಾಗಿ ಮಕ್ಕಳಿಗೆ ಏನೆಲ್ಲ ಸಮಸ್ಯೆಗಳು ಉಂಟಾಗಿವೆ ಎಂಬುದನ್ನು ತಳಸ್ಪರ್ಶಿಯಾಗಿ ಮತ್ತು ಪ್ರಾದೇಶಿಕವಾಗಿ ಮೊದಲು ಗುರುತಿಸುವ ಕೆಲಸವಾಗಬೇಕು. ಇದಕ್ಕಾಗಿ ಸರ್ಕಾರವು ಒಂದು ತಜ್ಞರ ಸಮಿತಿಯನ್ನು ರಚಿಸಬೇಕು. ಎರಡನೆಯದಾಗಿ ಗ್ರಾಮೀಣ ಪ್ರದೇಶದಲ್ಲಿ ಡಿಜಿಟಲೈಸೇಶನ್‌ಗೆ ಸ್ವಲ್ಪ ಸಮಯ ಬಿಡುವು ಕೊಟ್ಟು ನೇರ ಪಾಠ ಹೇಳುವ ವಿಧಾನವನ್ನು ಮತ್ತು ಪರಿಣಾಮಕಾರಿ ಕಲಿಕೆಯ ಬಗ್ಗೆ ಬೃಹತ್ ಯೋಜನೆಯನ್ನು ಹಮ್ಮಿಕೊಳ್ಳಬೇಕು. ಇದಕ್ಕಾಗಿ ವಿಶೇಷವಾದ ಉಪಯುಕ್ತ ವರ್ಕ್‌ಬುಕ್ಕುಗಳನ್ನು ಸಿದ್ಧಪಡಿಸುವ ಬಗ್ಗೆ ನಾವು ಯೋಚಿಸಬೇಕು. 'ಬೆಂಗಳೂರೇ ಕರ್ನಾಟಕವಲ್ಲ' ಎಂಬುದನ್ನು ನಾವು ಮೊದಲು ಗಮನಿಸಬೇಕು. ಜಿಲ್ಲಾಮಟ್ಟದಲ್ಲಿ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ವಿಶೇಷವಾಗಿ ಪರಿಹಾರಾತ್ಮಕ ಶಿಕ್ಷಣ ನೀಡುವದಕ್ಕೆ ನಿವೃತ್ತ ಶಿಕ್ಷಕರ, ಗ್ರಾಮೀಣ ಪ್ರದೇಸದಲ್ಲಿ ನೆಲೆಸಿರುವ ಯುಕ–ಯುವತಿಯರ ಮತ್ತು ಕಾಲೇಜುಗಳಲ್ಲಿ ಕಲಿಯುತ್ತಿರುವ ಆಸಕ್ತ ಯುಜನರ ಒಂದು ಪಡೆಯನ್ನು ಇದಕ್ಕಾಗಿ ರೂಪಿಸುವ ಅಗತ್ಯವಿದೆ. ಶಿಕ್ಷಕರ ವರ್ಗಾವಣೆ, ಬಡ್ತಿ, ಎಸ್‌ಡಿಎಮ್‌ಸಿ ಮುಂತಾದ ಸಂಗತಿಗಳನ್ನು ಸದ್ಯಕ್ಕೆ ಪಕ್ಕಕ್ಕಿಟ್ಟು ಶಿಕ್ಷಣ ಇಲಾಖೆಯ ಅಧಿಕಾರಿಗಳು (ಡಿಡಿಪಿಐ–ಬಿಇಒ) ಅಧಿಕಾರಿಗಳು ಶಿಕ್ಷಣವನ್ನು ಕಳೆದುಕೊಂಡು ಕಂಗಾಲಾಗಿರುವ ಮಕ್ಕಳ ಶೈಕ್ಷಣಿಕ ಪುನಶ್ಚೇತನದ ಬಗ್ಗೆ ಗಮನ ನೀಡಬೇಕು. ಈ

ಪುಟ 14 ಕ್ಕೆ

ಕೋಷ್ಟಕ 1. ಸಾಮಾಜಿಕ ಗುಂಪುವಾರು ಮಕ್ಕಳ ದಾಖಲಾತಿ 2018–19

ವಿವರಗಳು	ಸರ್ಕಾರಿ ಶಾಲೆ	ಅನುದಾನಿತ ಶಾಲೆ	ಖಾಸಗಿ ಶಾಲೆ	ಇತರೆ ಶಾಲೆ	ಒಟ್ಟು
ಸಾಮಾನ್ಯ ವರ್ಗ	1,34,663	91,037	997,628	35,884	12,59,212
ಇತರೆ ಹಿಂದುಳಿದ ವರ್ಗ	2,44,2783	8,63,207	2,74,488	1,13,032	6,36,3511
ಪರಿಶಿಷ್ಟ ಜಾತಿ	11,06,513	2,87,669	4,94,580	77,804	19,66,566
ಪರಿಶಿಷ್ಟ ವರ್ಗ	4,95,295	94,643	1,64,612	33,541	7,88,091
ಒಟ್ಟು	43,79,254 (ಶೇ.42.20)	13,36,556 (ಶೇ.12.88)	44,01,309 (ಶೇ.42.41)	2,60,261 (ಶೇ.2.51)	1,03,77,380 (100.00)

ಮೂಲ: ಕರ್ನಾಟಕ ಸರ್ಕಾರ, ಸ್ಕೂಲ್ ಎಜಿಕೇಶನ್ ಇನ್ ಕರ್ನಾಟಕ, 2018–19, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.

ಜಾತಿ ಮತ್ತು ಮತೀಯವಾದ ಅಂಬೇಡ್ಕರ್ ಚಿಂತನೆಗಳು

ಬಿ. ಶ್ರೀಪಾದ ಭಟ್



ಪೀಠಿಕೆ

2015ರಲ್ಲಿ ಮೋದಿ ಸರಕಾರವು ಪ್ರತಿ ವರ್ಷ ಮಾರ್ಚ 26ರಂದು ಸಂವಿಧಾನ ದಿನ ಆಚರಿಸಬೇಕೆಂದು ನಿರ್ದರಿಸಿತು. ಇದು ಸ್ವಾಗತಾರ್ಹವೂ ಹೌದು. ಅದರೆ ಎಂತಹ ವೈರುದ್ಯವೆಂದರೆ ಈ ಸಂವಿಧಾನ ಅಚರಣೆಯು ನಾಮಕಾವಸ್ತೆಗೆ ಸೀಮಿತಗೊಂಡು ಅದನ್ನು ಅಣಕಿಸುವಂತೆ ಬೀದಿ ಬೀದಿಗಳಲ್ಲಿ ಮುಸ್ಲಿಮರು, ದಲಿತರ ವಿರುದ್ಧ ಹಿಂಸಾತ್ಮಕ ಘಟನೆಗಳು ನಡೆಯುತ್ತಿವೆ. ಕಳೆದ ಎಂಟು ವರ್ಷಗಳಿಂದ ಇಲ್ಲಿನ ಸಮಾಜವನ್ನು ಮತೀಯವಾದೀಕರಣಗೊಳಿಸಿ, ಹಿಂದುತ್ವದ ರಾಷ್ಟ್ರೀಯವಾದದ ಮೂಲಕ ಮುಸ್ಲಿಂರು ಮತ್ತು ವಂಚಿತ ಸಮುದಾಯಗಳ ಮೇಲೆ ನಿರಂತರ ಹಲ್ಲೆ, ದಾಳಿ, ಹತ್ಯೆಗಳು ನಡೆಯುತ್ತಿದೆ. ಡಿಸೆಂಬರ್ 2021ರಲ್ಲಿ ನಡೆದ ಸಮಾವೇಶವೊಂದರಲ್ಲಿ ಭಾಗವಹಿಸಿ ಮಾತನಾಡಿದ ಪೂಜಾ ಶಕುನ್ ಪಾಂಡೆ 'ನಮ್ಮಂತಹ 100 ಜನರು ಸೈನಿಕರಾಗಿ 2 ಮಿಲಿಯನ್ ಮುಸ್ಲಿಂರನ್ನು ಕೊಲೆ ಮಾಡಲು ಮಂದಾಗಬೇಕು. ಭಾರತವನ್ನು ರಕ್ಷಿಸಿ ಹಿಂದೂ ರಾಷ್ಟ್ರನ್ನಾಗಿಸೋಣ' ಎಂದು ಪ್ರಚೋದನಕಾರಿ ಭಾಷಣ ಮಾಡಿದರು. ಮುಸ್ಲಿಂರ ವಿರುದ್ಧ ಹಿಂಸೆಯನ್ನು ವೈಭವೀಕರಿಸುವ ಇಂತಹ ನೂರಾರು ಪ್ರಕರಣಗಳು ವರದಿಯಾಗಿವೆ. ಆದರೆ ಯಾರ ವಿರುದ್ಧವೂ ಕ್ರಮ ತೆಗೆದುಕೊಂಡಿಲ್ಲ. ಕೆಲವರ ವಿರುದ್ದ ಒಲ್ಲದ ಮನಸ್ಸಿನಿಂದ ಎಫ್.ಐ.ಆರ್. ದಾಖಲಿಸಿಕೊಂಡಿದ್ದಾರೆ. ಆದರೆ ಯ ಯಾರೊಬ್ಬರನ್ನೂ ಇದುವರೆಗೆ ಬಂಧಿಸಿಲ್ಲ. ಅಂಚಿನಲ್ಲಿರುವ ಈ ಪುಂಡು ಪೋಕರಿಗಳ ಗುಂಪುಗಳು ಈಗ ಕೇಂದ್ರಕ್ಕೆ ಬಂದಿವೆ. ಈ ಮತಾಂಧರಿಗೆ ಮುಸ್ಲಿಂರು ಮತ್ತು ದಲಿತರ ವಿರುದ್ಧ ಹಲ್ಲೆ ದೌರ್ಜನ್ಯ ನಡೆಸಲು ಮುಕ್ತ ವಾತಾವರಣ ಕಲ್ಪಿಸಲಾಗಿದೆ. ಗಾಂಧಿಯನ್ನು ಕೊಂದ ಭಾರತದ ಮೊದಲ 'ಭಯೋತ್ಪಾದಕ ಸಂಘಟನೆ' ಹಿಂದೂ ಮಹಾಸಭಾ ಇಂದು ಸಕ್ರಿಯವಾಗಿ ಕಾರ್ಯಾಚರಣೆಗೆ ಇಳಿದಿದೆ. ಮೋದಿ ಅಧಿಕಾರಕ್ಕೆ ಬಂದ ಕಳೆದ ಎಂಟು ವರ್ಷಗಳಲ್ಲಿ ಈ ಮತಾಂಧ ಗುಂಪುಗಳ ಸಂಖ್ಯೆ ಹೆಚ್ಚಾಗಿದೆ. ಅವರ ಪುಂಡಾಟಿಕೆ ಮತ್ತು ಮತೀಯವಾದವೂ ದಿನ ದಿನಕ್ಕೂ ಹೆಚ್ಚುತ್ತಿದೆ. ಇಲ್ಲಿ ಬಿಜೆಪಿ ಅಧಿಕಾರದಲ್ಲಿರುವ ಸರಕಾರದ ಶಾಸಕರು, ಮಂತ್ರಿಗಳು ಸಹ ಮುಕ್ತವಾಗಿಯೇ ಮುಸ್ಲಿಂರಿಗೆ ಅವರ ಸ್ಥಾನವನ್ನು ತೋರಿಸಿಕೊಡುತ್ತೇವೆ ಎಂದು ಭಾಷಣ ಮಾಡುತ್ತಾರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಆದೇಶ ನೀಡುತ್ತಾರೆ. ಬಿಜೆಪಿ ಸರಕಾರಗಳು ಜಾರಿಗೊಳಿಸಿದ, ಜಾರಿಗೊಳಿಸಲಿರುವ ಮತಾಂತರ ನಿಷೇಧ ಕಾನೂನು, ಲವ್ ಜಿಹಾದ್ ವಿರುದ್ಧದ ಕಾನೂನು, ಗೋ ಹತ್ಯೆ ನಿಷೇಧದ ಕಾನೂನು, ಸಿಎಎ–ಎನ್‌ಆರ್‌ಸಿ ಮುಂತಾದವುಗಳು ಮುಸ್ಲಿಂರನ್ನು ಶಾಶ್ವತವಾಗಿ ಅಪರಾಧಿಗಳನ್ನಾಗಿಸುವ ಉದ್ದೇಶ ಹೊಂದಿವೆ. ಇಲ್ಲಿ ಈ ಪುಂಡರ ಗುಂಪು ಮತ್ತು ಬಿಜೆಪಿಯ ರಾಜಕಾರಣಿಗಳ ನಡುವಿನ ಈ ಮೈತ್ರಿಯ ಕಾರಣದಿಂದ 'ಭಾರತದಲ್ಲಿ ಮುಸ್ಲಿಂ ಅಸ್ಮಿತೆಯೊಂದಿಗೆ ಬದುಕುವುದು ದುಸ್ಥರವಾಗಿದೆ'. ಮತ್ತು ದಲಿತರ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಮುಸ್ಲಿಂರನ್ನು ಮತ್ತು ದಲಿತ, ಆದಿವಾಸಿಗಳನ್ನು 'ಅನ್ಯರಾಗಿಸುವ' (othering) ಈ ವ್ಯವಸ್ಥಿತ ಕಾಯಾಚರಣೆಯಿಂದಾಗಿ ಭಾರತವು ಇಂದು ನರಮೇಧದ ಬೆದರಿಕೆಯ ಅಪಾಯದಲ್ಲಿದೆ.

ದಲಿತರ ವಿರುದ್ಧ ಪ್ರತಿ 18 ನಿಮಿಷಕ್ಕೊಮ್ಮೆ ದೌರ್ಜನ್ಯ ನಡೆಯುತ್ತಿದೆ. ಶೇ.65 ಪ್ರಮಾಣದ ಆರೋಗ್ಯ ಕಾರ್ಯಕರ್ತರು ದಲಿತರ ವಾಸಿಸುವ ಸ್ಥಳಗಳಿಗೆ ಬೇಟಿ ನೀಡುವುದಿಲ್ಲ. ರಾಜಸ್ತಾನದಲ್ಲಿ ಶೇ.55, ಮದ್ಯಪ್ರದೇಶದಲ್ಲಿ ಶೇ.46.7, ಬಿಹಾರ್‌ನಲ್ಲಿ ಶೇ.39.5, ಗುಜರಾತ್‌ನಲ್ಲಿ ಶೇ.34.8, ತೆಲಂಗಾಣದಲ್ಲಿ ಶೇ.31.1, ಉತ್ತರ ಪ್ರದೇಶದಲ್ಲಿ ಶೇ.28.2 ಪ್ರಮಾಣದಲ್ಲಿ ದಲಿತರ ಮೇಲೆ ಹಲ್ಲೆಗಳಾಗುತ್ತಿವೆ. ಇತರ ರಾಜ್ಯಗಳ ಸ್ಥಿತಿಯೂ ಸಹ ಇದಕ್ಕಿಂತ ಭಿನ್ನವಾಗಿಲ್ಲ. ಪ.ಜಾತಿಯ 42,594, ಪ.ಪಂಗಡದ 421, ಹಿಂದುಳಿದ ವರ್ಗಗಳ 431 ಜನರು ಮಾನ್ಯುವಲ್ ಸ್ಕೆವೆಂಜರ್ ವೃತ್ತಿಯಲ್ಲಿದ್ದಾರೆ. ಅವರ ಸರಾಸರಿ ಆಯಸ್ಸು 40 ವರ್ಷ ಮಾತ್ರ. 4, ಮಾರ್ಚ 2022ರ ಲೀಫ್‌ಲೆಟ್ ಅಂತರ್ಜಾಲ ಪತ್ರಿಕೆಯ ಅನುಸಾರ ಜಾಗತಿಕ ಮಟ್ಟದಲ್ಲಿ ಭಾರತದ ಹಸಿವಿನ ಸೂಚ್ಯಂಕ 101ನೆ ಸ್ಥಾನ, ಪ್ರಜಾಪ್ರಭುತ್ವದ ಸೂಚ್ಯಂಕ 46ನೆ ಸ್ಥಾನ, ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕ 142ನೆ ಸ್ಥಾನ, ಲಿಂಗ ಅನುಪಾತದ ವ್ಯತ್ಯಾಸದ ಸೂಚ್ಯಂಕ 140ನೆ ಸ್ಥಾನದಲ್ಲಿದೆ. 'ಉದಾರ ಪ್ರಜಾಪ್ರಭುತ್ವ ಸೂಚ್ಯಂಕ'ದಲ್ಲಿ 93ನೆ ಸ್ಥಾನ, 'ಚುನಾವಣಾ ಪ್ರಜಾಪ್ರಭುತ್ವ ಸೂಚ್ಯಂಕ'ದಲ್ಲಿ 100ನೆ ಸ್ಥಾನ, 'ಉದಾರ ಅಂಶ ಸೂಚ್ಯಂಕ'ದಲ್ಲಿ 69ನೆ ಸ್ಥಾನ, 'ಸಮತಾವಾದ ಅಂಶ ಸೂಚ್ಯಂಕ'ದಲ್ಲಿ 114ನೆ ಸ್ಥಾನ, 'ಭಾಗವಹಿಸುವಿಕೆ ಅಂಶ ಸೂಚ್ಯಂಕ'ದಲ್ಲಿ 85ನೆ ಸ್ಥಾನ, 'ಆರ್ಥಿಕ ಸ್ವಾತಂತ್ರ್ಯ'ದಲ್ಲಿ 53.9 ಸ್ಥಾನದಲ್ಲಿದೆ 'ಜಾಗತಿಕ ಮಟ್ಟದಲ್ಲಿ ಸ್ವಾತಂತ್ರ್ಯ'ದ ಕುರಿತು ನಡೆದ ಸಮೀಕ್ಷೆಯಲ್ಲಿ 2017ರಲ್ಲಿ ಭಾರತ 77 ಅಂಕ ಗಳಿಸಿ ಸ್ವಾತಂತ್ರ್ಯವಿರುವ ದೇಶ ಎಂದು ಕರೆಯಲ್ಪಟ್ಟರೆ, 2022ರ ಹೊತ್ತಿಗೆ ಅದು 66 ಅಂಕಗಳಿಗೆ ಕುಸಿದಿದೆ ಮತ್ತು ಸಂಪೂರ್ಣ ಸ್ಯಾತಂತ್ರ್ಯವಿಲ್ಲ ಎಂದು ಹೇಳಲಾಗಿದೆ.

ಸೆಪ್ಟೆಂಬರ್, 2, 2020ರ ಫಸ್ಟ್‌ಪೋಸ್ಟ್ ಅಂತರ್ಜಾಲ ಪತ್ರಿಕೆಯ ವರದಿಯ ಪ್ರಕಾರ 2019ರ ವರದಿಯ ಅನುಸಾರ ಶೇ.14.2ರಷ್ಟಿರುವ ಮುಸ್ಲಿಂ ಜನಸಂಖ್ಯೆಯಲ್ಲಿ ಶೇ.16.6ರಷ್ಟು ಮುಸ್ಲಿಮರು ಅಪರಾಧಿಗಳೆಂದು ಶಿಕ್ಷೆಗೆ ಒಳಗಾಗಿದ್ದಾರೆ. ಶೇ.18.7ರಷ್ಟು ಮುಸ್ಲಿಂರು ವಿಚಾರಾಣಾಧೀನ ಖೈದಿಗಳಾಗಿ ಜೈಲಿನಲ್ಲಿದ್ದಾರೆ. ಶೇ. 35.8ರಷ್ಟು ಮುಸ್ಲಿಂರು ಇನ್ನೂ ವಿಚಾರಣೆಯಿಲ್ಲದೆ ಬಂಧನದಲ್ಲಿದ್ದಾರೆ. ದಲಿತರ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಶೇ. 16.6ರಷ್ಟು ಜನಸಂಖ್ಯೆಯಿರುವ ಪರಿಶಿಷ್ಟ ಜಾತಿಯ ಜನಸಂಖ್ಯೆಯಲ್ಲಿ ಶೇ.21.7ರಷ್ಟು ದಲಿತರು ಅಪರಾಧಿಗಳೆಂದು ಶಿಕ್ಷೆಗೆ ಒಳಗಾಗಿದ್ದಾರೆ. ಶೇ.21ರಷ್ಟು ದಲಿತರು ವಿಚಾರಾಣಾಧೀನ ಖೈದಿಗಳಾಗಿ ಜೈಲಿನಲ್ಲಿದ್ದಾರೆ. ಶೇ.18.15ರಷ್ಟು ದಲಿತರು ಇನ್ನೂ ವಿಚಾರಣೆಯಿಲ್ಲದೆ ಬಂಧನದಲ್ಲಿದ್ದಾರೆ. ಶೇ. 8.6ರಷ್ಟು ಜನಸಂಖ್ಯೆಯಿರುವ ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ಶೇ.13.6ರಷ್ಟು ಜನಸಂಖ್ಯೆ ಅಪರಾಧಿಗಳೆಂದು ಶಿಕ್ಷೆಗೆ ಒಳಗಾಗಿದ್ದಾರೆ. ಶೇ.10.5ರಷ್ಟು ಜನಸಂಖ್ಯೆ ವಿಚಾರಾಣಾಧೀನ ಖೈದಿಗಳಾಗಿ ಜೈಲಿನಲ್ಲಿದ್ದಾರೆ. ಶೇ.5.68ರಷ್ಟು ಜನಸಂಖ್ಯೆ ಇನ್ನೂ ವಿಚಾರಣೆಯಿಲ್ಲದೆ ಬಂಧನದಲ್ಲಿದ್ದಾರೆ. ಉತ್ತರ ಪ್ರದೇಶದಲ್ಲಿ 17,995, ಬಿಹಾರ್‌ನಲ್ಲಿ 6843, ಪಂಜಾಬ್‌ನಲ್ಲಿ 6,831 ಪ.ಜಾತಿಯ ಸಮುದಾಯದವರು ವಿಚಾರಣಾಧೀನ ಕೈದಿಗಳಾಗಿ ಜೈಲಿನಲ್ಲಿದ್ದಾರೆ. ಮದ್ಯ ಪ್ರದೇಶದಲ್ಲಿ 5,894, ಚತ್ತೀಸಘಡದಲ್ಲಿ 3,471, ಜಾರ್ಖಂಡ್‌ನಲ್ಲಿ 3336 ಪ.ಪಂಗಡದ ಸಮುದಾಯದವರು ವಿಚಾರಣಾಧೀನ ಕೈದಿಗಳಾಗಿ ಜೈಲಿನಲ್ಲಿದ್ದಾರೆ. ಉತ್ತರ ಪ್ರದೇಶದಲ್ಲಿ 21,139, ಪಶ್ಚಿಮ ಬಂಗಾಳದಲ್ಲಿ 6032, ಬಿಹಾರದಲ್ಲಿ 4758 ಮುಸ್ಲಿಮರು ವಿಚಾರಣಾಧೀನ ಕೈದಿಗಳಾಗಿ ಜೈಲಿನಲ್ಲಿದ್ದಾರೆ.

ಈ ವಿಚಾರಣಾಧೀನ ಮುಸ್ಲಿಂ ದಲಿತ ಸಮುದಾಯದ ಕೈದಿಗಳಿಗೆ ಯಾವುದೇ ನ್ಯಾಯವಾದಿಯ ವಕಾಲತ್ತು ದೊರಕುವುದಿಲ್ಲ. ಅವರ ವಿರುದ್ದ ಆರೋಪವೂ ದಾಖಲಾಗುವುದಿಲ್ಲ. ವಿಚಾರಣೆಯೂ ಆರಂಭವಾಗುವುದಿಲ್ಲ. ಅವರಿಗೆ ಜಾಮೀನು ಸಹ ದೊರಕುವುದಿಲ್ಲ. ಯಾರ ಅಂಕೆಗೂ ನಿಲುಕದ ಪ್ರತಿಕ್ರಾಂತಿಯಲ್ಲಿ ಭಾರತ ಸಿಲುಕಿಕೊಂಡಿದೆ.

ಅಂಬೇಡ್ಕರ್ ಮತ್ತು ಮತೀಯವಾದ

4.11.1927 ರಂದು 'ಬಹಿಷ್ಕೃತ ಭಾರತ' ಪತ್ರಿಕೆಗೆ ಬರೆದ ಸಂಪಾದಕೀಯದಲ್ಲಿ ಅಂಬೇಡ್ಕರ್ ಅವರು ಹೀಗೆ ಹೇಳುತ್ತಾರೆ. 'ಹಿಂದೂ ಮಹಾಸಭಾದ ಹಿಪೋಕ್ರಸಿಯನ್ನು ಬಹಳಷ್ಟು ಜನ ಅನೇಕ ಬಾರಿ ನನ್ನ ಗಮನಕ್ಕೆ ತಂದರು. ವರ್ಣಾಶ್ರಮವನ್ನು ಯಥಾಸ್ಥಿಯಲ್ಲಿ ಮುಂದುವರೆಸಿಕೊಂಡು ಹೋಗುವುದರ ಮೂಲಕ ಹಿಂದೂ ಏಕತೆಯನ್ನು ಸಾಧಿಸುವುದು ಹಿಂದೂ ಮಹಾಸಭಾದ ಗುಂಪಿನ ಬಯಕೆಯಾಗಿತ್ತು. ಆದರೆ ಅವರ ಈ ಕಸರತ್ತು ನಿರರ್ಥಕವಾದದ್ದು ಎಂದು ಅವರಿಗೆ ಅರ್ಥವಾಗದೇ ಹೋಗಿದ್ದು ಆಶ್ಚರ್ಯವಾಗುತ್ತದೆ. ಬೇರೆ ಧರ್ಮಕ್ಕೆ ಮತಾಂತರಗೊಂಡು ಈಗ ಹಿಂದೂಯಿಸಂಗೆ ಮರಳಿ ಬರಲು ಒಪ್ಪಿಕೊಂಡಿರುವ ಆ ದಡ್ಡ ಜನಗಳು ಹಿಂದೂ ಮಹಾಸಭಾದವರ ಅಸಮರ್ಥತೆಯನ್ನು ಅರ್ಥ ಮಾಡಿಕೊಂಡಿಲ್ಲ. ಆದರೆ ಈ ಮರಳಿ ಮತಾಂತರಗೊಂಡವರ ಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆ. ಉದಾಹರಣೆಗೆ ಸ್ಪರ್ಶ ಹಿಂದೂ ಆಗಿದ್ದ ನಾಯ್ಡು ಕ್ರಿಶ್ಚಿಯಾನಿಟಿಗೆ ಮತಾಂತರ ಹೊಂದಿದ್ದ. ಆದರೆ ಮರಳಿ ಹಿಂದೂ ಧರ್ಮಕ್ಕೆ ಮತಾಂತರಗೊಂಡಾಗ ಆತನ ಸಂಬಂದಿಕರು ಆತನನ್ನು ತಮ್ಮವನೆಂದು ಒಪ್ಪಿಕೊಳ್ಳಲಿಲ್ಲ. ಈ ಅವಮಾನದ ಸ್ಥಿತಿಯಿಂದ ರೋಸಿಹೋದ ನಾಯ್ಡು ಮರಳಿ ಕ್ರಿಶ್ಚಿಯಾನಿಟಿಗೆ ಮತಾಂತರಗೊಂಡ. ಮತ್ತೊಂದು ಉದಾಹರಣೆಯೆಂದರೆ ವಿಶ್ವಾಸ್ ಮತಾಂತರಕ್ಕೆ ಮೊದಲು ಅಸ್ಪೃಶ್ಯನಾಗಿದ್ದ. ನಂತರ ಕ್ರಿಶ್ಚಿಯಾನಿಟಿಗೆ ಮತಾಂತರಗೊಂಡ. ಹಿಂದೂ ಮಹಾಸಭಾದವರ ದುಷ್ಟತನದ ಪ್ರಚಾರಕ್ಕೆ ಬಲಿಯಾಗಿ ಮರಳಿ ಹಿಂದೂಯಿಸಂಗೆ ಮರಳಿದ, ಆದರೆ ಮತ್ತೆ ಅಸ್ಪೃಶ್ಯನಾಗಬೇಕಾಯಿತು. ಆತನಿಗೆ ಮತ್ತೆ ಬುದ್ಧಿ ಬಂದು ಮರಳಿ ಕ್ರಿಶ್ಚಿಯಾನಿಟಿಗೆ ಹೋಗುತ್ತಾನೆಂದು ಆಶಿಸೋಣ. ಕ್ರಿಶ್ಚಿಯಾನಿಟಿಗೆ ಮತಾಂತರಗೊಂಡ ಅಸ್ಪೃಶ್ಯರೆಲ್ಲರೂ ವಿಶ್ವಾಸನಿಂದ ಪಾಠ ಕಲಿಯುತ್ತಾರೆಂದು ನಾನು ನಂಬಿದ್ದೇನೆ.

ಸ್ಪೃಶ್ಯ ಹಿಂದೂಗಳು ಅಸ್ಪೃಶ್ಯರಿಗೆ ಅವರ ಆಯ್ಕೆಯ ಅನುಸಾರ ಸಂತೋಷಕರ ಜೀವನ ನಡೆಸಲು ಅವರು ಕೆಳಜಾತಿಯರೆಂಬ ಕಾರಣಕ್ಕೆ ಅನುವು ಮಾಡಿಕೊಡುವುದಿಲ್ಲ. ಹಿಂದೂಯಿಸಂ ಅನ್ನು ತೊರೆಯುವವರೆಗೂ ಅವರ ಪರಿಸ್ಥಿತಿ ಸುಧಾರಿಸುವುದಿಲ್ಲ. ತಮ್ಮ ಧರ್ಮವನ್ನು ಬಿಟ್ಟು ಮತಾಂತರಗೊಳ್ಳಿರೆಂದು ಹಿತವಚನ ಕೊಡುವುದರ ಹೊರತಾಗಿ ಮತ್ತೇನನ್ನು ತಾನೆ ಹೇಳಲು ಸಾಧ್ಯ?

ಹಿಂದೂ ಮಹಾಸಭಾವು ಬೇರೆ ಧರ್ಮಕ್ಕೆ ಮತಾಂತರಗೊಂಡ ಹಿಂದೂಗಳನ್ನು ಮರಳಿ ತಮ್ಮ ಧರ್ಮಕ್ಕೆ ಕರೆತಂದು ಹಿಂದೂಗಳ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದಿದ್ದಾರೆ. ಆದರೆ ಇವರು ಹಿಂದೂಗಳು ಒಂದೇ ವರ್ಣದವರೆಂದು ಘೋಷಿಸಲು ಸಿದ್ಧರಿಲ್ಲ. ಕ್ರಿಶ್ಚಿಯಾನಿಟಿ, ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡವರೆಲ್ಲ ಕೆಳಜಾತಿಗೆ ಸೇರಿದವರು. ಹಿಂದೂ ಧರ್ಮದಲ್ಲಿ ಅವರು ಕೆಳ ವರ್ಣದವರೆಂದು ಅವಮಾನಿತರಾಗಿ ಕ್ರಿಶ್ಚಿಯಾನಿಟಿ, ಇಸ್ಲಾಂ ಧರ್ಮಗಳಲ್ಲಿ ಒಂದೇ ವರ್ಣದ ಕಾರಣಕ್ಕೆ ಆ ಧರ್ಮಕ್ಕೆ ಮತಾಂತರಗೊಂಡರು. ತಮಗೆ ಅವಕಾಶ ದೊರೆತಾಗಲೆಲ್ಲ ಬ್ರಾಹ್ಮಣೀಕರಣಗೊಂಡ ಜನರು ಬ್ರಾಹ್ಮಣ್ಯವನ್ನು ರಕ್ಷಿಸಲು ಪ್ರಯತ್ನಿಸುತ್ತಾರೆ' ಎಂದು ಬಾಬಾ ಸಾಹೇಬರು ವಿವರಿಸುತ್ತಾರೆ.

17 ಡಿಸೆಂಬರ್ 1946ರಂದು ಸಂವಿಧಾನ ಸಭೆಯಲ್ಲಿನ ಚರ್ಚೆಯಲ್ಲಿ ನೆಹರೂ ಪ್ರಸ್ತಾಪಿಸಿದ ಉದ್ದೇಶಗಳ ಕುರಿತಾದ ಗೊತ್ತುವಳಿ ಕುರಿತಾದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅಂಬೇಡ್ಕರ್ ರವರು 'ಇಂದು ಭಾರತವು ಯುದ್ಧವನ್ನು ಎದುರಿಸಬೇಕಾದ ಪರಿಸ್ಥಿತಿ ನಿರ್ಮಾಣವಾದರೆ ಅದು ಬ್ರಿಟೀಷರ ವಿರುದ್ಧದ ಯುದ್ಧವಲ್ಲ. ಅದು ಮುಸ್ಲಿಂರ ಮೇಲೆ ನಡೆಯುವ ಯುದ್ಧ... ಬಲವಂತವಾಗಿ ಈ ಹಿಂದೂ–ಮುಸ್ಲಿಂ ಬಿಕ್ಕಟ್ಟನ್ನು ಪರಿಹರಿಸುತ್ತೇವೆ ಎನ್ನುವವರು ಮತ್ತೊಂದು ಯುದ್ಧದ ಮೂಲಕ ಪರಿಹರಿಸಿದಂತೆ.. ಅದು ಮುಸ್ಲಿಂರನ್ನು ನಿಗ್ರಹಿಸುವಲ್ಲಿಗೆ ಪರ್ಯಾವಸಾನಗೊಳ್ಳುತ್ತದೆ...' ಎಂದು ಎಚ್ಚರಿಸಿದ್ದರು. ಮುಂದುವರೆದು 'ಈ ರಾಜಕೀಯ ಬಿಕ್ಕಟ್ಟುಗಳನ್ನು ಯುದ್ಧದ ಮೂಲಕ ಪರಿಹರಿಸುತ್ತೇನೆ ಎನ್ನುವ ಮಾತುಗಳನ್ನು ಕೇಳಿದಾಗ ನಾನು ಭಯಗೊಂಡಿದ್ದೇನೆ' ಎಂದು ಹೇಳುತ್ತಾರೆ. ಆದರೆ 2014 ರಿಂದ ಇಲ್ಲಿಯವರೆಗಿನ ಭಾರತದ ಈ ವಾತಾವರಣ ಕಂಡಿದ್ದರೆ ಅಂಬೇಡ್ಕರ್ ಮತ್ತಷ್ಟು ಭಯದಿಂದ ತತ್ತರಿಸುತ್ತಿದ್ದರು. ಅದೇ ಸಭೆಯಲ್ಲಿ ಮಾತನಾಡುತ್ತಾ 'ಅಧಿಕಾರವನ್ನು ಕೊಡುವುದು ಸುಲಭ, ಆದರೆ ವಿವೇಕವನ್ನು ಕೊಡುವುದು ಕಷ್ಟ' ಎಂದು ಹೇಳುತ್ತಾ 'ಈ ಸ್ವಾಯುತ್ತತೆಯ ಅಧಿಕಾರವನ್ನು ವಿವೇಕದಿಂದ ಬಳಸಬೇಕು' ಎಂದು ಎಚ್ಚರಿಸಿದ್ದರು.

ಆದರೆ ಸಂಘ ಪರಿವಾರವು ಅಂಬೇಡ್ಕರ್ ಅವರನ್ನು ತಮ್ಮ ಹಿಂದುತ್ವದ ಸಿದ್ದಾಂತದೊಳಗೆ ಜೀರ್ಣಿಸಿಕೊಳ್ಳಲು ಹರಸಾಹಸ ಮಾಡುತ್ತಿದೆ. 2003ರಲ್ಲಿ ವಿನಯ್ ಕಟಿಯಾರ್ 'ಹೆಡಗೇವಾರ್ ತರಹ ಅಂಬೇಡ್ಕರ್ ಸಹ ಹಿಂದೂ ರಾಷ್ಟ್ರದ ಬೆಂಬಲಿಗರಾಗಿದ್ದರು' ಎಂದು ಹೇಳಿದ್ದಾರೆ. 2015ರ ಅಂಬೇಡ್ಕರ್ 124ನೆ ಜನ್ಮ ದಿನಾಚರಣೆ ಸಂದರ್ಭದಲ್ಲಿ ಆರೆಸ್ಸಸ್ ಹಿಂದಿ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ವಿಶೇಷಾಂಕಗಳನ್ನು ಪ್ರಕಟಿಸಿತು. ಪ್ರೊ.ಶಂಶುಲ್ ಇಸ್ಲಾಂ ಅವರು 'ಅದರಲ್ಲಿನ ಒಂದು ಲೇಖನದಲ್ಲಿ ಆರೆಸ್ಸಸ್‌ನ ಜಂಟಿ ಕಾರ್ಯದರ್ಶಿ ಕ್ರಿಷ್ಣ ಗೋಪಾಲ್ ಅವರು 'ಅಸ್ಪೃಶ್ಯತೆಯು ಹಿಂದೂಯಿಸಂನ ಭಾಗವಲ್ಲ, ಅದು ಮುಸ್ಲಿಂ ಆಡಳಿತದಿಂದ ಹುಟ್ಟಿಕೊಂಡಿದೆ... ಅಂಬೇಡ್ಕರ್ ಅವರು 12–13 ನೂರು ವರ್ಷಗಳ ಹಿಂದೆ ಅಸ್ಪೃಶ್ಯತೆ ಆಚರಣೆಗೆ ಬಂದಿದೆ ಎಂದು ಹೇಳಿದ್ದರೆಂದು ಬರೆಯುತ್ತಾರೆ... ಆದರೆ 'ಅಸ್ಪೃಶ್ಯರಿಗೆ ಗಾಂಧಿ ಮತ್ತು ಕಾಂಗ್ರೆಸ್ ಏನು ಮಾಡಿದೆ' ಎನ್ನುವ ಲೇಖನದಲ್ಲಿ 'ಹಿಂದೂಯಿಸಂ ಮತ್ತು ಸಾಮಾಜಿಕ ಒಗ್ಗೂಡುವಿಕೆ ಎಂದಿಗೂ ಹೊಂದಿಕೊಳ್ಳುವುದಿಲ್ಲ. ಹಿಂದೂಯಿಸಂನ ತತ್ವವು ಸಾಮಾಜಿಕ ಪ್ರತ್ಯೇಕತೆಯನ್ನು ಬೋಧಿಸುತ್ತದೆ. ಹಿಂದೂಗಳು ಒಂದಾಗಿ ಬಾಳಬೇಕೆಂದರೆ ಅವರು ಹಿಂದೂಯಿಸಂನ್ನು ತಿರಸ್ಕರಿಸಬೇಕು. ಹಿಂದೂಯಿಸಂನ್ನು ಉಲ್ಲಂಘಿಸದೆ ಒಂದಾಗಿರಲು ಸಾಧ್ಯವಿಲ್ಲ. ಹಿಂದೂಗಳ ಒಗ್ಗಟ್ಟಿಗೆ ಹಿಂದೂಯಿಸಂ ಬಲು ದೊಡ್ಡ ಅಡ್ಡಿಯಾಗಿದೆ. ಹಿಂದೂಯಿಸಂ ಸಾಮಾಜಿಕ ಒಗ್ಗೂಡುವಿಕೆಗೆ ತಳಹದಿಯಾದ ಒಳಗೊಳ್ಳುವಿಕೆಯನ್ನು ಬೆಂಬಲಿಸುವುದಿಲ್ಲ, ಬದಲಿಗೆ

ಪುಟ 10 ಕ್ಕೆ



23ನೇ ಮಹಾಧಿವೇಶನ: ಭಾರತವನ್ನು ಉಳಿಸಲು ಜಾತ್ಯಾತೀತ ಶಕ್ತಿಗಳ ವಿಶಾಲರಂಗ – ಸಿಪಿಐ(ಎಂ) ಕರೆ

ಸಂವಿಧಾನಿಕ ಗಣತಂತ್ರದ ರಕ್ಷಣೆಗೆ ಹಿಂದುತ್ವ ಕೋಮುವಾದದ ವಿರುದ್ಧ ಜಾತ್ಯತೀತ ಶಕ್ತಿಗಳ ವಿಶಾಲ ರಂಗ–ದೇಶಪ್ರೇಮಿಗಳಿಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಕರೆ

ಒಂದು ಉತ್ತಮ ಬದುಕಿಗಾಗಿ, ಭಾರತೀಯ ಗಣತಂತ್ರದ ಮತ್ತು ಸಂವಿಧಾನದ ಜಾತ್ಯತೀತ ಪ್ರಜಾಸತ್ತಾತ್ಮಕ ಚಾರಿತ್ರ್ಯವನ್ನು ಕಾಪಾಡಿಕೊಳ್ಳಲಿಕ್ಕಾಗಿ ಜನತೆಯ ಹೋರಾಟಗಳನ್ನು ಬಲಪಡಿಸಲು ಬಿಜೆಪಿಯನ್ನು ಒಬ್ಬಂಟಿಯಾಗಿಸುವುದು ಮತ್ತು ಸೋಲಿಸುವುದು ಅತ್ಯಗತ್ಯವಾಗಿದೆ. ಇದು ಸಾಧ್ಯವಾಗಬೇಕಾದರೆ ಸಮಸ್ತ ಭಾರತೀಯ ದೇಶಪ್ರೇಮಿಗಳು ಜೊತೆಗೂಡಿ ನಮ್ಮ ಸಂವಿಧಾನಿಕ ಗಣತಂತ್ರವನ್ನು ಕಾಪಾಡಿಕೊಳ್ಳಲು ಮತ್ತು ಪರ್ಯಾಯ ಜನಪರ ಧೋರಣೆಗಳಿಗಾಗಿ ಹೋರಾಟಗಳನ್ನು ಬಲಪಡಿಸಬೇಕಾಗಿದೆ, ಇದಕ್ಕಾಗಿ ಹಿಂದುತ್ವ ಕೋಮುವಾದದ ವಿರುದ್ಧ ಜಾತ್ಯತೀತ ಶಕ್ತಿಗಳ ಅತ್ಯಂತ ವಿಶಾಲ ರಂಗವನ್ನು ಬೆಸೆಯುವ ದೃಢನಿರ್ಧಾರವನ್ನು ಕೈಗೊಳ್ಳಬೇಕಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ನರಳುತ್ತಿರುವ ಜನಗಳಿಗೆ ಪರಿಹಾರ ಒದಗಿಸುವ ಬಗ್ಗೆ ಯೋಚಿಸುವ ಬದಲು ಬಿಜೆಪಿಯ ಕೇಂದ್ರ ಸರಕಾರ ಹೆಚ್ಚೆಚ್ಚು ಆರ್ಥಿಕ ಹೊರೆಗಳನ್ನು ಹಾಕುತ್ತಿದೆ, ಪ್ರತಿದಿನ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸಿ ಹಣದುಬ್ಬರ ನಾಗಾಲೋಟ ಹೂಡುವಂತೆ ಮಾಡುತ್ತಿದೆ. ಹೆಚ್ಚುತ್ತಿರುವ ನಿರುದ್ಯೋಗ, ಬಡತನ ಮತ್ತು ಹಸಿವಿನ ಜೊತೆಗೆ ಈ ಹಣದುಬ್ಬರ ಜನಗಳ ಬದುಕುಗಳನ್ನು ನಾಶಪಡಿಸುತ್ತಿದೆ. ಆದರೂ ಬಿಜೆಪಿ ಮತ್ತು ಆರೆಸ್ಸೆಸ್ ಇವೆಲ್ಲವನ್ನೂ ಮೀರಿ ನಿಲ್ಲುವ ಹಿಂದುತ್ವದ ಕಥನವನ್ನು ಕಟ್ಟುವಲ್ಲಿ ಯಶಸ್ವಿಯಾಗಿವೆ. ದ್ವೇಷ, ವಿಷ ಮತ್ತು ಹಿಂಸಾಚಾರದಿಂದ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಮೂಲಕ ಅವು ಭಾರತೀಯ ಸಮಾಜವನ್ನು ಧ್ರುವೀಕರಿಸುತ್ತಿವೆ. ಈ ರೀತಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದೇ ಅದರ ರಾಜಕೀಯ/ಚುನಾವಣಾ ಅಣಿನೆರಿಕೆಯ ಬೆನ್ನೆಲುಬು. ಇಂತಹ ಸನ್ನಿವೇಶದಲ್ಲಿ ಬಿಜೆಪಿಯನ್ನು ಒಬ್ಬಂಟಿಯಾಗಿಸುವುದು ಮತ್ತು ಸೋಲಿಸುವುದು ಅತ್ಯಗತ್ಯವಾಗಿದೆ ಎಂದು ಯೆಚುರಿ ಹೇಳಿದರು.





ಅವರು ಎಪ್ರಿಲ್ 6 ರಂದು ಕೇರಳದ ಕಣ್ಣೂರಿನಲ್ಲಿ ಸಿಪಿಐ(ಎಂ)ನ 23ನೇ ಮಹಾಧಿವೇಶನವನ್ನು ಉದ್ಘಾಟಿಸುತ್ತ ಮಾತಾಡುತ್ತಿದ್ದರು.

ಎಪ್ರಿಲ್ 6 ರ ಬೆಳ್ಳಿಗೆ ಸಿಪಿಐ(ಎಂ)ನ ಹಿರಿಯ ನೇತಾರ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಎಸ್. ರಾಮಚಂದ್ರನ್ ಪಿಳ್ಳ ಕೆಂಬಾವುಟದ ಆರೋಹಣವನ್ನು ಮಾಡುವ ಮೂಲಕ 23ನೇ ಮಹಾಧಿವೇಶನ ಆರಂಭವಾಯಿತು. ದೇಶದ ಜಾತ್ಯತೀತತೆಯನ್ನು ಹಾಳುಗೆಡವುತ್ತಿರುವ ಬಿಜೆಪಿಯನ್ನು ಜನಗಳಿಂದ ದೂರ ಮಾಡುವ ಗುರಿ ಇಟ್ಟುಕೊಳ್ಳಬೇಕು ಎಂದು ಧ್ವಜಾರೋಹಣದ ನಂತರ ಮಾತಾಡುತ್ತ ಅವರು ಹೇಳಿದರು.

ಈ ಕೆಂಬಾವುಟವನ್ನು ಕೆಂಪು ಸ್ವಯಂಸೇವಕರು ರೈತ–ಕಾರ್ಮಿಕ ಹೋರಾಟದ ಐತಿಹಾಸಿಕ ಸ್ಥಳ ಪುನ್ನಪ್ರ–ವಾಯಲಾರ್‌ನಿಂದ ರಿಲೇ ಓಟದ ಮೂಲಕ ಕಣ್ಣೂರಿಗೆ ತಂದಿದ್ದರೆ, ಅದರ ಧ್ವಜಸ್ಥಂಭವನ್ನು ಇನ್ನೊಂದು ಐತಿಹಾಸಿಕ ಭೂಹೋರಾಟದ ಸ್ಥಳ ಕಯ್ಯೂರಿನಿಂದ ಮೆರವಣಿಗೆಯಲ್ಲಿ ತರಲಾಗಿತ್ತು.

ರಾಜಕೀಯ ಬಲಪಂಥದತ್ತ ಪಲ್ಲಟದ ಸನ್ನಿವೇಶ

ಸೀತಾರಾಂ ಯೆಚುರಿಯವರು ಈ ಮಹಾಧಿವೇಶನ ನಡೆಯುತ್ತಿರುವ ಸಂದರ್ಭದ ಒಂದು ಪಕ್ಷಿನೋಟವನ್ನು ತಮ್ಮ ಉದ್ಘಾಟನಾ ಭಾಷಣದಲ್ಲಿ ಪ್ರಸ್ತುತ ಪಡಿಸಿದರು. ಬಂಡವಾಳದ ಗರಿಷ್ಠ ಲಾಭಕ್ಕಾಗಿ ದಿವಾಳಿಕೋರ ನವ–ಉದಾರವಾದಿ ಧೋರಣೆಗಳನ್ನು ಮುಂದುವರೆಸಬೇಕಾದರೆ ಸರಕಾರಗಳ ಮೇಲೆ ಹತೋಟಿಯನ್ನು ಕಾಯ್ದುಕೊಳ್ಳಬೇಕೆಂದು ಭಾರತವೂ ಸೇರಿದಂತೆ ಹಲವು ದೇಶಗಳಲ್ಲಿ ರಾಜಕೀಯ ಬಲಪಂಥದತ್ತ ಪಲ್ಲಟ ಮುಂದುವರೆಯುತ್ತಿದೆ. ಇದು ಜನಗಳ ಹೆಚ್ಚುತ್ತಿರುವ ಐಕ್ಯ ಹೋರಾಟಗಳನ್ನು ಛಿದ್ರಗೊಳಿಸಲು ಜನಗಳಲ್ಲಿ ಭಾವೋದ್ರೇಕಗಳನ್ನು ಬಡಿದೆಬ್ಬಿಸಲು ಪುಟ 12 ಕ್ಕೆ



ಕರ್ನಾಟಕದ ಪ್ರತಿನಿಧಿಗಳು





ಕ್ರಾಂತಿಕಾರಿ ಹೋರಾಟಗಳು ಮತ್ತು ಕೋಮುಸೌಹಾರ್ದದ ನೆಲದಲ್ಲಿ

ಇದಕ್ಕೆ ಮೊದಲು ಮಹಾಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿರುವ ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ "ಕ್ರಾಂತಿಕಾರಿ ಹೋರಾಟಗಳ ಮತ್ತು ಕೋಮುಸೌಹಾರ್ದಧ ನೆಲವಾದ ಕಣ್ಣೂರಿಗೆ ಎಲ್ಲರನ್ನೂ ಸ್ವಾಗತಿಸಲು ನನಗೆ ಅಪಾರ ಹರ್ಷವಾಗುತ್ತಿದೆ" ಎಂದರು. ತಮ್ಮ ಸ್ವಾಗತ ಭಾಷಣದಲ್ಲಿ ಅವರು ಕೇರಳದ ಕಮ್ಯುನಿಸ್ಟ್ ಆಂದೋಲನ, ಮತ್ತು ಅದರಲ್ಲಿ ಕಣ್ಣೂರಿನ ಪಾತ್ರದ ಒಂದು ನೋಟವನ್ನು ಮುಂದಿಟ್ಟರು. ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷದ ರಚನೆಗೆ ಭೂಮಿಕೆ ಸಿದ್ಧಗೊಳಿಸಿದ ಸಭೆ ನಡೆದದ್ದು ಈ ಜಿಲ್ಲೆಯ ಪಾರಪುರಂನಲ್ಲಿ ಡಿಸೆಂಬರ್ 1939ರಲ್ಲಿ ಎಂದು ಅವರು ನೆನಪಿಸಿದರು.

ಅಲ್ಲದೆ ಭಾರತದ ಕಮ್ಯುನಿಸ್ಟ್ ಇತಿಹಾಸದ ಧ್ರುವತಾರೆಗಳಲ್ಲಿ ಒಬ್ಬರಾದ ಎ.ಕೆ. ಗೋಪಾಲನ್ ಮತ್ತು ರಾಜ್ಯದ ಜನಪ್ರಿಯ ಮುಖ್ಯಮಂತ್ರಿಯಾಗಿದ್ದ ಇ.ಕೆ. ನಾಯನಾರ್ ಕೂಡ ಇದೇ ಜಿಲ್ಲೆಯವರು ಎಂದೂ ಅವರು ನೆನಪಿಸಿದರು.

ಮಹಾಧಿವೇಶನದ ಸಾರ್ವಜನಿಕ ಸಭೆ ನಡೆಯುವ ಸ್ಥಳಕ್ಕೆ ಎಕೆಜಿ ನಗರ ಎಂದು ಹೆಸರಿಡಲಾಗಿದೆ. ಮತ್ತು ಪ್ರತಿನಿಧಿಗಳ ಅಧಿವೇಶನ ನಡೆಯುವ ಸ್ಥಳವನ್ನು ಇ.ಕೆ. ನಾಯನಾರ್ ನಗರ ಎಂದು ಹೆಸರಿಸಲಾಗಿದೆ.

ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಬೆಳೆಸುವ ತನ್ನ ಹೊಣೆಗಾರಿಕೆ

ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಪೊಲಿಟ್‌ಬ್ಯುರೊ ಸದಸ್ಯ ಮತ್ತು ಮಾಜಿ ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ತಮ್ಮ ಭಾಷಣದ ಆರಂಭದಲ್ಲಿ ಕಯ್ಯೂರಿನ ಹುತಾತ್ಮರಾದ ಮಡತಿಲ್ ಅಪ್ಪು, ಕುಂಜಂಬು ನಾಯರ್, ಚಿರುಕಂಡನ್ ಮತ್ತು ಅಬುಬಕರ್ ಅವರುಗಳನ್ನು ಸ್ಮರಿಸಿದರು. ಸ್ವಾತಂತ್ರ್ಯದ ನಂತರ ದೇಶದ ಪ್ರಜಾಪ್ರಭುತ್ವ-ಜಾತ್ಯತೀತ ವ್ಯವಸ್ಥೆಗೆ ಹಿಂದೆಂದೂ ಕಾಣದಂತಹ ಸವಾಲುಗಳು ಎದುರಾಗಿರುವ ಸಂದರ್ಭದಲ್ಲಿ ಈ ಮಹಾಧಿವೇಶನ ನಡೆಯುತ್ತಿದೆ ಎಂದ ಅವರು ಇದಕ್ಕೆ ಪ್ರತಿರೋಧವಾಗಿ ಎದ್ದು ಬರುತ್ತಿರುವ ದುಡಿಯುವ ಜನಗಳ ಐಕ್ಯ ಹೋರಾಟಗಳನ್ನು ವ್ಯಾಪಕ ಗೊಳಿಸಬೇಕು, ತೀವ್ರಗೊಳಿಸಬೇಕು, ಇದನ್ನು ಜಾತ್ಯತೀತತೆ ಮತ್ತು ಒಕ್ಕೂಟ ತತ್ವದ ಮೇಲೆ ಆಳುವ ಪಕ್ಷದಿಂದ ಪ್ರಹಾರಗಳನ್ನು ಎದುರಿಸುತ್ತಲೇ ಮಾಡಬೇಕಾಗಿದೆ ಎಂದರು.

ಈ ನಿಟ್ಟಿನಲ್ಲಿ ಈ ಮಹಾಧಿವೇಶನ ಸೂಕ್ತ ಕಾರ್ಯತಂತ್ರಗಳನ್ನು ಚರ್ಚಿಸಿ ನಿರ್ಧರಿಸುತ್ತದೆ, ಪಕ್ಷವನ್ನು ದುಡಿಯುವ ಜನಗಳನ್ನು ವ್ಯಾಪಕವಾಗಿ ಅಣಿನೆರೆಸುವ ಸಾಮರ್ಥ್ಯವನ್ನು ಹೊಂದಿರುವಂತೆ ಸಂಘಟನಾತ್ಮಕವಾಗಿ ಹೇಗೆ ಬಲಪಡಿಸಬೇಕು ಎಂಬುದನ್ನೂ ಚರ್ಚಿಸುತ್ತದೆ, ಸದ್ಯದ ಅಸಮಾನತೆಯ ಮತ್ತು ನಿರಂಕುಶಾಧಿಕಾರದ ಆಳ್ವಿಕೆಗೆ ಒಂದು ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಬೆಳೆಸುವ ತನ್ನ ಹೊಣೆಗಾರಿಕೆಯನ್ನೂ ನಿಭಾಯಿಸುತ್ತದೆ ಎಂದು ಮಾಣಿಕ್ ಸರ್ಕಾರ್ ಹೇಳಿದರು.

ಎಪ್ರಿಲ್ 10 ರ ವರೆಗೆ ನಡೆದ ಈ ಮಹಾಧಿವೇಶನದಲ್ಲಿ 17 ಪೊಲಿಟ್‌ಬ್ಯುರೊ ಸದಸ್ಯರು, 78 ಕೇಂದ್ರ ಸಮಿತಿ ಸದಸ್ಯರು, 640 ಪ್ರತಿನಿಧಿಗಳು ಮತ್ತು 77 ವೀಕ್ಷಕರು ಸೇರಿದಂತೆ 25 ರಾಜ್ಯಗಳ ಒಟ್ಟು 812 ಹೋರಾಟಗಾರರು ಭಾಗವಹಿಸಿದ್ದಾರೆ.



ಮಹಾಧಿವೇಶನಕ್ಕೆ ಶುಭ ಹಾರೈಕೆಗಳು

ಅಂತರ್‍ರಾಷ್ಟ್ರೀಯ ಶುಭಾಶಯಗಳು



ಚೀನಾ, ರಷ್ಯಾ ಒಕ್ಕೂಟ, ಅಮೆರಿಕ ಮತ್ತು ಯುರೋಪಿನ ಹಲವು ಕಮ್ಯುನಿಸ್ಟ್ ಪಕ್ಷಗಳು ಸೇರಿದಂತೆ ಜಗತ್ತಿನ ಹಲವು ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು ಸಿಪಿಐ(ಎಂ)ನ 23ನೇ ಮಹಾಧಿವೇಶನಕ್ಕೆ ಶುಭಾಶಯಗಳನ್ನು ಕೋರುತ್ತ ಸಂದೇಶಗಳನ್ನು ಕಳಿಸಿವೆ. ಇವುಗಳಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷ, ಕ್ಯೂಬ ಕಮ್ಯುನಿಸ್ಟ್ ಪಕ್ಷ, ಕೊರಿಯ ಕಾರ್ಮಿಕರ ಪಕ್ಷ, ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ ಮತ್ತು ಲಾವೊ ಜನತಾ ಕ್ರಾಂತಿಕಾರಿ ಪಕ್ಷದ ಸಂದೇಶಗಳನ್ನು ಎಂ.ಎ. ಬೇಬಿಯವರು ಉದ್ಘಾಟನಾ ಅಧಿವೇಶನದಲ್ಲಿ ಓದಿ ಹೇಳಿದರು.

ಎಡಪಕ್ಷಗಳ ಶುಭಾಶಯಗಳು

ಸಿಪಿಐ, ಸಿಪಿಐ(ಎಂಎಲ್-ಲಿಬರೇಷನ್)), ಆರ್‌ಎಸ್‌ಪಿ ಮತ್ತು ಫಾರ್ವರ್ಡ್ ಬ್ಲಾಕ್ ನ ಪ್ರಧಾನ ಕಾರ್ಯದರ್ಶಿಗಳು ಮಹಾಧಿವೇಶನಕ್ಕೆ ಶುಭಾಶಯಗಳನ್ನು ಕೋರುತ್ತ ದೇಶದಲ್ಲಿ ಎಡ ಐಕ್ಯತೆಯನ್ನುಗಟ್ಟಿಗೊಳಿಸುವುದರ ಪ್ರಾಮುಖ್ಯತೆಯನ್ನು ಪುನರುಚ್ಚರಿಸಿದರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜ ಮಹಾಧಿವೇಶನದ ಪ್ರತಿನಿಧಿಗಳಿಗೆ ಶುಭಾಶಯಗಳನ್ನು ವ್ಯಕ್ತಪಡಿಸುತ್ತ, ಈಗಿನ ಸಂದರ್ಭದಲ್ಲಿ ಕಮ್ಯುನಿಸ್ಟರು ಮತ್ತು ಎಡಪಕ್ಷಗಳು ಮಾತ್ರವೇ ಆರೆಸ್ಸೆಸ್‌ಗೆ ಸೈದ್ಧಾಂತಿಕ ಸವಾಲನ್ನು ಒಡ್ಡಿ, ಒಂದು ಪರ್ಯಾಯವನ್ನು ಮುಂದಿಟ್ಟು ಅದನ್ನು ಸೋಲಿಸಲು ಸಾಧ್ಯ, ಇದು ನಮ್ಮ ಜವಾಬ್ದಾರಿ ಎಂದರು. ಪ್ರಧಾನ ಮಂತ್ರಿಗಳು ಕಮ್ಯುನಿಸಂ ಒಂದು ಅಪಾಯಕಾರಿ ಸಿದ್ಧಾಂತ ಎಂದಿದ್ದಾರೆ. ಹೌದು, ಆರೆಸ್ಸೆಸ್‌ಗೆ ಇದು ಒಂದು ಅಪಾಯಕಾರಿ ಸಿದ್ಧಾಂತ, ಏಕೆಂದರೆ ಆರೆಸ್ಸೆಸ್ ದೇಶಕ್ಕೆ ಅಪಾಯಕಾರಿ ಅದಕ್ಕೆ ಕಮ್ಯುನಿಸ್ಟರು ಅವಿರತವಾಗಿ ಸವಾಲನ್ನು ಒಡ್ಡುವ ಸಾಮರ್ಥ್ಯ ಹೊಂದಿದ್ದಾರೆ ಎಂದರು, ಸಿಪಿಐ(ಎಂ)ನ 23ನೇ ಮಹಾಧಿವೇಶನ ಮತ್ತು ಅಕ್ಟೋಬರ್‌ನಲ್ಲಿ ನಡೆಯಲಿರುವ ಸಿಪಿಐನ 24ನೇ ಮಹಾಧಿವೇಶನದ ಕಲಾಪಗಳು ಎಡ ಐಕ್ಯತೆಯನ್ನು ಮತ್ತು ಜನಪರ ಹೋರಾಟಗಳನ್ನು ಕ್ರೋಡೀಕರಿಸುವಲ್ಲಿ ತಮ್ಮ ಕೊಡುಗೆಗಳನ್ನು ನೀಡುತ್ತವೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಉಳಿದ ಮೂರು ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳು ಕಾರಣಾಂತರಗಳಿಂದ ಉದ್ಘಾಟನಾ ಅಧಿವೇಶನದಲ್ಲಿ ಭಾಗವಹಿಸಲಾರದ್ದಕ್ಕೆ ಖೇದ ವ್ಯಕ್ತಪಡಿಸುತ್ತ ಶುಭಾಶಯ ಸಂದೇಶಗಳನ್ನು ಕಳಿಸಿದ್ದರು. ಇವನ್ನು ಪೊಲಿಟ್‌ಬ್ಯುರೊ ಸದಸ್ಯರಾದ ಎಂ.ಎ. ಬೇಬಿ ಪ್ರಸ್ತುತಪಡಿಸಿದರು.

ಸಿಪಿಐ(ಎಂ)ನ 23 ನೇ ಮಹಾಧಿವೇಶನ ರಾಷ್ಟ್ರೀಯ ಮತ್ತು ಅಂತರ್‍ರಾಷ್ಟ್ರೀಯ ಸನ್ನಿವೇಶದ ವ್ಯಾಖ್ಯಾನವನ್ನು ನೀಡುವುದಷ್ಟೇ ಅಲ್ಲ, 'ಬದಲಾವಣೆ'ಯ ಕಾರ್ಯಕ್ರಮಗಳನ್ನು ರೂಪಿಸುತ್ತದೆ ಪೆರು, ಚಿಲಿ, ಬೊಲಿವಿಯ, ಬ್ರೆಝಿಲ್ ಮುಂತಾದ ಲ್ಯಾಟಿನ್ ಅಮೆರಿಕಾದ ದೇಶಗಳಲ್ಲಿ ಆಗುತ್ತಿರುವ ಬದಲಾವಣೆಗಳ ಪಾಟಗಳನ್ನು ನಾವು ಅಂತರ್ಗತ ಮಾಡಿಕೊಳ್ಳಬೇಕು ಎಂದು ಆರ್‌ಎಸ್‌ಪಿಯ ಪ್ರಧಾನ ಕಾರ್ಯದರ್ಶಿ ಮನೋಜ್ ಭಟ್ಟಾಚಾರ್ಯ ತಮ್ಮ ಶುಭಾಶಯ ಸಂದೇಶದಲ್ಲಿ ಹೇಳಿದ್ದಾರೆ..

ಅಖಿಲ ಭಾರತ ಫಾರ್ವರ್ಡ್ ಬ್ಲಾಕ್‌ನ ಪ್ರಧಾನ ಕಾರ್ಯದರ್ಶಿ ದೇಬಬ್ರತ ಬಿಸ್ವಾಸ್ ಕೂಡ ಈಗಿನ ಸಂದರ್ಭದಲ್ಲಿ ಸಿಪಿಐ(ಎಂ)ನ ಈ ಮಹಾಧಿವೇಶನ ಮಹತ್ವದ್ದೆಂದು ಹೇಳುತ್ತ, ನಾವು ದುಡಿಯುವ ಜನಗಳ ಮತ್ತು ಅಂಚಿಗೆ ತಳ್ಳಲ್ಪಟ್ಟರುವ ವಿಭಾಗಗಳ ಸಾಮೂಹಿಕ ಚಳುವಳಿಗಳನ್ನು ಅವಿರತವಾಗಿ ಸಂಘಟಿಸುತ್ತಿದ್ದರೂ, ಜನಗಳ ಆಕ್ರೋಶವನ್ನು ಚುನಾವಣೆಗಳಲ್ಲಿ ಮತಗಳಾಗಿ ಪರಿವರ್ತಿಸಲು ಏಕೆ ಆಗುತ್ತಿಲ್ಲ ಎಂಬುದನ್ನು ಕೂಲಂಕುಷವಾಗಿ ಪರೀಕ್ಷಿಸಬೇಕು, ಈ ನ್ಯೂನ್ಯತೆಯನ್ನು ಸರಿಪಡಿಸಲು ಸಾಮೂಹಿಕ ಕ್ರಮಗಳನ್ನು ಕೈಗೊಳ್ಳಬೇಕು ಎಂದಿದ್ದಾರೆ.

ಈಗಿನ ಸನ್ನಿವೇಶದಲ್ಲಿ ಎಡಪಂಥೀಯರೆಲ್ಲರೂ ಒಂದಾಗಿ ನಮ್ಮೆಲ್ಲ ಶಕ್ತಿಯನ್ನು ಬಳಸಿ ಹೋರಾಟ ನಡೆಸಬೇಕಾಗಿದೆ ಎಂದು ತನ್ನ ಶುಭಾಶಯ ಸಂದೇಶದಲ್ಲಿ ಹೇಳಿರುವ ಸಿಪಿಐ(ಎಂಎಲ್-ಲಿಬರೇಷನ್)ನ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಈಗ ಹಲವು ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ ಎಡಪಕ್ಷಗಳು ಉತ್ತಮ ಮಟ್ಟದ ಸಮನ್ವಯವನ್ನು ಸಾಧಿಸಿದ್ದೇವೆ, ಫ್ಯಾಸಿಸ್ಟ್ ದಾಳಿಗಳನ್ನು ಎದುರಿಸಲು ಹೆಚ್ಚಿನ ಉತ್ಸಾಹ ಮತ್ತು ಗಮನವನ್ನು ನೀಡುತ್ತ, ಸವಾಲುಗಳಿಂದ ತುಂಬಿರುವ ಮುಂದಿನ ದಿನಗಳಲ್ಲಿ ಒಟ್ಟಾಗಿ ಪ್ರಜಾಪ್ರಭುತ್ವದ ಹೋರಾಟವನ್ನು ಮುಂದೊಯ್ಯೋಣ, ಹೋರಾಡಲು ಒಂದಾಗೋಣ, ಗೆಲ್ಲಲು ಹೋರಾಡೋಣ ಎಂದಿದ್ದಾರೆ.



ನರೇಗಾ ಯೋಜನೆಯಡಿ ಕೆಲಸಗಾರರ ಹಾಜರಾತಿ-ಛಾಯಾ ಚಿತ್ರವನ್ನು ಆನ್‌ಲೈನ್ ಮೂಲಕ ಪಡೆಯುವುದನ್ನು ವಿರೋಧಿಸಿ ಎಐಎಡಬ್ಲ್ಯೂಐ ನಿಂದ ರಾಜ್ಯಾದ್ಯಂತ ಪ್ರತಿಭಟನೆ





ನರೇಗಾ ಯೋಜನೆಯಡಿ ದಿನಕ್ಕೆ ಎರಡು ಬಾರಿ ಕೆಲಸಗಾರರ ಹಾಜರಾತಿ ಮತ್ತು ಛಾಯಾ ಚಿತ್ರವನ್ನು ಅಸಂಬದ್ಧವಾಗಿ ಮತ್ತು ಅನಗತ್ಯವಾಗಿ ಆನ್‌ಲೈನ್ ಮೂಲಕ ಪಡೆಯುವುದನ್ನು ವಿರೋಧಿಸಿ ಮತ್ತು ಇತರ ಬೇಡಿಕೆಗಳಿಗಾಗಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದಿಂದ ಏಪ್ರಿಲ್ 7 ಮತ್ತು 8 ಎರಡು ದಿನಗಳ ಕಾಲ ಅಹೋರಾತ್ರಿ ಧರಣಿ ನಡೆಸಿದೆ.

ಕೆಲಸಗಾರರ ಹಾಜರಾತಿಯನ್ನು ಮತ್ತು ಛಾಯಾ ಚಿತ್ರವನ್ನು ದಿನಕ್ಕೆ ಎರಡು ಬಾರಿ ಸೆರೆಹಿಡಿದು ಅಪ್‌ಲೋಡ್ ಮಾಡಬೇಕೆಂಬ ಕೇಂದ್ರ ಸರ್ಕಾರದ ಆದೇಶ ಅಸಂಬದ್ಧವು ಅನಗತ್ಯವೂ ಆಗಿದ್ದು ನಾವು ಅದನ್ನು ವಿರೋಧಿಸಿದೆ. ಕೂಲಿಕಾರರ ಮುಖ ಸ್ಪಷ್ಟವಾಗಿ ಕಾಣಬೇಕಾದರೆ ಒಳ್ಳೆಯ ಗುಣಮಟ್ಟದ ಸ್ಮಾರ್ಟ್ ಪೋನ್ ಬೇಕಾಗುತ್ತದೆ. ನಮ್ಮ ಮೇಟ್‌ಗಳ ಹತ್ತಿರವಾಗಲಿ, ಕೂಲಿಕಾರರ ಹತ್ತಿರವಾಗಲಿ ಅಂತಹ ಸ್ಮಾರ್ಟ್ ಪೋನ್ ಇರುವುದಿಲ್ಲ. ಕೂಲಿಕಾರರು ದಿನದ ನಿಗದಿತ ಕೆಲಸ ಮುಗಿದ ನಂತರ ಸಂಜೆ 5 ಗಂಟೆವರೆಗೆ ಕೆಲಸದ ಸ್ಥಳದಲ್ಲೇ ಇರಬೇಕೆಂಬ ನಿರ್ದೇಶನವೂ ಸಹ ಕೂಲಿಕಾರರಿಗೆ ಕಿರುಕುಳ ಕೊಟ್ಟು ಕೆಲಸಕ್ಕೆ ಬಾರದಂತೆ ಮಾಡುವ ದುರುದ್ದೇಶ ಇದ್ದಂತೆ ಕಾಣುತ್ತದೆ. ಕೆಲಸದಲ್ಲಿ ಪಾರದರ್ಶಕತೆ, ಸರ್ಕಾರದ ಹಣ ಪೋಲಾಗುವುದನ್ನು ತಡೆಯುವುದು ಭ್ರಷ್ಟಾಚಾರ ಮುಕ್ತ ಕೆಲಸದ ನಿರ್ವಹಣೆಗೆ ನಾವು ಸಂಪೂರ್ಣ ಬೆಂಬಲ ಕೊಡಲು ಸಿದ್ಧ. ಆದರೆ ಕೆಲವು ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಮಾಡುವ ಕರ್ತವ್ಯ ಲೋಪಕ್ಕೆ ಕೂಲಿಕಾರರನ್ನು ಬಲಿಪಶು ಮಾಡಬಾರದು. ಆದ್ದರಿಂದ ನಾವು ಮೊದಲಿನಂತೆಯೇ ಕೆಲಸ ಮಾಡಿಕೊಂಡು ಹೋಗುತ್ತೇವೆ. ನಮ್ಮೊಂದಿಗೆ ಚರ್ಚೆ ಮಾಡದೆ ತಂದಿರುವ ಹೊಸ ಸೂಚನೆಗಳನ್ನು ನಾವು ತಿರಸ್ಕರಿಸುತ್ತೇವೆ, ಮಾತ್ರವಲ್ಲ ಹೋರಾಟದ ಮೊದಲ ಹೆಜ್ಜೆಯಾಗಿ ಇದೇ ಏಪ್ರಿಲ್ 7 ಮತ್ತು 8 ರಂದು ಎರಡು ದಿನ ಅಹೋ ರಾತ್ರಿ ಮುಷ್ಕರ ನಡೆಸುತ್ತೇವೆ. ಯೋಜನೆಯನ್ನು ಕೂಲಿಕಾರ ಸ್ನೇಹಿಯಾಗಿ ನಡೆಸಬೇಕೆಂದು ಆಗ್ರಹಿಸುತ್ತೇವೆ.

ಕೇಂದ್ರ ಸರ್ಕಾರ ನರೇಗಾ ಕೂಲಿಯನ್ನು ಇತ್ತೀಚಿಗೆ ಪರಿಷ್ಕರಿಸಿದ್ದು ಏನೇನೂ ಸಾಲದು. ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿರುವಾಗ ಸರ್ಕಾರ ಹೆಚ್ಚಿಸಿದ ಕೂಲಿ ದರ ಏರಿಕೆ ಅಮಾನವೀಯವಾಗಿದೆ. ದಿನಗೂಲಿ ಕೇವಲ ರೂ. 4 ರಿಂದ ರೂ. 21 ರಷ್ಟು ಮಾತ್ರ ಏರಿಕೆಯಾಗಿದೆ. ಕೇಂದ್ರ ಸರ್ಕಾರಕ್ಕೆ ಗ್ರಾಮೀಣ ಜನರ ಪರಿಸ್ಥಿತಿ ಕಣ್ಣಿಗೆ ಕಾಣುತ್ತಿಲ್ಲ. ಸರ್ಕಾರದ ಈ ಧೋರಣೆಯನ್ನು ಖಂಡಿಸಿ ಏಪ್ರಿಲ್ 7 ಮತ್ತು 8 ರಂದು ಅಹೋರಾತ್ರಿ ಪ್ರತಿಭಟನೆ ಮಾಡುತ್ತೇವೆ. ಕೂಲಿಕಾರರಿಗೆ ದಿನಕ್ಕೆ ರೂ. 600 ರ ದರದಲ್ಲಿ ವೇತನ ನೀಡಬೇಕೆಂದು ಒತ್ತಾಯಿಸಿದೆ.

ಯೋಜನೆಗಾಗಿ ನೀಡುವ ಅನುದಾನವನ್ನು ಸರ್ಕಾರ ಕಡಿತ ಮಾಡಿರುವುದನ್ನು ನಾವು ವಿರೋಧಿಸುತ್ತೇವೆ. ಹಿಂದಿನ ವರ್ಷದ ಬಜೆಟ್‌ನಲ್ಲಿ ರೂ. 98,000 ಕೋಟಿ ಅನುದಾನ ನೀಡಲಾಗಿತ್ತು.



ಈ ವರ್ಷದ ಬಜೆಟ್‌ನಲ್ಲಿ ಕೇವಲ ರೂ. 73,000 ಕೋಟಿ ರೂ. ಒದಗಿಸಲಾಗಿದೆ. ಈ ಹಣ ಏನೇನು ಸಾಲದು. ಯೋಜನೆಯ ಅಡಿ ಕೆಲಸಕ್ಕೆ ಬೇಡಿಕೆ ಹೆಚ್ಚಾಗಿದೆ. ಹೆಚ್ಚೆಚ್ಚು ಕುಟುಂಬಗಳಿಗೆ ಕೆಲಸ ಒದಗಿಸಲು ಸರ್ಕಾರ ಹೆಚ್ಚೆಚ್ಚು ಅನುದಾನ ನೀಡಬೇಕು. ಪ್ರತಿಯೊಂದು ಕುಟುಂಬಕ್ಕೆ ಕನಿಷ್ಠ ವರ್ಷದಲ್ಲಿ 200 ದಿನ ಕೆಲಸ ಕೊಡಬೇಕು.

ಕೆಲಸಗಾರರಿಗೆ ಅನೇಕ ಕಡೆಗಳಲ್ಲಿ ವೇತನ ಪಾವತಿ ಬಾಕಿ ಇದೆ. ಕರೊನಾ ಸಮಯದಲ್ಲಿ ಯಾವುದೇ ಪರಿಹಾರ ಸಿಕ್ಕಿಲ್ಲ. ಕೂಲಿಕಾರರಿಗೆ ಬಾಕಿ ಇರುವ ವೇತನ, ಕರೋನಾ ಪರಿಹಾರ ಹಾಗೂ ಮೇಟ್ಸ್ ಗಳಿಗೆ ಬಾಕಿ ಇರುವ ಪ್ರೋತ್ಸಾಹಧನವನ್ನು ಕೂಡಲೇ ಪಾವತಿ ಮಾಡಬೇಕು.

ಸಹಿಸಲಾಗದಷ್ಟು ಬೇಸಿಗೆ ಹರಡುತ್ತಿದ್ದು ಬೇಸಿಗೆ ದಿನಗಳಲ್ಲಿ ಕೆಲಸದ ಪ್ರಮಾಣವನ್ನು ಕಡಿಮೆ ಮಾಡಬೇಕು.

ಮೇಟಿಗಳು ಕಡ್ಡಾಯವಾಗಿ 8 ನೇ ತರಗತಿಯಿಂದ ಎಸ್.ಎಸ್.ಎಲ್.ಸಿ. ಪಾಸ್ ಆಗಿರಬೇಕೆಂಬ ಅಸಂಬದ್ಧ ಷರತ್ತನ್ನು ಕೈಬಿಡಬೇಕು. ಓದಲು ಬರೆಯಲು ಬರುವವರಿಗೂ ಮೇಟಿಗಳಾಗಿ ನೇಮಿಸಿಕೊಳ್ಳಲು ಅವಕಾಶ ನೀಡಬೇಕು.

ಬೇಡಿಕೆಗಳನ್ನು ಜಾರಿಗೊಳಿಸಲು ಆಗ್ರಹಿಸಿ ಏಪ್ರಿಲ್ 7 ಮತ್ತು 8 ರಂದು ಅಹೋರಾತ್ರಿ ಮುಷ್ಕರವನ್ನು ನಡೆಸಿದೆ.





ಮತೀಯವಾದ ಮತ್ತು ಅಂಬೇಡ್ಕರ್ ಚಿಂತನೆಗಳು.....

ಪುಟ 7 ರಿಂದ

ಅದು ವಿಭಜನೆಯನ್ನು ಪ್ರಚೋದಿಸುತ್ತದೆ' ಎಂದು ವಿವರಿಸಿದ್ದಾರೆಂದು ಬರೆಯುತ್ತಾರೆ

'ರಿಡಲ್ಸ್ ಆಫ್ ಹಿಂದೂಯಿಸಂ' ಕುರಿತು ಬರೆಯುತ್ತಾ ಅಂಬೇಡ್ಕರ್ ಅವರು ಇಂಡಿಯಾ ದೇಶವು ಪಾರ್ಸಿ, ಕ್ರಿಶ್ಚಿಯನ್, ಮುಸ್ಲಿಂ ಮತ್ತು ಹಿಂದೂಗಳಂತಹ ವಿಭಿನ್ನ ಸಮುದಾಯಗಳ ಒಂದು ಗುಚ್ಛ. ಈ ಕಮ್ಯೂನಿಟಿಗಳ ಮೂಲತತ್ವವು ವರ್ಣಬೇಧವನ್ನಾಧರಿಸಿದ ಜನಾಂಗ ನೀತಿಗಳಲ್ಲ. ಇದು ಧರ್ಮಗಳ ತಳಹದಿಯ ಮೇಲೆ ನಿಂತಿದೆ. ಇದು ಒಂದು ಪೊಳ್ಳುತನದ ನೋಟ ಮಾತ್ರ, ಆದರೆ ಒಬ್ಬ ಪಾರ್ಸಿ ಏಕೆ ಪಾರ್ಸಿ ಮಾತ್ರ? ಒಬ್ಬ ಕ್ರಿಶ್ಚಿಯನ್ ಏಕೆ ಕ್ರಿಶ್ಚಿಯನ್ ಮಾತ್ರ? ಒಬ್ಬ ಮುಸ್ಲಿಂ ಏಕೆ ಮುಸ್ಲಿಂ ಮಾತ್ರ? ಒಬ್ಬ ಹಿಂದೂ ಏಕೆ ಹಿಂದೂ ಮಾತ್ರ? ಎನ್ನುವುದು ಮಾತ್ರ ಕುತೂಹಲಕರ. ಆದರೆ ಪಾರ್ಸಿ, ಕ್ರಿಶ್ಚಿಯನ್, ಮುಸ್ಲಿಂ ಕುರಿತಾಗಿ ಯಾವುದೇ ಜಿಜ್ಞಾಸೆಗಳಿಲ್ಲ. ನೀವು ಪಾರ್ಸಿಯನ್ನು ಯಾತಕ್ಕೆ ನಿನ್ನನ್ನು ಪಾರ್ಸಿ ಎಂದು ಕರೆದುಕೊಳ್ಳುತ್ತೀಯ ಎಂದು ಕೇಳಿ ನೋಡಿ. ಅದಕ್ಕೆ ಉತ್ತರಿಸಲು ಆತನಿಗೆ ಯಾವುದೇ ತೊಂದರೆಗಳಿಲ್ಲ. ತಾನು ಜರಾಷ್ಟ್ರರ ಅನುಯಾಯಿಯಾಗಿರುವುದರಿಂದ ತಾನು ಪಾರ್ಸಿ ಎಂದು ಹೇಳಿಕೊಳ್ಳುತ್ತಾನೆ. ಇದೇ ಪ್ರಶ್ನೆಯನ್ನು ಕ್ರಿಶ್ಚಿಯನ್ ಒಬ್ಬನಿಗೆ ಕೇಳಿ ನೋಡಿ. ಆತನಿಗೂ ಉತ್ತರಿಸಲು ಯಾವುದೇ ತೊಂದರೆಗಳಿಲ್ಲ. ತಾನು ಜೀಸಸ್ ಕ್ರಿಸ್ತನನ್ನು ನಂಬುತ್ತೇನೆ ಅದಕ್ಕೆ ಕ್ರಿಶ್ಚಿಯನ್ ಎಂದು ಉತ್ತರಿಸುತ್ತಾನೆ. ಇದೇ ಪ್ರಶ್ನೆಯನ್ನು ಮುಸ್ಲಿಂ ಒಬ್ಬನಿಗೆ ಕೇಳಿ. ಆತನೂ ಉತ್ತರಿಸಲು ಹಿಂಜರಿಯುವುದಿಲ್ಲ. ನಾನು ಇಸ್ಲಾಂ ಅನ್ನು ನಂಬುತ್ತೇನೆ ಹೀಗಾಗಿ ನಾನು ಮುಸ್ಲಿಂ ಎಂದು ಹೇಳುತ್ತಾನೆ.

ಈಗ ಇದೇ ಪ್ರಶ್ನೆಯನ್ನು ಹಿಂದೂ ಒಬ್ಬನಿಗೆ ಕೇಳಿ ನೋಡಿ. ಆತನು ದಿಗ್ಭ್ರಮೆಗೊಂಡು ಏನು ಉತ್ತರಿಸಬೇಕೆಂದು ತಿಳಿಯದೆ ಕಕ್ಕಾಬಿಕ್ಕಿಯಾಗುತ್ತಾನೆ.

ಒಂದು ವೇಳೆ ಹಿಂದೂ ಕಮ್ಯುನಿಟಿ ಆರಾಧಿಸುವ ದೇವರನ್ನೇ ನಾನು ಆರಾಧಿಸುತ್ತೇನೆ ಎಂದು ಉತ್ತರಿಸಿದರೆ ಅದು ಅರ್ಧಸತ್ಯ ಮಾತ್ರ. ಏಕೆಂದರೆ ಎಲ್ಲಾ ಹಿಂದೂಗಳೂ ಒಂದೇ ದೇವರನ್ನು ಪೂಜಿಸುವುದಿಲ್ಲ. ಕೆಲ ಹಿಂದೂಗಳು ಏಕರೂಪಿ ಸಂಸ್ಕೃತಿಯ ಆರಾಧಕರು, ಕೆಲವರು ಬಹುರೂಪಿ ಸಂಸ್ಕೃತಿಯ ಆರಾಧಕರು, ಮತ್ತೆ ಕೆಲವರು ಅದ್ವೈತವಾದಿಗಳು. ಏಕರೂಪಿ ಸಂಸ್ಕೃತಿಯ ಆರಾಧಕರು ಸಹ ಒಬ್ಬನೇ ದೇವರನ್ನು ಪೂಜಿಸುವುದಿಲ್ಲ, ಕೆಲವರು ವಿಷ್ಣುವನ್ನು, ಕೆಲವರು ಶಿವನನ್ನು, ಕೆಲವರು ರಾಮನನ್ನು, ಕೆಲವರು ಕ್ರಿಷ್ಣನನ್ನು ಪೂಜಿಸುತ್ತಾರೆ. ಕೆಲವರು ಗಂಡು ದೇವರನ್ನು ಪೂಜಿಸುವುದೇ ಇಲ್ಲ. ಅವರು ಹೆಣ್ಣು ದೇವತೆಯನ್ನು ಪೂಜಿಸುತ್ತಾರೆ. ಇವರೂ ಸಹ ವಿಭಿನ್ನ ದೇವತೆಗಳನ್ನು ಪೂಜಿಸುತ್ತಾರೆ. ಕೆಲವರು ಕಾಳಿ, ಕೆಲವರು ಪಾರ್ವತಿ, ಕೆಲವರು ಲಕ್ಷ್ಮಿಯನ್ನು ಪೂಜಿಸುತ್ತಾರೆ.

'ನಾನು ಹಿಂದೂ ನಂಬಿಕೆಗಳನ್ನು ನಂಬುತ್ತೇನೆ, ಅದಕ್ಕಾಗಿ ನಾನು ಹಿಂದೂ' ಎಂದು ಹೇಳಿದರೆ ಅದು ತಪ್ಪು ಉತ್ತರವಾಗುತ್ತದೆ. ಹಿಂದೂ ಧರ್ಮದಲ್ಲಿ ವ್ಯಕ್ತಿಯೊಬ್ಬನ ವೈಯುಕ್ತಿಕ ನಂಬಿಕೆಗಳು ಮತ್ತೊಬ್ಬನ ವೈಯುಕ್ತಿಕ ನಂಬಿಕೆಗಳಿಂದ ಸಂಪೂರ್ಣವಾಗಿ ಭಿನ್ನವಾಗಿರುತ್ತವೆ. ಉದಾಹರಣೆಗೆ ಕೆಲವು ಹಿಂದೂಗಳು ಎಲ್ಲಾ ಹಿಂದೂ ಶಾಸನಗಳನ್ನು ನಂಬಬೇಕು ಎಂದರೆ ಅದನ್ನು ಕೆಲವು ಹಿಂದೂಗಳು ಅಲ್ಲಗಳೆದು ತಂತ್ರ ಮಾರ್ಗವನ್ನು ಇದರಿಂದ ಹೊರಗಿಡಬೇಕು ಎನ್ನುತ್ತಾರೆ. ಮತ್ತೆ ಕೆಲವರು ವೇದಗಳನ್ನು ಮಾತ್ರ ನಂಬುತ್ತಾರೆ. ಆದರೆ ಇವರೆಡನ್ನೂ ನಂಬದ ಮತ್ತೊಂದು ಹಿಂದೂ ಗುಂಪು ಕರ್ಮ ಸಿದ್ಧಾಂತವನ್ನು ನಂಬುತ್ತದೆ. ಮತ್ತೊಂದು ಗುಂಪು ಪರಕಾಯಪ್ರವೇಶ ಸಿದ್ಧಾಂತವನ್ನು ನಂಬುತ್ತದೆ. ಒಂದು ಸಂಕೀರ್ಣ ಮತಸಿದ್ಧಾಂತಗಳ, ಧರ್ಮ ಸಿದ್ಧಾಂತಗಳ ಗೂಡು ಈ ಹಿಂದೂಯಿಸಂ.

'ನಾನು ಹಿಂದೂ ಸಂಪ್ರದಾಯಗಳನ್ನು ನಂಬುತ್ತೇನೆ, ಅದಕ್ಕಾಗಿ ನಾನು ಹಿಂದೂ' ಎಂದು ಹೇಳಿದರೆ ಅದೂ ಸಹ ತಪ್ಪು ಉತ್ತರವಾಗುತ್ತದೆ. ಏಕೆಂದರೆ ಎಲ್ಲಾ ಹಿಂದೂಗಳೂ ಒಂದೇ ಸಂಪ್ರದಾಯಗಳನ್ನು ಪಾಲಿಸುವುದಿಲ್ಲ. ಉತ್ತರ ಭಾರತದಲ್ಲಿ ಹತ್ತಿರದ ಸಂಬಂಧಿಗಳ ನಡುವಿನ ಮದುವೆಯನ್ನು ನಿಷೇಧಿಸಲಾಗಿದೆ. ಆದರೆ ದಕ್ಷಿಣದಲ್ಲಿ ಕಸಿನ್ಸ್‌ಗಳು ಪರಸ್ಪರ ಮದುವೆಯಾಗುವುದು ರೂಢಿಯಲ್ಲಿದೆ. ಕಟ್ಟುಪಾಡುಗಳ ಆಧಾರವಾಗಿ ಮಹಿಳೆಯ ಪರಿಶುದ್ಧತೆಯನ್ನು ತುಂಬಾ ಗೌರವಿಸುತ್ತಾರೆ, ಕೆಲವರಲ್ಲಿ ಇದಕ್ಕೆ ಅಷ್ಟೊಂದು ಒತ್ತು ನೀಡುವುದಿಲ್ಲ, ಮತ್ತೊಂದು ಗುಂಪು ತಮ್ಮ ಹೆಣ್ಣು ಮಕ್ಕಳನ್ನು ದೇವದಾಸಿ ಪದ್ಧತಿಯಂತೆ ಧಾರ್ಮಿಕ ವೇಶ್ಯಾವಾಟಿಕೆಗೆ ಸಮರ್ಪಿಸುತ್ತಾರೆ. ಒಂದು ಭೌಗೋಳಿಕ ಭಾಗದಲ್ಲಿ ಹಿಂದೂ ಮಹಿಳೆಯರು ಸಾರ್ವಜನಿಕವಾಗಿ ಯಾವುದೇ ಕಟ್ಟುಪಾಡುಗಳಿಲ್ಲದೆ ಓಡಾಡುತ್ತಿದ್ದರೆ ಮತ್ತೊಂದು ಭಾಗದಲ್ಲಿ ಮಹಿಳೆಯನ್ನು ಮನೆಯೊಳಗೆ ಬಂಧಿಸಿಡಲಾಗುತ್ತದೆ.

'ನಾನು ಜಾತಿ ಪದ್ಧತಿಯನ್ನು ನಂಬುತ್ತೇನೆ, ಅದಕ್ಕಾಗಿ ನಾನು ಹಿಂದೂ' ಎಂದು ಹೇಳಿದರೆ ಆ ಉತ್ತರವೂ ಅಷ್ಟೊಂದು ಸಮಾಧಾನಕರವಾಗಿರುವುದಿಲ್ಲ. ಪ್ರತಿಯೊಬ್ಬ ಹಿಂದೂ ತನ್ನ ಪಕ್ಕದ ಮನೆಯವನ ಸಂಪ್ರದಾಯಗಳ ಕುರಿತಾಗಿ ಅಷ್ಟೊಂದು ಆಸಕ್ತಿ ವಹಿಸುವುದಿಲ್ಲ ಎನ್ನುವುದು ನಿಜವಾದರೂ ಆದರೆ ಆ ಹಿಂದೂ ತನ್ನ ಪಕ್ಕದ ಮನೆಯವನ ಜೊತೆ ಏನು ತಿನ್ನಬೇಕು, ಆತನ ಕೈಯಿಂದ ನೀರನ್ನು ಪಡೆಯಬೇಕೆ ಎಂದು ಅರಿಯುವುದರಲ್ಲಿ ಆಸಕ್ತಿ ವಹಿಸುತ್ತಾನೆ ಎನ್ನುವುದೂ ಸಹ ನಿಜ. ಅಂದರೆ ಹಿಂದೂ ಧರ್ಮದಲ್ಲಿ ಜಾತಿ ಪದ್ಧತಿಯು ಒಂದು ಪ್ರಮುಖವಾದ ಆಚರಣೆಯಾಗಿದೆ ಮತ್ತು ಒಂದು ಅಂಗೀಕೃತ, ಐಡೆಂಟಿಟಿ ಜಾತಿಗೆ ಅವನು ಸೇರಿಲ್ಲವಾದರೆ ಅವನು ಹಿಂದೂ ಅಲ್ಲವೆಂದೇ ಪರಿಗಣಿಸಲಾಗುತ್ತದೆ. ಆದರೆ ಕೇವಲ ಜಾತಿಯನ್ನು ನಂಬುವುದರ ಆಧಾರದ ಮೇಲೆ ಮಾತ್ರ ಇದನ್ನು ಗುರುತಿಸಲು ಸಾಧ್ಯವಿಲ್ಲ. ಏಕೆಂದರೆ ಬಹುಪಾಲು ಮುಸ್ಲಿಂರು, ಬಹುಪಾಲು ಕ್ರಿಶ್ಚಿಯನ್ನರು ಊಟದ ಸಂದರ್ಭದಲ್ಲಿ ಅಲ್ಲವಾದರೂ ಅಂತರ್ಜಾತೀಯ ಮದುವೆಯ ಸಂದರ್ಭದಲ್ಲಿ ಜಾತಿಯನ್ನು ಪಾಲಿಸುತ್ತಾರೆ. ಅದರ ಆಧಾರದ ಮೇಲೆ ಅವರನ್ನು ಹಿಂದೂ ಎಂದು ಕರೆಯಲಾಗುವುದಿಲ್ಲ. ಎಲ್ಲಾ ಅಂಶಗಳನ್ನು ಒಳಗೊಂಡಿರಬೇಕಾಗಿರುತ್ತದೆ. ಅವನು ಹಿಂದೂ ಆಗಿರಬೇಕು ಮತ್ತು ಅವನು ಜಾತಿ ಪದ್ಧತಿಯನ್ನು ಪಾಲಿಸಬೇಕು. ಹಾಗಿದ್ದಲ್ಲಿ ಹಿಂದೂ ಅಂದರೆ ಯಾರು ಎನ್ನುವ ಪ್ರಶ್ನೆ ಎದುರಾಗುತ್ತದೆ. ಇನ್ನು ನಾವು ನಮ್ಮ ಇಂದಿನ ಸ್ಥಿತಿಗೆ ಮರಳಬೇಕಾಗುತ್ತದೆ.

ತನ್ನ ಧರ್ಮದ ಪ್ರಶ್ನೆ ಬಂದಾಗ ಪ್ರತಿಯೊಬ್ಬ ಹಿಂದೂವಿಗೂ ತುಂಬಾ ಕಸಿವಿಸಿ,


ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಸೀತಾರಾಂ ಯೆಚೂರಿ ಪುನರಾಯ್ಕೆ



ಸಿಪಿಐ(ಎಂ)ನ 23ನೇ ಮಹಾಧಿವೇಶನ ಸೀತಾರಾಂ ಯೆಚುರಿಯವರನ್ನು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆರಿಸಿದೆ. ಯೆಚುರಿಯವರು 2015ರಲ್ಲಿ ವಿಶಾಖಪಟ್ಟಣಂನಲ್ಲಿ ನಡೆದ 21ನೇ ಮಹಾಧಿವೇಶನದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಮೊದಲ ಬಾರಿಗೆ ಆಯ್ಕೆಯಾಗಿದ್ದರು. 2018ರಲ್ಲಿ ಹೈದರಾಬಾದಿನಲ್ಲಿ ನಡೆದ 22ನೇ ಮಹಾಧಿವೇಶನದಲ್ಲಿ ಅವರು ಪುನರಾಯ್ಕೆಗೊಂಡಿದ್ದರು.

23ನೇ ಮಹಾಧಿವೇಶನ 85 ಸದಸ್ಯರಿರುವ ಹೊಸ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಿತು. ಇದರಲ್ಲಿ 15 ಮಹಿಳೆಯರಿದ್ದಾರೆ. 17 ಹೊಸ ಸದಸ್ಯರಿದ್ದಾರೆ.

1. ಸೀತಾರಾಂ ಯೆಚೂರಿ
2. ಪ್ರಕಾಶ್ ಕಾರಟ್
3. ಮಾಣಿಕ್ ಸರ್ಕಾರ್
4. ಪಿಣರಾಯಿ ವಿಜಯನ್
5. ಬಿ.ವಿ.ರಾಘವುಲು
6. ಬೃಂದಾ ಕಾರಟ್ (ಮ)
7. ಕೊಡಿಯೇರಿ ಬಾಲಕೃಷ್ಣನ್
8. ಎಂ.ಎ. ಬೇಬಿ
9. ಸೂರ್ಯಕಾಂತ ಮಿಶ್ರಾ
10. ಮೊಹಮ್ಮದ್ ಸಲೀಂ
11. ಸುಭಾಷಿಣಿ ಅಲಿ (ಮ)
12. ಜಿ. ರಾಮಕೃಷ್ಣನ್
13. ತಪನ್ ಸೇನ್
14. ನೀಲೋತ್ಪಲ್ ಬಸು
15. ವಿ.ಶ್ರೀನಿವಾಸ ರಾವ್
16. ಎಂ.ಎ.ಗಫೂರ್
17. ಸುಪ್ರಕಾಶ ತಾಲೂಕದಾರ್
18. ಇಶ್ಫಕುರ್ ರೆಹಮಾನ್ (ಹೊ)
19. ಲಲ್ಲನ್ ಚೌಧರಿ (ಹೊ)
20. ಅವಧೇಶ್ ಕುಮಾರ್
21. ಕೆ.ಎಂ. ತಿವಾರಿ
22. ಅರುಣ್ ಮೆಹ್ತಾ
23. ಸುರೇಂದರ್ ಮಲ್ಲಿಕ್
24. ಓಂಕಾರ್ ಶಾದ್
25. ಮೊಹಮ್ಮದ್ ಯೂಸುಫ್ ತರಿಗಾಮಿ
26. ಪ್ರಕಾಶ್ ವಿಪ್ಲವಿ (ಹೊ)
27. ಯು. ಬಸವರಾಜ (ಹೊ)
28. ಎ.ವಿಜಯರಾಘವನ್
29. ಪಿ.ಕೆ. ಶ್ರೀಮತಿ (ಮ)
30. ಇ.ಪಿ. ಜಯರಾಜನ್
31. ಟಿ.ಎಮ್. ಥಾಮಸ್ ಐಸಾಕ್
32. ಕೆ.ಕೆ. ಶೈಲಜಾ (ಮ)
33. ಎ.ಕೆ. ಬಾಲನ್
34. ಎಳಮರಮ್ ಕರೀಂ
35. ಕೆ. ರಾಧಾಕೃಷ್ಣನ್
36. ಎಂ.ವಿ.ಗೋವಿಂದನ್ ಮಾಸ್ಟರ್
37. ಕೆ.ಎನ್.ಬಾಲಗೋಪಾಲ್ (ಹೊ)
38. ಪಿ ರಾಜೀವ್ (ಹೊ)
39. ಪಿ. ಸತೀದೇವಿ (ಮ) (ಹೊ)
40. ಸಿ.ಎಸ್. ಸುಜಾತಾ (ಮ) (ಹೊ)
41. ಜಸ್ವಿಂದರ್ ಸಿಂಗ್
42. ಉದಯ್ ನಾರ್ಕರ್ (ಹೊ)
43. ಜೆ.ಪಿ. ಗವಿತ್
44. ಅಲಿ ಕಿಶೋರ್ ಪಟ್ನಾಯಕ್
45. ಸುಖ್ವಿಂದರ್ ಸಿಂಗ್ ಸೆಖೋನ್
46. ಆಮ್ರ ರಾಮ್
47. ಕೆ. ಬಾಲಕೃಷ್ಣನ್
48. ಯು. ವಾಸುಕಿ (ಮ)
49. ಪಿ.ಸಂಪತ್
50. ಪಿ. ಷಣ್ಮುಗಂ (ಹೊ)
51. ತಮ್ಮಿನೇನಿ ವೀರಭದ್ರಂ
52. ಚ. ಸೀತಾರಾಮುಲು
53. ಜಿ ನಾಗಯ್ಯ
54. ಜಿತೇಂದ್ರ ಚೌಧರಿ
55. ಅಗೋರ್ ದೇಬ್ ಬರ್ಮನ್
56. ರಮಾ ದಾಸ್ (ಮ)
57. ತಪನ್ ಚಕ್ರವರ್ತಿ
58. ನಾರಾಯಣ್ ಕರ್ (ಹೊ)
59. ಹೀರಾಲಾಲ್ ಯಾದವ್
60. ರಾಮಚಂದ್ರ ಡೋಮ್
61. ಶ್ರೀದೀಪ್ ಭಟ್ಟಾಚಾರ್ಯ
62. ಅಮಿಯ ಪಾತ್ರ
63. ರಾಬಿನ್ ದೇಬ್
64. ಸುಜನ್ ಚಕ್ರವರ್ತಿ
65. ಅಭಾಸ್ ರಾಯ್ ಚೌಧರಿ
66. ರೇಖಾ ಗೋಸ್ವಾಮಿ (ಮ)
67. ಅಂಜು ಕರ್ (ಮ)
68. ಶಮಿಕ್ ಲಾಹಿರಿ (ಹೊ)



69. ಸುಮಿತ್ ಡಿ (ಹೊ)
70. ದೇಬೀನಾ ಹೆಂಬ್ರಾಮ್ (ಮ) (ಹೊ)
71. ಅಶೋಕ್ ಧವಳೆ
72. ಜೋಗೇಂದ್ರ ಶರ್ಮಾ
73. ಕೆ. ಹೇಮಲತಾ (ಮ)
74. ರಾಜೇಂದ್ರ ಶರ್ಮಾ
75. ಸ್ವದೇಶ್ ದೇವ್ ರಾಯ್
76. ಎಸ್ ಪುಣ್ಯಾವತಿ (ಮ)
77. ಮುರಳೀಧರನ್
78. ಅರುಣ್ ಕುಮಾರ್
79. ವಿಜೂ ಕೃಷ್ಣನ್
80. ಮರಿಯಮ್ ಧವಳೆ (ಮ)
81. ಎ. ಆರ್. ಸಿಂಧು (ಮ)
82. ಬಿ. ವೆಂಕಟ್ (ಹೊ)
83. ಆರ್. ಕರುಮಲಯನ್ (ಹೊ)
84. ಕೆ.ಎನ್. ಉಮೇಶ್ (ಹೊ)
85. ಖಾಲಿ

ಕೇಂದ್ರ ಸಮಿತಿಗೆ ಖಾಯಂ ಆಹ್ವಾನಿತರು:

1. ಕಾಂ. ರಾಜೇಂದ್ರ ಸಿಂಗ್ ನೇಗಿ
2. ಕಾಂ. ಸಂಜಯ್ ಪರಾಟೆ

ಕೇಂದ್ರ ಸಮಿತಿ ವಿಶೇಷ ಆಹ್ವಾನಿತರು:

1. ಎಸ್. ರಾಮಚಂದ್ರನ್ ಪಿಳ್ಳೈ
2. ಬಿಮನ್ ಬೋಸ್
3. ಹನ್ನನ್ ಮೊಲ್ಲಾ

ಹೊಸದಾಗಿ ಆಯ್ಕೆಯಾದ ಕೇಂದ್ರ ಸಮಿತಿಯ ಮೊದಲ ಸಭೆಯು 17 ಸದಸ್ಯರ ಪೊಲಿಟ್ ಬ್ಯೂರೋವನ್ನು ಚುನಾಯಿಸಿತು:

1. ಸೀತಾರಾಂ ಯೆಚೂರಿ
2. ಪ್ರಕಾಶ್ ಕಾರಟ್
3. ಪಿಣರಾಯಿ ವಿಜಯನ್
4. ಬೃಂದಾ ಕಾರಟ್ (ಮ)
5. ಮಾಣಿಕ್ ಸರ್ಕಾರ್
6. ಕೊಡಿಯೇರಿ ಬಾಲಕೃಷ್ಣನ್
7. ಎಂ.ಎ.ಬೇಬಿ
8. ಸೂರ್ಜ್ಯ ಕಾಂತ ಮಿಶ್ರಾ
9. ಮೊಹಮ್ಮದ್ ಸಲೀಂ
10. ಸುಭಾಷಿಣಿ ಅಲಿ (ಮ)
11. ಬಿ.ವಿ.ರಾಘವುಲು
12. ಜಿ. ರಾಮಕೃಷ್ಣನ್
13. ತಪನ್ ಸೇನ್
14. ನೀಲೋತ್ಪಲ್ ಬಸು
15. ರಾಮಚಂದ್ರ ಡೋಮ್
16. ಎ ವಿಜಯರಾಘವನ್
17. ಅಶೋಕ್ ಧವಳೆ

ಕೇಂದ್ರ ಸಮಿತಿಯು ಸೀತಾರಾಂ ಯೆಚೂರಿ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆ ಮಾಡಿದೆ.

ಹೊಸ ಕೇಂದ್ರ ನಿಯಂತ್ರಣ ಆಯೋಗ:

1. ಎ.ಕೆ. ಪದ್ಮನಾಭನ್
2. ಎಂ. ವಿಜಯಕುಮಾರ್
3. ಶ್ರೀಧರ್
4. ಮಾಲಿನಿ ಭಟ್ಟಾಚಾರ್ಯ
5. ಎಸ್. ವೀರಯ್ಯ

ಹೊಸ ಕೇಂದ್ರೀಯ ನಿಯಂತ್ರಣ ಆಯೋಗವು ಸಭೆ ನಡೆಸಿ ಕಾಂ. ಎ.ಕೆ. ಪದ್ಮನಾಭನ್ ಅವರನ್ನು ಕೇಂದ್ರ ನಿಯಂತ್ರಣ ಆಯೋಗದ ನೂತನ ಅಧ್ಯಕ್ಷರಾಗಿ ಆಯ್ಕೆ ಮಾಡಿತು. ಅವರು ಕೇಂದ್ರ ಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ.



ಯು. ಬಸವರಾಜ್



ಕೆ.ಎನ್. ಉಮೇಶ್

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಯು. ಬಸವರಾಜ್‌ರವರು ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾಗಿ ಮಹಾಧಿವೇಶನದಲ್ಲಿ ಆಯ್ಕೆಯಾಗಿದ್ದಾರೆ.
ಹಾಗೆಯೇ ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯ, ಸಿಐಟಿಯು ಅಖಿಲ ಭಾರತ ಕೇಂದ್ರದ ಸಂಗಾತಿ ಕಾಂ. ಕೆ.ಎನ್. ಉಮೇಶ್‌ರವರೂ ಕೇಂದ್ರ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.
ಇಬ್ಬರು ಸಂಗಾತಿಗಳಿಗೂ, ನೂತನ ಕೇಂದ್ರ ಸಮಿತಿ ಪೊಲಿಟ್‌ಬ್ಯೂರೋಗೆ ಅಭಿನಂದನೆಗಳು.

➘ ತೊಡಕುಂಟಾಗಬೇಕಾಗಿತ್ತು ಅಲ್ಲವೇ? ಪ್ರತಿ ಪಾರ್ಸಿ, ಕ್ರಿಶ್ಚಿಯನ್, ಮುಸ್ಲಿಂ ತುಂಬಾ ಸರಳವಾಗುವ ಧರ್ಮದ ಪ್ರಶ್ನೆ ಹಿಂದೂವಿಗೇಕೆ ತನ್ನ ಧರ್ಮದ ಸಂದರ್ಭದಲ್ಲಿ ಉತ್ತರಿಸಲಾಗದಷ್ಟು ಕಗ್ಗಂಟಾಗುತ್ತದೆ? ಈ ಧಾರ್ಮಿಕ ಗೊಂದಲಗಳಿಗೆ ಕಾರಣವೇನು ಎಂದು ಪ್ರತಿಯೊಬ್ಬ ಹಿಂದೂ ತನ್ನನ್ನು ತಾನು ಕೇಳಿಕೊಳ್ಳಬೇಕಾದಂತಹ ಕಾಲ ಇದು' ಎಂದು ವಿವರವಾಗಿ ಈ ಹಿಂದುತ್ವದ ಟೊಳ್ಳುತನವನ್ನು ಬಿಚ್ಚಿಡುತ್ತಾರೆ.

(ರಿಡಲ್ಸ್ ಆಫ್ ಹಿಂದೂಯಿಸಂ– ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ 4)

ಬಾಬಾ ಸಾಹೇಬರನ್ನು ಹಿಂದೂಯಿಸಂಗೆ ಜೀರ್ಣಿಸಿಕೊಳ್ಳಲು ವಿಫಲ ಪ್ರಯತ್ನ ನಡೆಸಿರುವ ಆರೆಸ್ಸಸ್‌ನ ಚಿತಾವಣೆಗೆ ವ್ಯತಿರಿಕ್ತವಾಗಿ ಡಾ.ಅಂಬೇಡ್ಕರ್ ' ಹಿಂದೂ ರಾಜ್ ಜಾರಿಗೊಂಡರೆ ಈ ದೇಶಕ್ಕೆ ಬಲು ದೊಡ್ಡ ಅನಾಹುತವಾಗುತ್ತದೆ. ಸ್ವಾತಂತ್ರ್ಯ, ಸಮಾನತೆ, ಬಂದುತ್ವಕ್ಕೆ ಹಿಂದೂಯಿಸಂ ವಿಪತ್ಕಾರಿಯಾಗಿದೆ. ಪ್ರಜಾಪ್ರಭುತ್ವಕ್ಕೆ ಹೊಂದಿಕೊಳ್ಳುವುದಿಲ್ಲ. ಹಿಂದೂ ರಾಜ್ ನ್ನು ಯಾವುದೇ ಬೆಲೆ ತೆತ್ತಾದರೂ ಪ್ರತಿಬಂಧಿಸಬೇಕು' ಎಂದು ಎಚ್ಚರಿಸುತ್ತಾರೆ. ಆದರೆ ಅಂಬೇಡ್ಕರ್ ಅವರ ಆತಂಕ ಇಂದು ನಿಜವಾಗಿದೆ. ಹಿಂದೂರಾಜ್ ಭಾರತದ ಬೀದಿಗಳಲ್ಲಿ ತನ್ನ ವಿಕೃತಿಯಿಂದ ಮೆರೆದಾಡುತ್ತಿದೆ. ಭಾರತ ನರಮೇಧಧ ಹೊಸ್ತಿಲಲ್ಲಿದೆ. ಅಂಬೇಡ್ಕರ್ ಪ್ರಕಾರ ಸಮಾಜದ ಸಂಪನ್ಮೂಲಗಳ ಮೇಲೆ ತನ್ನ ಯಜಮಾನಕೀಯವನ್ನು ಸ್ಥಾಪಿಸಲು ಹಿಂದೂ ಸವರ್ಣೀಯರು ಹಿಂದುತ್ವ ಸಿದ್ಧಾಂತವನ್ನು ಬಳಸಿಕೊಳ್ಳುತ್ತಾರೆ. ಈ ಮೇಲ್ಜಾತಿ ಹಿಂದೂಗಳು ಅಪಾಯಕಾರಿ ನಾಯಕರು. ಶಿಕ್ಷಣ ಮತ್ತು ಸಂಪತ್ತಿನ ಮೇಲೆ ಏಕಸ್ವಾಮ್ಯತೆ ಸಾಧಿಸಿರುವ ಈ ಮೇಲ್ಜಾತಿಯವರು ರಾಜ್ಯವನ್ನು ಅತಿಕ್ರಮಿಸಿಕೊಳ್ಳುತ್ತಾರೆ ಎಂದು ವಿವರಿಸಿದ್ದರು.

ಪ್ರೊ. ಶಂಶುಲ್ ಇಸ್ಲಾಂ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ (1940) ಪುಸ್ತಕದಲ್ಲಿ ಅಂಬೇಡ್ಕರ್ 'ಇದು ವಿಚಿತ್ರವೆನಿಸಬಹುದು, ಒಂದು ದೇಶ ವರ್ಸಸ್ ಎರಡು ದೇಶ ಎನ್ನುವ ವಿಚಾರಕ್ಕೆ ಸಂಬಂದಿಸಿದಂತೆ ಪರಸ್ಪರ ವಿರೋಧಿಸುವುದರ ಬದಲು ಸಾವರ್ಕರ್ ಮತ್ತು ಜಿನ್ನಾ ಇಬ್ಬರೂ ಅದನ್ನು ಸಮ್ಮತಿಸುತ್ತಾರೆ ಮತ್ತು ಒಂದು ಹಿಂದೂ, ಇನ್ನೊಂದು ಮುಸ್ಲಿಂ ಎರಡು ದೇಶಗಳಿವೆ ಎಂದು ಪ್ರತಿಪಾದಿಸುತ್ತಾರೆ. ಸಾವರ್ಕರ್ ನಿಲುವು ವಿಲಕ್ಷಣವಲ್ಲದಿದ್ದರೂ ತರ್ಕಹೀನವಾಗಿದೆ. ಮುಸ್ಲಿಂರು ಪ್ರತ್ಯೇಕ ರಾಷ್ಟ್ರವೆಂದು ಸಾವರ್ಕರ್ ಒಪ್ಪಿಕೊಳ್ಳುತ್ತಾರೆ' ಎಂದು ಬರೆಯುತ್ತಾರೆ

ಅಂಬೇಡ್ಕರ್ ಪ್ರಕಾರ 'ಸಾವರ್ಕರ್ ಮುಸ್ಲಿಂ ದೇಶವನ್ನು ಹಿಂದೂ ದೇಶದ ಜೊತೆ ಸರಿ ಸಮಾನವಾಗಿ ಪರಿಗಣಿಸುವುದಿಲ್ಲ. ಅವರು ಹಿಂದೂ ರಾಷ್ಟ್ರವು ಪ್ರಾಬಲ್ಯ ದೇಶವಾಗಿಯೂ, ಮುಸ್ಲಿಂ ರಾಷ್ಟ್ರವು ಅದರ ಅಡಿಯಾಳಾಗಿರುವುದನ್ನು ಬಯಸುತ್ತಾರೆ'.

ಆದರೆ ಈ ಎಲ್ಲಾ ಚಾರಿತ್ರಿಕ ಸತ್ಯಗಳನ್ನು ಮರೆಮಾಚಿ ಅಂಬೇಡ್ಕರ್ ಅವರನ್ನು ಹಿಂದುತ್ವದ ಕುರಿತು ಮೃದು ಧೋರಣೆ ಹೊಂದಿದ್ದರು ಎನ್ನುವ ಮಿಥ್ ಸೃಷ್ಟಿಸುತ್ತಿದ್ದಾರೆ. ಇಂದು ಆರೆಸ್ಸಸ್ ಕೈಯಲ್ಲಿ ಅಧಿಕಾರವಿದೆ. ಶಿಕ್ಷಣ ಇಲಾಖೆಯಿದೆ. ಸಂಸ್ಕೃತಿ ಇಲಾಖೆಯಿದೆ. ಸಾರ್ವಜನಿಕ ಸಂಸ್ಥೆಗಳನ್ನು ಸಂಪೂರ್ಣವಾಗಿ ತನ್ನ ಹಿಂದುತ್ವ–ಬ್ರಾಹ್ಮಣ್ಯಶಾಹಿ ಸಿದ್ಧಾಂತಕ್ಕೆ ದುರುಪಯೋಗಪಡಿಸಿಕೊಳ್ಳುತ್ತಿದೆ ಮತ್ತು ಇದಕ್ಕೆ ಅಂಬೇಡ್ಕರ್ ಲೆಗಸಿಯನ್ನು ಸಹ ತಿರುಚಲಾಗುತ್ತಿದೆ.

ಉಪ ಸಂಹಾರ

ಆಕ್ರಮಣಕಾರಿ ಹಿಂದೂಯಿಸಂ ಭಾರತೀಯ ರಾಷ್ಟ್ರೀಯವಾದದ ಛದ್ಮವೇಷ ಧರಿಸಿದೆ ಎಂದು ಹೇಳುವ ಅಂಬೇಡ್ಕರ್ ಬ್ರಿಟೀಷ್ ಆಡಳಿತ ವಿರುದ್ಧ ಸ್ವಾತಂತ್ರ್ಯ ಪಡೆಯಲು ಮಾತ್ರ ರಾಷ್ಟ್ರೀಯವಾದವನ್ನು ಬಳಸಿಕೊಂಡವರು ಬಹುಸಂಖ್ಯಾತ ಮತೀಯವಾದಕ್ಕೆ ಫಲವತ್ತಾದ ಭೂಮಿಯನ್ನು ಸೃಷ್ಟಿಸಿದರು ಎಂದು ಮಾರ್ಮಿಕವಾಗಿ ಹೇಳುತ್ತಾರೆ. ಡಿ. ರಾಜಾ ಅವರು 'ರಾಷ್ಟ್ರೀಯತೆಯನ್ನು ಕುಟಿಲ ಸ್ವರೂಪದಲ್ಲಿ ಹೇರುವ ಹಿಂದುತ್ವದ ಶಕ್ತಿಗಳ ಕುರಿತು ನಾವು ಎಚ್ಚರದಿಂದ ಇರಬೇಕು, ವಂಚಿತ ಸಮುದಾಯಗಳು ಮತ್ತು ದುಡಿಯುವ ವರ್ಗಗಳು ಎಚ್ಚೆತ್ತುಕೊಂಡು ತಮ್ಮ ಹಕ್ಕುಗಳನ್ನು, ಸ್ವಾತಂತ್ರ್ಯವನ್ನು ಕೇಳಲು ಆರಂಬಿಸಿದಾಗ ಈ ಹಿಂದುತ್ವ ಶಕ್ತಿಗಳು ಈ ಪ್ರತಿರೋಧವು ರಾಷ್ಟ್ರೀಯವಾದಕ್ಕೆ ಕುತ್ತು ತರುತ್ತದೆ ಎಂದು ಆರೋಪಿಸಿ ಅದನ್ನು ಹತ್ತಿಕ್ಕುತ್ತದೆ' ಎಂದು ಹೇಳುತ್ತಾರೆ

ಇಂದು ತಳ ಸಮುದಾಯಗಳು, ದಲಿತರು ಮತ್ತು ದುಡಿಯುವ ವರ್ಗಗಳು ಒಂದಾಗಿ ಈ ಫ್ಯಾಸಿಸಂ ವಿರುದ್ಧ ಬೃಹತ್ತಾದ ಪ್ರತಿರೋಧವನ್ನು ರೂಪಿಸಬೇಕಾಗಿದೆ. ಅಂಬೇಡ್ಕರ್ ಅವರ ಘೋಷ ವಾಕ್ಯಗಳಾದ 'ಶಿಕ್ಷಣ, ಸಂಘಟನೆ, ಹೋರಾಟ'ದ ಕ್ರಿಯಾರೂಪವಾಗಿ ಸಂವಿಧಾನ ಮತ್ತು ಬಹುತ್ವದ ತಳಹದಿಯಲ್ಲಿ ಕಟ್ಟಬೇಕಾಗಿದೆ.

ರಾಷ್ಟ್ರೀಯ ಸೊತ್ತುಗಳ ಲೂಟಿಯ ನಗದೀಕರಣ ಪರಿಯೋಜನೆ ಎಂಬ ದೇಶ-ವಿರೋಧಿ ಹುನ್ನಾರ ಸಾಗಲು ಬಿಡುವುದಿಲ್ಲ

ಮೋದಿ ಸರಕಾರ ಪ್ರಕಟಿಸಿರುವ ಎನ್‌ಎಂಪಿ ಸಾರ್ವಜನಿಕ ಸೊತ್ತುಗಳ ನಗದೀಕರಣದ ಹೆಸರಿನಲ್ಲಿ ಜನರ ಹಣ ಮತ್ತು ದುಡಿಮೆಯಿಂದ ಕಟ್ಟಿರುವ ರಾಷ್ಟ್ರೀಯ ಸೊತ್ತುಗಳ ಲೂಟಿಯ ಹುನ್ನಾರ ನಡೆಸಿದೆ. ಈ ರಾಷ್ಟ್ರವಿರೋಧಿ ಮತ್ತು ಜನವಿರೋಧಿ ಯೋಜನೆಯಾದ "ರಾಷ್ಟ್ರೀಯ ಆಸ್ತಿ ನಗದೀಕರಣ ಪೈಪ್‌ಲೈನ್"ಗೆ ವಿರುದ್ಧವಾಗಿ ಸಜ್ಜುಗೊಳ್ಳಬೇಕು ಮತ್ತು ಪ್ರತಿರೋಧವನ್ನು ಕಟ್ಟಬೇಕು ಎಂದು ಸಿಪಿಐ(ಎಂ)ನ 23ನೇ ಮಹಾಧಿವೇಶನ ಜನಗಳಿಗೆ ಕರೆ ನೀಡಿದೆ. ರಾಷ್ಟ್ರೀಯ ಸೊತ್ತುಗಳ ಲೂಟಿಯ ಈ ದೇಶ-ವಿರೋಧಿ ಹುನ್ನಾರ ಸಾಗಲು ಬಿಡುವುದಿಲ್ಲ ಎಂದು ಮಹಾಧಿವೇಶನ ಸಾರಿ ಹೇಳಿದೆ.

ಮಹಾಧಿವೇಶನ ಎಪ್ರಿಲ್ 9ರಂದು ತಪನ್ ಸೆನ್ ಅವರು ಮಂಡಿಸಿದ ಮತ್ತು ಸಾಯಿಬಾಬು ಅವರು ಅನುಮೋದಿಸಿದ ಈ ಕುರಿತ ಒಂದು ವಿವರವಾದ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿದೆ. ಅದರ ಪೂರ್ಣಪಾಟವನ್ನು ಈ ಮುಂದೆ ಕೊಡಲಾಗಿದೆ:

ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ನಾಲ್ಕು ವರ್ಷಗಳ ರಾಷ್ಟ್ರೀಯ (ಆಸ್ತಿ) ನಗದೀಕರಣ ಪೈಪ್‌ಲೈನ್ (ಎನ್‌ಎಂಪಿ) ಎಂಬುದನ್ನು ಅನಾವರಣ ಮಾಡಿದೆ. ಇದು 6 ಲಕ್ಷ ಕೋಟಿ ರೂಪಾಯಿಗಳನ್ನು ಗಳಿಸುವ ಗುರಿಯನ್ನು ಹೊಂದಿದೆ. ಎನ್‌ಎಂಪಿ ಯ ಗುರಿ ಬಳಕೆಯಲ್ಲಿರುವ ದೇಶದ ಬೃಹತ್ ಮೂಲಸೌಕರ್ಯ ಆಸ್ತಿಗಳನ್ನು ಖಾಸಗಿ ಕಾರ್ಪೊರೇಟ್ ಕಂಪನಿಗಳು ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಸೇರಿದಂತೆ ದೊಡ್ಡ ವ್ಯಾಪಾರೀ ಗುಂಪುಗಳಿಗೆ ಹಸ್ತಾಂತರಿಸುವುದು. ಜನರ ಹಣ ಮತ್ತು ದುಡಿಮೆಯಿಂದ ಕಟ್ಟಿದ ಸೊತ್ತುಗಳನ್ನು ಬಳಸಿಕೊಂಡು ಬಿಜೆಪಿ ಸರ್ಕಾರದ ಕಾರ್ಪೊರೇಟ್ ಬಂಟರಿಗೆ ಅಪಾರ ಹಣವನ್ನು ಸೂರೆ ಮಾಡಲು ಅವಕಾಶ ನೀಡಲಾಗುವುದು. ಅದೇ ಸಾಲಿನಲ್ಲಿ ಬಿಜೆಪಿ ನೇತೃತ್ವದ ಹಲವು ರಾಜ್ಯ ಸರ್ಕಾರಗಳು ಕೂಡ ಸರ್ಕಾರಿ ಸ್ವಾಮ್ಯದ ಆಸ್ತಿ ಮತ್ತು ಭೂಮಿಯನ್ನು ಖಾಸಗಿ ಕಾರ್ಪೊರೇಟ್‌ಗಳಿಗೆ ಉಡುಗೊರೆಯಾಗಿ ನೀಡುವ ಕಸರತ್ತು ಆರಂಭಿಸಿವೆ.

ಯಾವುದೇ ರೀತಿಯಲ್ಲಾದರೂ, ಎಷ್ಟೇ ಬೆಲೆ ತೆತ್ತಾದರೂ ಖಾಸಗೀಕರಿಸುವುದು ಈ ಸರ್ಕಾರದ ಹೆಗ್ಗುರುತು. ಇದು ಈಗ ಭವಿಷ್ಯದ ನಿರೀಕ್ಷಿತ ಆದಾಯಕ್ಕಾಗಿ ಮುಂಗಡ ಪಾವತಿಗಾಗಿ ಬೃಹತ್ ಸರ್ಕಾರಿ ಸ್ವಾಮ್ಯದ ಮೂಲಸೌಕರ್ಯ ಸೊತ್ತುಗಳನ್ನು ಹಸ್ತಾಂತರಿಸಲು ಪ್ರಯತ್ನಿಸುತ್ತಿದೆ. ಇದು 30–35 ವರ್ಷಗಳ ಅವಧಿಗೆ ಈ ಬೃಹತ್ ಮೂಲಸೌಕರ್ಯ ಸ್ವತ್ತುಗಳನ್ನು ನಿರ್ವಹಿಸುವ ಹಕ್ಕನ್ನು ಗುತ್ತೇದಾರಿಗಳಿಗೆ ಹಸ್ತಾಂತರಿಸಲು ಹೊರಟಿರುವ ಈ ತಥಾಕಥಿತ ಎನ್‌ಎಂಪಿಯ ದುಷ್ಟ ಹುನ್ನಾರವಾಗಿದೆ. ಇದು ಈ ಮೂಲಸೌಕರ್ಯ ಸೇವೆಗಳನ್ನು ಬಳಸುವ ಇಡೀ ಅರ್ಥ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಇದರ ಫಲಿತಾಂಶವಾಗಿ ಉದ್ಯೋಗ ನಷ್ಟ ಮತ್ತು ನಿರುದ್ಯೋಗದ ಈಗಾಗಲೇ ಆತಂಕಕಾರಿಯಾದ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ.



ನಗದೀಕರಣಕ್ಕಾಗಿ ಗುರುತಿಸಲಾದ ಮೂಲಸೌಕರ್ಯ ಸೊತ್ತುಗಳಲ್ಲಿ 400 ರೈಲು ನಿಲ್ದಾಣಗಳು, 90 ಪ್ರಯಾಣಿಕ ರೈಲುಗಳು, 1400 ಕಿಮೀ ರೈಲ್ವೆ ಹಳಿಗಳು, 741 ಕಿಮೀ ಕೊಂಕಣ ರೈಲ್ವೆ, 15 ರೈಲ್ವೆ ಕ್ರೀಡಾಂಗಣಗಳು ಮತ್ತು ಆಯ್ದ ರೈಲ್ವೇ ಕಾಲೋನಿಗಳು, 265 ರೈಲ್ವೇ ಗೂಡ್ಸ್ ಶೆಡ್‌ಗಳು ಮತ್ತು 4 ಹಿಲ್ ರೈಲ್ವೇಗಳು ಸೇರಿವೆ – ಎಲ್ಲವೂ ಕೇವಲ 1.5 ಲಕ್ಷ ಕೋಟಿ ರೂ.ಗೆ; ಸಾರ್ವಜನಿಕ ಖಜಾನೆಯಿಂದ ಅಪಾರ ಹೂಡಿಕೆಯಿಂದ ಆಧುನೀಕರಿಸಿದ 25 ವಿಮಾನ ನಿಲ್ದಾಣಗಳನ್ನು ಕೇವಲ ರೂ 20,782 ಕೋಟಿಗೆ ; ಬೃಹತ್ ಕಲ್ಲಿದ್ದಲು ನಿಕ್ಷೇಪಗಳೊಂದಿಗೆ 160 ಕಲ್ಲಿದ್ದಲು ಗಣಿಗಾರಿಕೆ ಆಸ್ತಿಗಳು ಕೇವಲ 28,747 ಕೋಟಿ ರೂ.ಗೆ: 3930 ಕಿ.ಮೀ ಉದ್ದದ ಪೆಟ್ರೋಲಿಯಂ ಪೈಪ್ ಲೈನ್ – ಜುಜುಬಿ ರೂ 22503 ಕೋಟಿಗೆ; ಸಂಚಾರಯೋಗ್ಯ ಜಲಮಾರ್ಗಗಳ ಬೃಹತ್ ಜಾಲವನ್ನು ಹೊಂದಿರುವ 9 ಪ್ರಮುಖ ಬಂದರುಗಳಲ್ಲಿ 31 ಯೋಜನೆಗಳು – ಎಲ್ಲಾ 12,828 ಕೋಟಿ ರೂ.ಗೆ; ಭಾರತೀಯ ಆಹಾರ ನಿಗಮ ಮತ್ತು ಕೇಂದ್ರ ಉಗ್ರಾಣ ನಿಗಮದ ಒಟ್ಟು 210 ಲಕ್ಷ ಮೆಟ್ರಿಕ್ ಟನ್ ಸಂಗ್ರಹ ಸಾಮರ್ಥ್ಯದ ಗೋದಾಮುಗಳು – ಕೇವಲ 28,900 ಕೋಟಿ ರೂ.ಗಳಿಗೆ– ಇವು "ಆಸ್ತಿ ನಗದೀಕರಣ"ದ ಹೆಸರಿನಲ್ಲಿ ರಾಷ್ಟ್ರೀಯ ಖಜಾನೆಯನ್ನು ಹಗಲು ದರೋಡೆ ಮಾಡುವ ಕೆಲವು ಉದಾಹರಣೆಗಳು. ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಅಡಿಯಲ್ಲಿ 28,608 ಸರ್ಕ್ಯೂಟ್ ಕಿಲೋಮೀಟರ್ ವಿದ್ಯುತ್ ಗ್ರಿಡ್ ಮತ್ತು ಸುಮಾರು 30,000 ಕಿಲೋಮೀಟರ್ ಹೆದ್ದಾರಿಗಳನ್ನು ಏಕಸ್ವಾಮ್ಯ ಕಾರ್ಯಾಚರಣೆಯ ಹಕ್ಕುಗಳೊಂದಿಗೆ ದೀರ್ಘಾವಧಿಗೆ ಖಾಸಗಿ ಕಾರ್ಪೊರೇಟ್‌ಗೆ ಹಸ್ತಾಂತರಿಸಲಾಗುತ್ತಿದೆ. ಎನ್‌ಎಂಪಿ ಜೊತೆಗೆ, ಸರ್ಕಾರವು ಈಗ ಭೂಮಿ ನಗದೀಕರಣ ಕಾರ್ಯಕ್ರಮವನ್ನು ಹೊರತಂದಿದೆ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳು, ರೈಲ್ವೆಗಳು, ರಕ್ಷಣಾ ವಲಯ, ಬಿಎಸ್‌ಎನ್‌ಎಲ್ ಇತ್ಯಾದಿಗಳ ಬೃಹತ್ ಭೂ ಆಸ್ತಿಗಳನ್ನು ಅಗ್ಗದಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ 'ರಾಷ್ಟ್ರೀಯ ಭೂಮಿ ನಗದೀಕರಣ ನಿಗಮ'(ನ್ಯಾಷನಲ್ ಲ್ಯಾಂಡ್ ಮಾನಿಟೈಸೇಶನ್ ಕಾರ್ಪೊರೇಷನ್) ಎಂಬ ಸಾರ್ವಜನಿಕ ವಲಯದ ಕಂಪನಿಯನ್ನು ಸ್ಥಾಪಿಸಲಾಗಿದೆ. ಇದಷ್ಟೆ ಅಲ್ಲ – ಈ ಎನ್‌ಎಂಪಿ ಪರಿಯೋಜನೆ ಖಾಸಗಿ ಕಾರ್ಪೊರೇಟ್‌ಗಳಿಗೆ ದೀರ್ಘಾವಧಿಯ ಏಕಸ್ವಾಮ್ಯ ಹಕ್ಕುಗಳನ್ನು ನೀಡಿ ಮತ್ತಷ್ಟು ಮೂಲರಚನೆಯ ಸೊತ್ತುಗಳು ಹರಿದು ಹೋಗುವಂತೆ ಮಾಡುವ ಯೋಚನೆಯನ್ನೂ ಇಟ್ಟುಕೊಂಡಿದೆ.

ಸಾರ್ವಜನಿಕ ವಲಯದ ಮತ್ತು ಅದರ ಆಧಾರದ ಮೇಲೆ ರಾಷ್ಟ್ರೀಯ ಆರ್ಥಿಕತೆಯ ಸ್ವಾವಲಂಬಿ ಅಭಿವೃದ್ಧಿಗೆ ಐತಿಹಾಸಿಕ ವಿರೋಧ ಹೊಂದಿರುವ ಬಿಜೆಪಿಯು ಮೂಲಸೌಕರ್ಯ, ಕೈಗಾರಿಕೆಗಳು ಮತ್ತು ಸಾರ್ವಜನಿಕ ಉಪಯುಕ್ತತೆ ಸೇವೆಗಳು ಸೇರಿದಂತೆ ಸಮಸ್ತ ಸಾರ್ವಜನಿಕ ವಲಯವನ್ನು ಯಾವುದೇ ವಿಧಾನದಿಂದಲಾದರೂ ಮತ್ತು ಅತ್ಯಂತ ಕಡಿಮೆ ಬೆಲೆಗಳಲ್ಲಿ ಖಾಸಗೀಕರಿಸಲು ಹೊರಟಿದೆ. ರಾಷ್ಟ್ರೀಯ ಅರ್ಥವ್ಯವಸ್ಥೆ ಮತ್ತು ನಮ್ಮ ಜನರ ಮೇಲೆ ಈ ಕ್ರಮಗಳ ವಿನಾಶಕಾರಿ ಪರಿಣಾಮದ ಬಗ್ಗೆ ಅದಕ್ಕೆ ಯಾವುದೇ ಕಾಳಜಿಯಿಲ್ಲ. ನವ ಉದಾರೀಕರಣ ನೀತಿಯ ಸುಮಾರು ಮೂವತ್ತು ವರ್ಷಗಳ ಆಳ್ವಿಕೆಗಳಲ್ಲಿ, ಸಾರ್ವಜನಿಕ ಹೂಡಿಕೆಗಳ ಹಿಂಪಡೆತದಲ್ಲಿ ಬಿಜೆಪಿ ನೇತೃತ್ವದ ಆಳ್ವಿಕೆಯದ್ದೇ ಸಿಂಹಪಾಲು.

ಸೊತ್ತುಗಳ "ನಗದೀಕರಣ"ದ ಹೆಸರಿನಲ್ಲಿ ಜನತೆಯ ಸೊತ್ತುಗಳನ್ನು ಸ್ವದೇಶಿ ಮತ್ತು ವಿದೇಶಿ ದೊಡ್ಡ ಉದ್ಯಮಿಗಳಿಗೆ ಲೂಟಿ ಮತ್ತು ಹಸ್ತಾಂತರಣದ ವಿರುದ್ಧ ನಿರ್ಣಾಯಕ ಮತ್ತು ದೃಢವಾದ ಹೋರಾಟಗಳನ್ನು ಬೆಳೆಸಬೇಕಾದ ಕಾರ್ಯಭಾರ ಪಕ್ಷ ಮತ್ತು ಇಡೀ ಕಾರ್ಮಿಕ ವರ್ಗದ ಚಳುವಳಿಯ ಮೇಲಿದೆ.

ಎನ್‌ಎಂಪಿ ಯಲ್ಲಿ ಆಸ್ತಿಗಳನ್ನು ಭೋಗ್ಯಕ್ಕೆಮಾತ್ರ ಕೊಡಲಾಗುತ್ತಿದೆ , ಅವುಗಳ ಮಾರಾಟ ಮಾಡುತ್ತಿಲ್ಲ ಎಂದು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹೇಳಿಕೊಳ್ಳುತ್ತಿದೆ. ಇದೊಂದು ಸಂಪೂರ್ಣವಾಗಿ ತಪ್ಪುದಾರಿಗೆಳೆಯುವ ದಾವೆ ತಮಗೆ ಭೋಗ್ಯಕ್ಕೆ ನೀಡಲಾದ ಸೊತ್ತುಗಳನ್ನು ಬಳಸಿಕೊಳ್ಳುವ ದೊಡ್ಡ ವ್ಯಾಪಾರ ಸಂಸ್ಥೆಗಳು, ತಮ್ಮ ಗ್ರಾಹಕರ ಸುಲಿಗೆ ಮತ್ತು ಇತರ ವಿಧಾನಗಳ ಮೂಲಕ, ಸರ್ಕಾರಕ್ಕೆ ಪಾವತಿಸುವ ಜುಜುಬಿ ಭೋಗ್ಯದ ಹಣದ ಹಲವು ಪಟ್ಟು ದೊಡ್ಡದಾದ ಅಪಾರ ಹಣವನ್ನು ಗಳಿಸುತ್ತವೆ. ಭೋಗ್ಯದ ಅವಧಿಯ ಅಂತ್ಯದಲ್ಲಿ ಆ ಸೊತ್ತುಗಳನ್ನು ಭೋಗ್ಯಕ್ಕೆ ಕೊಟ್ಟಾಗ ಇದ್ದ ಸ್ಥಿತಿಯಲ್ಲೇ ಹಿಂದಿರುಗಿಸಲಾಗುತ್ತದೆ ಅಥವ ಸರಕಾರ ಹಿಂದಕ್ಕೆ ಪಡೆಯುತ್ತದೆ ಎಂಬುದರ ಬಗ್ಗೆ ಖಾತ್ರಿಯೇನೂ ಇಲ್ಲ. ಈ ಸೊತ್ತುಗಳನ್ನು ಜನರಿಗೆ ಅನುಕೂಲವಾಗುವಂತೆ ಸರ್ಕಾರದಿಂದಲೇ ಏಕೆ ನಿರ್ವಹಿಸಲಾಗುವುದಿಲ್ಲ ಎಂಬ ಸರಳ ಪ್ರಶ್ನೆ ಈ ಇಡೀ ಕಸರತ್ತಿನಲ್ಲಿ ಏಳುತ್ತದೆ.



ಸಿಪಿಐ(ಎಂ)ನ 23ನೇ ಮಹಾಧಿವೇಶನವು ಕೇಂದ್ರ ಸರ್ಕಾರದ ರಾಷ್ಟ್ರವಿರೋಧಿ ಮತ್ತು ಜನವಿರೋಧಿ ಯೋಜನೆಯಾದ "ರಾಷ್ಟ್ರೀಯ ಆಸ್ತಿ ನಗದೀಕರಣ ಪೈಪ್‌ಲೈನ್"ಗೆ ವಿರುದ್ಧವಾಗಿ ಸಜ್ಜುಗೊಳ್ಳಬೇಕು ಮತ್ತು ಪ್ರತಿರೋಧವನ್ನು ಕಟ್ಟಬೇಕು ಎಂದು ನಮ್ಮ ದೇಶದ ಜನಗಳಿಗೆ ಕರೆ ಕೊಡುತ್ತದೆ. ರಾಷ್ಟ್ರೀಯ ಸೊತ್ತುಗಳ ಲೂಟಿಯ ಈ ದೇಶ-ವಿರೋಧಿ ಹುನ್ನಾರ ಸಾಗಲು ಬಿಡುವುದಿಲ್ಲ ಎಂದು ಮಹಾಧಿವೇಶನ ಸಾರಿ ಹೇಳುತ್ತದೆ.

ಸಂವಿಧಾನಿಕ ಗಣತಂತ್ರದ ರಕ್ಷಣೆಗೆ ಹಿಂದುತ್ವ ಕೋಮುವಾದದ ವಿರುದ್ಧ ಜಾತ್ಯತೀತ ಶಕ್ತಿಗಳ ವಿಶಾಲ ರಂಗ–ದೇಶಪ್ರೇಮಿಗಳಿಗೆ ಯೆಚುರಿ ಮನವಿ.... ಪುಟ 8 ರಿಂದ

ಪ್ರಯತ್ನಿಸುವ ಮೂಲಕ ನಡೆಯುತ್ತಿದೆ. ಜನಗಳ ನಡುವೆ ವಿಚ್ಛಿದ್ರಕಾರಿ ಪ್ರಚಾರ, ಜನಾಂಗವಾದ, ಬೇರೆ ಜನಾಂಗಗಳ ಬಗ್ಗೆ ಭೀತಿ ಸೃಷ್ಟಿಸುವುದು, ಧಾರ್ಮಿಕ ಸಂಕುಚಿತವಾದ, ಮೂಲಭೂತವಾದ ಮತ್ತು ಭಾರತದ ಸಂದರ್ಭದಲ್ಲಿ ಕೋಮುವಾದವನ್ನು ಪ್ರಚೋದಿಸುವ ಮೂಲಕ ಇದನ್ನು ಮಾಡಲಾಗುತ್ತಿದೆ.

ಆದರೆ ಇದಕ್ಕೆ ಪ್ರತಿರೋಧವೂ ಹೆಚ್ಚುತ್ತಿದೆ. ವಿಶೇಷವಾಗಿ ಲ್ಯಾಟಿನ್ ಅಮೆರಿಕದಲ್ಲಿ ಎಡ, ಪ್ರಗತಿಪರ ಶಕ್ತಿಗಳ ಚುನಾವಣಾ ವಿಜಯಗಳ ಮೂಲಕ, ಜಗತ್ತಿನ ಇತರೆಡೆಗಳಲ್ಲಿ ಜನತೆಯ ಹೆಚ್ಚುತ್ತಿರುವ ಪ್ರತಿಭಟನೆಗಳು ಮತ್ತು ಹೋರಾಟಗಳ ಮೂಲಕ ಇದಕ್ಕೆ ಸವಾಲು ಹಾಕುವ ಪ್ರವೃತ್ತಿಗಳೂ ಎದ್ದು ಬರುತ್ತಿವೆ. ಐವತ್ತು ವರ್ಷಗಳ ನಂತರ ಚಿಲಿಯಲ್ಲಿ ಮತ್ತೆ ಪ್ರಗತಿಪರ ಶಕ್ತಿಗಳ ಸರಕಾರ ಬಂದಿದೆ. ಅದರಲ್ಲಿ ಮೂವರು ಕಮ್ಯುನಿಸ್ಟರು ಪ್ರಮುಖ ಜವಾಬ್ದಾರಿ ಸ್ಥಾನಗಳನ್ನು ಪಡೆದಿದ್ದಾರೆ ಎಂಬ ಬೆಳವಣಿಗೆಯತ್ತ ಯೆಚುರಿ ಗಮನ ಸೆಳೆದರು.

ಈ ನಡುವೆ ಜಗತ್ತಿನ ಮೇಲೆ ಯಜಮಾನಿಕೆಯನ್ನು ಬಲಪಡಿಸುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಭೀಪ್ಸೆ ಕೋವಿಡೋತ್ತರ ಜಗತ್ತಿನಲ್ಲಿ ಮುಂದುವರೆಯುತ್ತಿದೆ. ಇದಕ್ಕಾಗಿ ಚೀನಾವನ್ನು 'ತಡೆಗಟ್ಟುವ' ತನ್ನ ಹಿಂದಿನ ಧೋರಣೆಗೆ ಬದಲಾಗಿ ಅದನ್ನು ಒಬ್ಬಂಟಿಯಾಗಿಸುವ ಗುರಿ ಇಟ್ಟುಕೊಂಡಿದೆ. ಇದಕ್ಕಾಗಿ ಅದು ತನ್ನ ಮಿತ್ರ ದೇಶಗಳನ್ನೆಲ್ಲ ಅಣಿನೆರೆಸಲು ಪ್ರಯತ್ನಿಸುತ್ತಿದೆ. 42 ದಿನಗಳಿಂದ ನಡೆಯುತ್ತಿರುವ ರಷ್ಯ-ಉಕ್ರೇನ್ ಯುದ್ಧ, ವಾಸ್ತವವಾಗಿ, ರಷ್ಯಾ ಮತ್ತು ಅಮೆರಿಕ/ನಾಟೋ ನಡುವಿನ ಯುದ್ಧ, ಉಕ್ರೇನ್ ಅದರ ರಣಾಂಗಣವಷ್ಟೇ ಎಂದ ಯೆಚುರಿ, ನಾಟೋವನ್ನು ಸತತವಾಗಿ ರಷ್ಯಾದ ಗಡಿಗಳತ್ತ ವಿಸ್ತರಿಸುವ ಪ್ರಯತ್ನದ ಹಿನ್ನೆಲೆಯಲ್ಲಿ ಈ ಯುದ್ಧ ನಡೆದಿದೆ, ಇದನ್ನು ತಕ್ಷಣವೇ ನಿಲ್ಲಿಸಬೇಕು ಎಂದರು.

ಈ ಯುದ್ಧ ಮತ್ತು ಭಾರತವು ವಿಶ್ವಸಂಸ್ಥೆಯಲ್ಲಿ ರಷ್ಯಾದ ವಿರುದ್ಧ ನಿರ್ಣಯಗಳಲ್ಲಿ ಸತತವಾಗಿ ಗೈರುಹಾಜರಾಗುತ್ತಿರುವುದು ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರನಾಗಿ ಗಟ್ಟಿಗೊಳಿಸುವ ಮೋದಿ ಸರಕಾರದ ಹಂಬಲ ಎಷ್ಟು ನಿರರ್ಥಕ ಎಂಬುದನ್ನು ತೋರಿಸಿದೆ. ಭಾರತ ಒಂದು ಸ್ವತಂತ್ರ ವಿದೇಶಾಂಗ ಧೋರಣೆಯ ಮೂಲಕ ತನ್ನ ಹಿತಾಸಕ್ತಿಗಳನ್ನು ಎತ್ತಿ ಹಿಡಿಯಬೇಕು ಎಂದು ಯೆಚುರಿ ಹೇಳಿದರು.

ಭಾರತೀಯ ಸಂವಿಧಾನದ ಆಧಾರಸ್ಥಂಭಗಳ ಮೇಲೆ ಪ್ರಹಾರ

ಬಿಜೆಪಿ ಎಂಟು ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದಂದಿನಿಂದ, ವಿಶೇಷವಾಗಿ 2019ರಲ್ಲಿ ಮತ್ತೆ ಬಂದ ನಂತರ, ಆರೆಸ್ಸೆಸ್‌ನ ಫ್ಯಾಸಿಸ್ಟ್ ತೆರನ ಹಿಂದುತ್ವ ಅಜೆಂಡಾವನ್ನು ಹೇರಲು ಸಂವಿಧಾನದ ಮೂಲಾಧಾರಗಳಾದ ಜಾತ್ಯತೀತ ಪ್ರಜಾಪ್ರಭುತ್ವ, ಒಕ್ಕೂಟ ತತ್ವ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸಾರ್ವಭೌಮತೆಯ ಮೇಲೆ ಸತತ ಪ್ರಹಾರ ನಡೆಸುತ್ತಿರುವುದನ್ನು ಕಾಣುತ್ತಿದ್ದೇವೆ. ಈ ಗೀಳನ್ನು ಹಚ್ಚಿಕೊಂಡಿರುವ ಅದರ ಸರಕಾರ ಮಹಾಸೋಂಕನ್ನು ನಿಭಾಯಿಸುವಲ್ಲಿ ಶೋಚನೀಯವಾಗಿ ವಿಫಲವಾದುದರಿಂದ ಭಾರೀ ಸಂಖ್ಯೆಯಲ್ಲಿ ಪ್ರಾಣಹಾನಿ ಸಂಭವಿಸಿತು. ಆದರೂ ಹಿಂದುತ್ವ ಕಥನದ ಮೂಲಕ ಅವನ್ನೆಲ್ಲ ಮರೆಮಾಚಲು ಅದಕ್ಕೆ ಸಾಧ್ಯವಾಗಿದೆ.

ಇಂತಹ ಸನ್ನಿವೇಶದಲ್ಲಿ ಅದನ್ನು ಜನಗಳಿಂದ ದೂರ ಮಾಡುವುದು ಅತ್ಯಗತ್ಯವಾಗಿದೆ. ಆದರೆ ಇದನ್ನು ಕೇವಲ ಚುನಾವಣಾ ತಂತ್ರಗಳ ಮೂಲಕ ಮಾಡಲು ಸಾಧ್ಯವಿಲ್ಲ. ರಾಜಕೀಯ, ಸೈದ್ಧಾಂತಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ರಂಗಗಳಲ್ಲಿ ಅವಿಶ್ರಾಂತ ಪ್ರಯತ್ನಗಳ ಮೂಲಕ ಇದನ್ನು ಮಾಡಬೇಕಾಗಿದೆ.

ಎಲ್ಲ ಎಡ, ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳು ಬಿಜೆಪಿಯನ್ನು ಮೂಲೆಗೊತ್ತಲು ಮತ್ತು ಸೋಲಿಸಲು ಒಂದಾಗಬೇಕು, ಜಾತ್ಯತೀತತೆಗೆ ಬದ್ಧ ಎನ್ನುವ ಎಲ್ಲ ರಾಜಕೀಯ ಪಕ್ಷಗಳು ತಮ್ಮ ದೇಶಪ್ರೇಮೀ ಕರ್ತವ್ಯವನ್ನು ನಿಭಾಯಿಸಬೇಕು. ಕಾಂಗ್ರೆಸ್ ಪಕ್ಷ ಮತ್ತು ಇತರ ಪ್ರಾದೇಶಿಕ ಪಕ್ಷಗಳು ತಮ್ಮ ಅಂತರಿಕ ಪರಿಸ್ಥಿತಿಗಳನ್ನು ಸರಿ ಪಡಿಸಿಕೊಂಡು, ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಉಳಿಸಿಕೊಳ್ಳುವ ಹೋರಾಟದಲ್ಲಿ ತಮ್ಮ ನಡೆ–ನಿಲುವಗಳೇನು ಎಂದು ನಿರ್ಧರಿಸಿಕೊಳ್ಳಬೇಕು. ಇದರಲ್ಲಿ ಎಡಬಿಡಂಗಿತನ ಈ ಪಕ್ಷಗಳಿಂದ ಕೋಮುವಾದಿ ಶಕ್ತಿಗಳತ್ತ ದೊಡ್ಡ ಪ್ರಮಾಣದ ನಿರ್ಗಮನಕ್ಕೆ ದಾರಿಮಾಡಿಕೊಡುತ್ತದೆ ಎಂಬುದನ್ನು ಅನುಭವವೇ ತೋರಿಸಿಕೊಟ್ಟಿದೆ. ಯಾವುದೇ ರಾಜಿಯಿಲ್ಲದ ಜಾತ್ಯತೀತತೆಯನ್ನು ಪ್ರತಿಪಾದಿಸುವ ಮೂಲಕ ಮಾತ್ರವೇ ಹಿಂದುತ್ವ ಕೋಮುವಾದವನ್ನು ಎದುರಿಸಲು ಸಾಧ್ಯ ಎಂದು ಯೆಚುರಿ ಒತ್ತಿ ಹೇಳಿದರು.

ಸಿಪಿಐ(ಎಂ) ಮತ್ತು ಎಡಪ್ರಜಾಪ್ರಭುತ್ವ ರಂಗ ಯಾವುದೇ ರಾಜಿಯಿಲ್ಲದೆ ಜಾತ್ಯತೀತತೆಎಯನ್ನು ಎತ್ತಿ ಹಿಡಿಯುವುದು, ಜಾತಿ, ಮತ, ಲಿಂಗದ ಬೇಧಭಾವವಿಲ್ಲದೆ ಸಮಾನತೆಯನ್ನು ಗೌರವಿಸುತ್ತ ನವ–ಉದಾರವಾದಿ ಅಜೆಂಡಾಕ್ಕೆ ಪರ್ಯಾಯವಾದ ಜನಪರ ಧೋರಣೆಗಳನ್ನು ಜಾರಿ ಮಾಡುವುದು ಹೇಗೆ ಎಂದು ತೋರಿಸಿಕೊಡುತ್ತಿರುವ ಕೇರಳದ ಹೋರಾಟದ ಕೆಂಪು ಭೂಮಿ ಕಣ್ಣೂರಿನಲ್ಲಿ ನಡೆಯುತ್ತಿರುವ ಸಿಪಿಐ(ಎಂ)ನ 23ನೇ ಮಹಾಧಿವೇಶನ ಹಿಂದುತ್ವ ಅಜೆಂಡಾದ ವಿರುದ್ಧ ಹೋರಾಟವನ್ನು ಬಲಪಡಿಸಲು ಕೈಗೊಳ್ಳಬೇಕಾದ ಮೂರ್ತ ಕ್ರಮಗಳ ಬಗ್ಗೆ ಚರ್ಚೆ ನಡೆಸುತ್ತದೆ ಎಂದು ಯೆಚುರಿ ಹೇಳಿದರು.

ಮಹಾಧಿವೇಶನದ ಮುಖ್ಯ ಚರ್ಚೆ, ಕಲಾಪಗಳು ಮುಂದಿನವಾರ

ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರದ ಸಾಧನೆಗಳಿಗೆ ಮಹಾಧಿವೇಶನದ ನಮನ

ಸಿಪಿಐ(ಎಂ)ನ 23 ನೇ ಮಹಾಧಿವೇಶನ 2016 ರಿಂದ ಅಧಿಕಾರದಲ್ಲಿರುವ ಕೇರಳದ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್)'ದ ಸರ್ಕಾರದ ಐತಿಹಾಸಿಕ ಮತ್ತು ಹೊಸ ದಾರಿ ತೋರಿಸುವ ಸಾಧನೆಗಳಿಗೆ ನಮನ ಸಲ್ಲಿಸುತ್ತ ಒಂದು ಪ್ರತ್ಯೇಕ ನಿರ್ಣಯವನ್ನು ಅಂಗೀಕರಿಸಿತು. ಇದರಲ್ಲಿ ಸಿಪಿಐ(ಎಂ)ನ ಕೇರಳ ರಾಜ್ಯ ಸಮಿತಿ ಸರ್ಕಾರಕ್ಕೆ ನೀಡಿದ ರಾಜಕೀಯ ಮಾರ್ಗದರ್ಶನಕ್ಕಾಗಿ ಮತ್ತು ಸರ್ಕಾರದ ಉಪಕ್ರಮಗಳಲ್ಲಿ ಭಾಗವಹಿಸಿ, ಬೆಂಬಲ ನೀಡಿ ಯಶಸ್ವಿಗೊಳಿಸಿದ ಕೇರಳಸ ಜನತೆಯನ್ನೂ ಈ ನಿರ್ಣಯ ವಂದಿಸಿದೆ.

2016 ರಲ್ಲಿ ಕೇರಳದಲ್ಲಿ, ಹಿಂದಿನ ಯುಡಿಎಫ್ ಸರ್ಕಾರ ಹೊಸ ಸರ್ಕಾರಕ್ಕೆ ಒಂದು ಸಂಕಷ್ಟದ ಉಂಬಳಿಯನ್ನು ಹಸ್ತಾಂತರಿಸಿತು: ಖಾಲಿಯಾದ ಖಜಾನೆ, ಕೃಷಿಯಲ್ಲಿನ ಬೆಳವಣಿಗೆಯ ಋಣಾತ್ಮಕ ದರಗಳು (ವಿಶೇಷವಾಗಿ ಬೆಳೆ ಉತ್ಪಾದನೆಯಲ್ಲಿ), ಉದ್ಯಮದಲ್ಲಿನ ಸ್ಥಗಿತತೆ ಮತ್ತು ಉದ್ಯೋಗದಲ್ಲಿ ನಿಧಾನಗತಿಯ ಒಂಬಳಿಯನ್ನು ಪಡೆದಿತ್ತು. ಭ್ರಷ್ಟಾಚಾರವು ಯುಡಿಎಫ್ ಸರ್ಕಾರದ ವಿಶಿಷ್ಟ ಲಕ್ಷಣವಾಗಿತ್ತು, ಜನರ ಹೋರಾಟಗಳಿಗೆ ಸರ್ಕಾರವು ನಿರ್ದಯ ಪ್ರತಿಕ್ರಿಯೆಗಳನ್ನು ನೀಡಿತು ಮತ್ತು ಕೋಮುವಾದವು ರಾಜಕೀಯ ವ್ಯವಸ್ಥೆಯಲ್ಲಿ ನುಸುಳಲುಹೊಸ ದಾರಿಗಳನ್ನು ಮಾಡಿಕೊಳ್ಳುತ್ತಿತ್ತು.

ಎಡ ಪ್ರಜಾಸತ್ತಾತ್ಮಕ ರಂಗವು 2016 ರಲ್ಲಿ ಅಧಿಕಾರಕ್ಕೆ ಬಂದಾಗ, ಕೇಂದ್ರ ಮತ್ತು ಇತರ ರಾಜ್ಯಗಳಲ್ಲಿನ ಪ್ರವೃತ್ತಿಗೆ ವಿರುದ್ಧವಾಗಿ, ಆರ್ಥಿಕ ಯೋಜನೆಯ ಪ್ರಕ್ರಿಯೆಯನ್ನು ಮುಂದುವರಿಸಲು ನಿರ್ಧರಿಸಿತು. ಮಾನವ ಅಭಿವೃದ್ಧಿಯಲ್ಲಿ ತನ್ನ ಸಾಧನೆಗಳನ್ನು ಆಳಗೊಳಿಸಿ ವಿಸ್ತರಿಸುವಾಗ, ಈ



ಸಾಧನೆಗಳನ್ನು ಜನರಿಗೆ, ವಿಶೇಷವಾಗಿ ಯುವಕರಿಗೆ, ಕೃಷಿ, ಕೈಗಾರಿಕೆ ಮತ್ತು ಆದಾಯ ತರುವ ಸೇವೆಗಳಲ್ಲಿ ಉತ್ಪಾದನೆಯಿಂದ ಆದಾಯಗಳನ್ನು ಹೆಚ್ಚಿಸಲು ಮತ್ತು ಮೂಲಸೌಕರ್ಯಗಳನ್ನು ನಿರ್ಮಿಸಲು. ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಅಡಿಪಾಯವಾಗಿ ಬಳಸಿಕೊಳ್ಳಲು ಸರ್ಕಾರ ನಿರ್ಧರಿಸಿತು.

2016–21ರ ಎಲ್‌ಡಿಎಫ್ ಸರ್ಕಾರದ ಅವಧಿಯಲ್ಲಿ ಸರ್ಕಾರವು ಸವಾಲಿನ ಮೇಲೆ ಸವಾಲನ್ನು ಎದುರಿಸಿತು. ಹವಾಮಾನ ವೈಪರೀತ್ಯಗಳು ಸಂಭವಿಸಿದವು. 2017 ರಲ್ಲಿ ಓಖಿ ಚಂಡಮಾರುತ, ಮತ್ತು 2018 ಮತ್ತು 2019 ರಲ್ಲಿ ಪ್ರವಾಹ ಮತ್ತು ಮಣ್ಣಿನ ಕುಸಿತದ ನಂತರದ ವಿಪರೀತ ಮಳೆಯ ಘಟನೆಗಳು. 2018 ರಲ್ಲಿ ರಾಜ್ಯದ ಎರಡು ಜಿಲ್ಲೆಗಳಲ್ಲಿ ಏಕಾಏಕಿ ನಿಪಾ ವೈರಸ್ ರೋಗ ಹರಡಿತು. 2016 ರಲ್ಲಿ ನೋಟುರದ್ಧತಿ ಮತ್ತು 2017 ರಲ್ಲಿ ಜಿಎಸ್‌ಟಿ ತಂದುದರಿಂದ ರಾಜ್ಯದ ಆರ್ಥಿಕತೆಯ ಮೇಲೆ ಹೊಸ ಒತ್ತಡಗಳು ಉಂಟಾದವು. ಬೇರೆಡೆಯಂತೆ, ಕೇರಳದಲ್ಲೂ ಕೋವಿಡ್ –19 ಸಾಂಕ್ರಾಮಿಕ ರೋಗದೊಂದಿಗೆ ಸಂಬಂಧಿಸಿದ ಬಿಕ್ಕಟ್ಟು ಆರ್ಥಿಕತೆಯನ್ನು ಹಿಂದೆಂದಿಗಿಂತಲೂ ಅಸ್ಥಿರಗೊಳಿಸಿದೆ. ಕೇಂದ್ರ–ರಾಜ್ಯ ಹಣಕಾಸು ಸಂಬಂಧಗಳು ಹದಗೆಟ್ಟಿದ್ದು, ರಾಜ್ಯಗಳು ನಿಧಿ ಹಂಚಿಕೆಯಲ್ಲಿ ಹೆಚ್ಚು ಪ್ರತಿಕೂಲ ಸ್ಥಿತಿಯನ್ನು ಎದುರಿಸುತ್ತಿವೆ.

ಎಲ್‌ಡಿಎಫ್ ಸರ್ಕಾರವು ಎದುರಿಸಬೇಕಾದ ಬಹು ಸವಾಲುಗಳ ಹೊರತಾಗಿಯೂ, ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ ಅಲ್ಪಾವಧಿಯ, ಮಧ್ಯಮ–ಅವಧಿಯ ಮತ್ತು ದೀರ್ಘಾವಧಿಯ ಸಂರಚನಾತ್ಮಕ ಗಳಿಕೆಗಳು ಸಾಧ್ಯವಾಗಿವೆ. ಸಾರ್ವಜನಿಕ ಶಾಲಾ ಶಿಕ್ಷಣದಲ್ಲಿ ದಶಕಗಳಲ್ಲೇ ಅತ್ಯಂತ ವ್ಯಾಪಕವಾದ ಬದಲಾವಣೆಗಳು, ಬಡವರಿಗೆ ಅತ್ಯಂತ ಯಶಸ್ವಿ ವಸತಿ ಯೋಜನೆ, ಆರೋಗ್ಯ ಸೌಲಭ್ಯಗಳಲ್ಲಿ ಸಾರ್ವಜನಿಕ ಲಭ್ಯತೆ ಮತ್ತು ಗುಣಮಟ್ಟಕ್ಕೆ ಸಂಬಂಧಿಸಿದಂತೆ ಮಹತ್ತರವಾದ ಬದಲಾವಣೆಗಳು, ಪ್ರಮುಖ ಭೌತಿಕ ಮೂಲಸೌಕರ್ಯದಲ್ಲಿ ಪರಿವರ್ತನೆ, ಉದ್ಯಮ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಹೊಸ ನೀತಿ ನಿರ್ದೇಶನ, ಸ್ಥಳೀಯ ಆಡಳಿತದಲ್ಲಿ ಸಹಭಾಗಿತ್ವವನ್ನು ಗಾಢಗೊಳಿಸಿದ್ದು, ಜೀವನೋಪಾಯ ಮತ್ತು ಉದ್ಯೋಗ ಸೃಷ್ಟಿಗೆ ನವೀಕೃತ ಒತ್ತು,, ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ಪುನರುಜ್ಜೀವನ, ಮತ್ತು ಸಾಮಾಜಿಕ ರಕ್ಷಣೆ ಮತ್ತು ಲಿಂಗ ಸಬಲೀಕರಣ ಕ್ರಮಗಳ ವರ್ಧನೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಬಿಜೆಪಿಯ ಸಂಘಟಿತ ವಿರೋಧದ ನಡುವೆಯೂ ಇವೆಲ್ಲವನ್ನೂ ಸಾಧಿಸಲಾಗಿದೆ.

ಎಲ್‌ಡಿಎಫ್ ಸರ್ಕಾರ ಮತ್ತು ಕೇರಳದ ಜನರು ಬಿಕ್ಕಟ್ಟುಗಳ ನಡುವೆಯೂ ಹೆಚ್ಚಿನ ಚೇತರಿಕೆಯ ಶಕ್ತಿಯನ್ನು ತೋರಿಸಿದರು ಮತ್ತು ಸರ್ಕಾರ ಯಾವಾಗಲೂ ತನ್ನ ನೀತಿ ನಿರ್ಧಾರಗಳ ಕೇಂದ್ರದಲ್ಲಿ ಜನರನ್ನು ಇಟ್ಟುಕೊಂಡಿತ್ತು. ಪ್ರವಾಹದ ಸಮಯದಲ್ಲಿ ಮತ್ತು ಸಾಂಕ್ರಾಮಿಕ ಸಮಯದಲ್ಲಿ ಎಲ್‌ಡಿಎಫ್ ಸರ್ಕಾರದ ಜನಪರ ನೀತಿಗಳು ದೇಶ ಮತ್ತು ಪ್ರಪಂಚದ ಎಲ್ಲಾ ಭಾಗಗಳಿಂದ ಪ್ರಶಂಸೆಗೆ ಪಾತ್ರವಾಗಿವೆ. ಅಭಿವೃದ್ಧಿ ಮತ್ತು ಬಿಕ್ಕಟ್ಟಿಗೆ ಸ್ಪಂದಿಸುವ ಈ ನೀತಿಗಳನ್ನು ಎಲ್‌ಡಿಎಫ್ ಸರಕಾರ ಕಾಮ್ರೇಡ್ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ರೂಪಿಸಿದೆ.

ತನ್ನಐತಿಹಾಸಿಕ ಸಾಧನೆಯ ಬಲದಿಂದ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಸರ್ಕಾರವು ಅಭೂತಪೂರ್ವ ಎರಡನೇ ಅವಧಿಯ ಅಧಿಕಾರಕ್ಕೆ ಮರು–ಚುನಾಯಿಸಲ್ಪಟ್ಟಿದೆ. ಸರ್ಕಾರದ ಮರುಚುನಾವಣೆಯು ಪಕ್ಷಕ್ಕೆ ಮತ್ತು ಚಳುವಳಿಗೆ ಉತ್ತಮ ಸಾಧ್ಯತೆಗಳನ್ನು ತೆರೆದಿದೆ ಎಂದು ಈ ಮಹಾಧಿವೇಶನ ಗಮನಿಸಿದೆ.

ಭಾರತದಲ್ಲಿ ಬೂರ್ಜ್ವಾ–ಭೂಮಾಲಿಕ ಆಡಳಿತವು ನಿಗದಿಪಡಿಸಿದ ಮಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ, ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರವು ದುಡಿಯುವ ಜನರ ಹಿತಾಸಕ್ತಿಗಳಿಗಾಗಿ ಪರ್ಯಾಯ ನೀತಿಗಳನ್ನು ಜಾರಿಗೆ ತರಲು ಶ್ರಮಿಸುತ್ತಿರುವ ವಿಶ್ವದ ಎಡ ಸರ್ಕಾರಗಳಲ್ಲಿ ಒಂದಾಗಿದೆ.

ಸಿಪಿಐ(ಎಂ)ನ ಕೇರಳ ರಾಜ್ಯ ಸಮ್ಮೇಳನವು ಅಂಗೀಕರಿಸಿದ ನಿರ್ಣಯ ಗಮನಿಸಿರುವಂತೆ, "ಹಿಂದಿನ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರವು ಆಧುನಿಕ ಜಗತ್ತಿನಲ್ಲಿ ತನ್ನದೇ ಆದ ಸ್ಥಾನದೊಂದಿಗೆ ನವ ಕೇರಳವನ್ನು ನಿರ್ಮಿಸಲು ಅಡಿಪಾಯ ಹಾಕಿತು. ಕೇರಳದಲ್ಲಿ ಪಕ್ಷದ ಉದ್ದೇಶದೀ ಅಡಿಪಾಯದ ಮೇಲೆ ಕೇರಳದ ಸಮಾಜವನ್ನು ಗುಣಾತ್ಮಕವಾಗಿ ಉನ್ನತ ಹಂತಕ್ಕೆ ಕೊಂಡೊಯ್ಯುವುದು.. [ಮತ್ತು] ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಉತ್ಪಾದನಾ ಶಕ್ತಿಗಳನ್ನು ಬಲಪಡಿಸಲು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪಡೆದ ಜ್ಞಾನ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿನ ಪ್ರಗತಿಯನ್ನು ಬಳಸಿಕೊಳ್ಳುವುದು." ಭಾರತ ಮತ್ತು ಜಗತ್ತಿಗೆ ಒಂದು ಜಾತ್ಯತೀತ, ಪ್ರಜಾಸತ್ತಾತ್ಮಕ, ಸಾಮಾಜಿಕವಾಗಿ ಎಲ್ಲರನ್ನೂ ಒಳಗೊಳ್ಳುವ ಮತ್ತು ಉನ್ನತ–ಬೆಳವಣಿಗೆಯ ಪರ್ಯಾಯ ಅಭಿವೃದ್ಧಿ ನೀತಿಯನ್ನು ಪ್ರಸ್ತುತಪಡಿಸುವ ಎಲ್‌ಡಿಎಫ್ ಸರ್ಕಾರದ ಪ್ರಯತ್ನಗಳನ್ನು ಮಹಾಧಿವೇಶನ ಮೆಚ್ಚುಗೆಯಿಂದ ಗಮನಿಸಿದೆ.

ಕೇರಳದಲ್ಲಿ ಪಕ್ಷ ಮತ್ತು ಚಳುವಳಿಯ ಮತ್ತು ಎಲ್‌ಡಿಎಫ್ ಸರ್ಕಾರದ ಬಲವು ಭಾರತದಾದ್ಯಂತ ಪಕ್ಷ ಮತ್ತು ಎಡ ಚಳುವಳಿಗಳನ್ನು ಬಲಪಡಿಸುತ್ತದೆ ಎಂದಿರುವ ಮಹಾಧಿವೇಶನ ಕೇರಳದ ಜನತೆ ಮತ್ತು ಪಕ್ಷಕ್ಕೆ ಕೇರಳ, ಭಾರತ ಮತ್ತು ಜಗತ್ತಿನ ಎಡ ಮತ್ತು ಕಮ್ಯುನಿಸ್ಟ್ ಆಂದೋಲನಗಳ ಹಿತದೃಷ್ಟಿಯ ಸೇವೆಯಲ್ಲಿ ಹೆಚ್ಚೆಚ್ಚು ಶಕ್ತಿ ಪಡೆದು ಬೆಳೆಯಲ್ಲು ಸಮಸ್ತ ಪಕ್ಷ ಬೆಂಬಲ ನೀಡುವುದಾಗಿ ಪ್ರತಿಜ್ಞೆಗೈದಿದೆ.

ನಿರ್ಣಯವನ್ನು ಸೂರ್ಯಕಾಂತ ಮಿಶ್ರ ಮಂಡಿಸಿದರು ಮತ್ತು ಜಿ.ರಾಮಕೃಷ್ಣನ್ ಅನುಮೋದಿಸಿದರು.



ಕಾಂಗ್ರೆಸ್ ತನ್ನ ವಿಶ್ವಾಸಾರ್ಹತೆಯನ್ನು ತಾನೇ ಧ್ವಂಸ ಪಡಿಸಿಕೊಳ್ಳುತ್ತಿದೆ- ಪ್ರಕಾಶ ಕಾರಟ್

ನಾವು ನಮ್ಮ ಜಾತಿ–ಮತಗಳ ಬೇಧಭಾವವಿಲ್ಲದೆ ಭಾರತೀಯರಾಗಿ ಹೊಮ್ಮಿದ್ದೇವೆ. ಆದರೆ ಫ್ಯಾಸಿಸ್ಟ್ ತೆರನ ಆರೆಸ್ಸೆಸ್ ನಡೆಸುತ್ತಿರುವ ಮತ್ತು ನಿಯಂತ್ರಿಸುತ್ತಿರುವ ಪ್ರಸಕ್ತ ಆಳುವ ಪಕ್ಷ ಬಿಜೆಪಿ ನಮ್ಮ ದೇಶದ ಜಾತ್ಯತೀತ ಚಾರಿತ್ರ್ಯವನ್ನು ಧ್ವಂಸ ಮಾಡಲು ಪ್ರಯತ್ನಿಸುತ್ತಿದೆ. ಇದು ದೇಶ ಮತ್ತು ಜನತೆ ಎದುರಿಸುತ್ತಿರುವ ಮೂಲಭೂತ ಸವಾಲು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಪ್ರಕಾಶ ಕಾರಟ್ ಹೇಳಿದ್ದಾರೆ.

ಅವರು ಸಿಪಿಐ(ಎಂ) ಮಹಾಧಿವೇಶನದ ಸಂದರ್ಭದಲ್ಲಿ ಕಣ್ಣೂರಿನಲ್ಲಿ ಎಪ್ರಿಲ್ 8 ರಂದು 'ಜಾತ್ತತೀತತೆಗೆ ಸವಾಲುಗಳು' ಎಂಬ ವಿಷಯದ ಮೇಲೆ ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತ ಮಾತನಾಡುತ್ತಿದ್ದರು.

ಇದಕ್ಕೆ ಕಾಂಗ್ರೆಸ್ ಮುಖಂಡ ಮತ್ತು ಸಂಸತ್ ಸದಸ್ಯ ಶಶಿ ತರೂರ್ ಅವರನ್ನೂ ಆಹ್ವಾನಿಸಲಾಗಿತ್ತು, ಮತ್ತು ಅವರು ಭಾಗವಹಿಸಲು ಒಪ್ಪಿದ್ದರು. ಆದರೆ ಕಾಂಗ್ರೆಸ್ ಮುಖಂಡತ್ವ ಅವರು ಭಾಗವಹಿಸಬಾರದು ಎಂದು ನಿಷೇಧಿಸಿತು. "ಜಾತ್ಯತೀತ ಪ್ರಜಾಪ್ರಭುತ್ವ ಮನಸ್ಸಿನ ಪ್ರತಿಯೊಬ್ಬರೂ ಈ ವಿಷಯದ ಬಗ್ಗೆ ಚರ್ಚೆ ಅಗತ್ಯ ಎಂದು ಒಪ್ಪುತ್ತಾರೆ. ಈ ವಿಷಯದಲ್ಲಿ ಶಶಿ ತರೂರ್ ಅವರ ಹೇಳಿಕೆಯನ್ನು ನೋಡಿದ್ದೇನೆ. ಇದೊಂದು ಮಹತ್ವದ ವಿಚಾರ ಸಂಕಿರಣ, ನಾನು ಇದರಲ್ಲಿ ಭಾಗವಹಿಸಲು ಉತ್ಸುಕನಾಗಿದ್ದೇನೆ ಎಂದು ಅವರು ಬರೆದಿದ್ದರು. ಆದರೆ ಕೇರಳದಲ್ಲಿ ಅವರ ಪಕ್ಷದ ಮುಖಂಡತ್ವ ಮತ್ತು ಎಐಸಿಸಿ ಮುಖಂಡತ್ವ ಅವರಿಗೆ ಭಾಗವಹಿಸಬಾರದೆಂದು ಹೇಳಿದೆ. ಆದ್ದರಿಂದ ಅವರು ಗೈರುಹಾಜರಾಗಿದ್ದಾರೆ" ಎಂದು ಈ ಕುರಿತು ಟಿಪ್ಪಣಿ ಮಾಡುತ್ತ ಹೇಳಿದ ಪ್ರಕಾಶ ಕಾರಟ್, ಕಾಂಗ್ರೆಸ್ ಮುಖಂಡರ ಇಂತಹ ನಿಲುವುಗಳು, ಜನರ ನಡುವೆ ಅವರ ವಿಶ್ವಾಸಾರ್ಹತೆಯನ್ನು ಧ್ವಂಸ ಮಾಡುತ್ತವೆ ಎಂದರು.

ಕಣ್ಣೂರಿನಲ್ಲಿ ಸಿಪಿಐ(ಎಂ)ನ ಮಹಾಧಿವೇಶನದ ಸಂದರ್ಭದಲ್ಲಿ ವಿವಿಧ ವಿಷಯಗಳ ಮೇಲೆ ವಿಚಾರಸಂಕಿರಂಗಳನ್ನು ಏರ್ಪಡಿಸಲಾಗಿತ್ತು. ಅಂತಹ ಎರಡು ವಿಚಾರ ಸಂಕಿರಣಗಳ ಸಂಕ್ಷಿಪ್ತ ವರದಿ:

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ ರಾಜ ಮತ್ತು ರಾಜ್ಯ ಕಾಂಗ್ರೆಸ್–ಎಸ್ ಅಧ್ಯಕ್ಷ ರಾಮಚಂದ್ರನ್ ಕದನ್ನ ಪ್ಪಲ್ಲಿ ವಿಚಾರ ಸಂಕಿರಣವನ್ನು ಉದ್ದೇಶಿಸಿ ಮಾತನಾಡಿದರು. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಇ ಪಿ ಜಯರಾಜನ್ ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿದ್ದರು.

23ನೇ ಮಹಾಧಿವೇಶನದ ವಿವಿಧ ಸಮಿತಿಗಳು

ಅಧ್ಯಕ್ಷ ಮಂಡಳಿ:
ಮಾಣಿಕ್ ಸರ್ಕಾರ್
ಕೆ. ಹೇಮಲತಾ
ಪಿ.ಕೆ. ಬಿಜು
ಅಶೋಕ ಭಟ್ಟಾಚಾರ್ಯ
ನರೇಶ ಜಮಾತಿಯ
ಎಂಹೆಚ್ ಶೇಖ್
ಇಂದ್ರಜೀತ್ ಸಿಂಗ್

ಚಾಲನಾ ಸಮಿತಿ:ಪೊಲಿಟ್‌ಬ್ಯುರೊ

ನಿರ್ಣಯ ಸಮಿತಿ:
ನೀಲೋತ್ಪಲ ಬಸು (ಅಧ್ಯಕ್ಷರು)
ಥಾಮಸ್ ಐಸಾಕ್
ಅಶೋಕ ಧವಳೆ
ಆರ್. ಅರುಣ್ ಕುಮಾರ್
ಮರಿಯಂ ಧವಳೆ
ವಿ.ಕೆ. ರಾಮಚಂದ್ರನ್
ದೇಬಶಿಸ್ ಚಕ್ರಬರ್ತಿ

ಅರ್ಹತಾ ಪರಿಶೀಲನಾ ಸಮಿತಿ:
ಶ್ರೀದೀಪ್
ಭಟ್ಟಾಚಾರ್ಯ(ಅಧ್ಯಕ್ಷರು)
ಪಿ. ಷಣ್ಮುಗಂ
ವೈ. ವೆಂಕಟೇಶ್ವರ ರಾವ್
ಸುಮಿತ್ರಾ ಚೋಪ್ರಾ
ಪುತಲತ್ ದಿನೇಶನ್

ಕಲಾಪ ಸಮಿತಿ:
ಜೆ.ಎಸ್. ಮಜುಂದಾರ್
ಸೋಮನಾಥ ಭಟ್ಟಾಚಾರ್ಯ
ಅನಿಲ್ ಕುಮಾರ್
ಸುಧಾ ಭಾಸ್ಕರ್
ಮಧು ಗರ್ಗ್
ಎಂ.ಕೆ. ನಂದಿ
ಸಮೀರ್ ದಾಸ್
ಅಮಿತಾವ ಗುಹ



ರಾಜ್ಯಗಳ ಸ್ವಾಯತ್ತತೆಗಾಗಿ ಒಗ್ಗಟ್ಟಿನಿಂದ ಕೆಲಸ ಮಾಡಿ: ಸ್ಟಾಲಿನ್

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸಿಪಿಐ(ಎಂ)ನ 23ನೇ ಪಕ್ಷದ ಮಹಾಧಿವೇಶನದ ಅಂಗವಾಗಿ ಕಣ್ಣೂರಿನಲ್ಲಿ ಎಪ್ರಿಲ್ 9 ರಂದು ನಡೆದ ಕೇಂದ್ರ–ರಾಜ್ಯ ಸಂಬಂಧಗಳ ವಿಚಾರ ಸಂಕಿರಣದಲ್ಲಿ ಮಾತನಾಡುತ್ತ ರಾಜ್ಯಗಳ ಸ್ವಾಯತ್ತತೆಗಾಗಿ ರಾಜಕೀಯ ಪಕ್ಷಗಳು ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಕರೆ ನೀಡಿದರು. ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ದೇಶದ ಒಕ್ಕೂಟ ಸ್ವರೂಪವನ್ನು ತೊಡೆದುಹಾಕುವ ಪ್ರಯತ್ನದಲ್ಲಿ ಎಲ್ಲಾ ಒಕ್ಕೂಟ ನಿಯಮಗಳನ್ನು ಉಲ್ಲಂಘಿಸುತ್ತಿದೆ ಎಂದು ಅವರು ಟೀಕಿಸಿದರು.

ನಾವು ಅವರ ಕೈಗೊಂಬೆಯಂತೆ ವರ್ತಿಸಿದರೆ ಯಾವುದೇ ಸಮಸ್ಯೆ ಇರುವುದಿಲ್ಲ. ಆದರೆ, ನಾವು ದೀನದಲಿತರಿಗಾಗಿ ಒಳ್ಳೆಯದನ್ನು ಮಾಡಿದರೆ, ನಾವು ಹೊಸ ಶಿಕ್ಷಣ ಕಾರ್ಯಕ್ರಮಗಳು, ರಾಜ್ಯದ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡಿದರೆ, ಅವರು ನಮ್ಮ ಕಾರ್ಯನಿರ್ವಹಣೆಯನ್ನು ದೊಡ್ಡ ರೀತಿಯಲ್ಲಿ ನಿರ್ಬಂಧಿಸುತ್ತಾರೆ. ನಮ್ಮ ಹಕ್ಕುಗಳಿಗಾಗಿ ಹೋರಾಡಲು ನಮಗೆ ರಾಜ್ಯಗಳ ಜಂಟಿ ಮಂಡಳಿಯ ಅಗತ್ಯವಿದೆ. ನಮಗೆ ದಕ್ಷಿಣದ ರಾಜ್ಯಗಳ ಮುಖ್ಯಮಂತ್ರಿಗಳ ಅಗತ್ಯವಿದೆ ಮತ್ತು ಇತರ ಪ್ರದೇಶಗಳಿಗೂ ಇದೇ ರೀತಿಯ ಮಂಡಳಿಗಳ ಅಗತ್ಯವಿದೆ; ದೇಶ ಮತ್ತು ಅದರೊಕ್ಕೂಟಮೌಲ್ಯಗಳನ್ನು ರಕ್ಷಿಸಲು ನಾವು ಒಂದಾಗಬೇಕು ಎಂದು ಸ್ಟಾಲಿನ್ ಹೇಳಿದರು.

'ದೇಶದ ರಕ್ಷಣೆಯಾಗಬೇಕಾದರೆ ಮೊದಲು ರಾಜ್ಯಗಳ ರಕ್ಷಣೆಯಾಗಬೇಕು. ಮನೆಗಳು ಬೀದಿಗಳನ್ನು ರೂಪಿಸುತ್ತವೆ, ಬೀದಿಗಳು ಹಳ್ಳಿಗಳು ಮತ್ತು ಪಟ್ಟಣಗಳನ್ನು ರೂಪಿಸುತ್ತವೆ, ಅವು ರಾಜ್ಯಗಳನ್ನು ರೂಪಿಸುವ ಜಿಲ್ಲೆಗಳನ್ನು ರೂಪಿಸುತ್ತವೆ. ಆದರೆ ಕೆಲವು ವ್ಯಕ್ತಿಗಳು ಮತ್ತು ಸಂಸ್ಥೆಗಳು ಭಾರತವು ರಾಜ್ಯಗಳ ಒಕ್ಕೂಟ ಎಂಬ ಅಂಶವನ್ನು ಮರೆತುಬಿಡುತ್ತವೆ ಎಂದ ತಮಿಳುನಾಡು ಮುಖ್ಯಮಂತ್ರಿಗಳು ನಮ್ಮ ಸಂವಿಧಾನದ ಶಿಲ್ಪಿಗಳು ರೂಪಿಸಿದ್ದು ಸ್ವಾಯತ್ತ ರಾಜ್ಯ ಸರ್ಕಾರಗಳು ಮತ್ತು ಕೇಂದ್ರದಲ್ಲಿ ಒಂದು ಒಕ್ಕೂಟ ಸರಕಾರ ಎಂದು ನೆನಪಿಸಿದರು.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಕಾಂಗ್ರೆಸ್ ಮುಖಂಡ ಪ್ರೊ.ಕೆ.ವಿ.ಥಾಮಸ್ ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದರು. ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಅಧ್ಯಕ್ಷತೆ ವಹಿಸಿದ್ದರು.



ನಾಡಿನ ಶಾಂತಿ, ಸೌಹಾರ್ದತೆ ಕಾಪಾಡಲು ಹಾಗೂ ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣ ಉಳಿಸಲು ಮನವಿ ಮಾಡಿದವರಿಗೆ ಕೊಲೆ ಬೆದರಿಕೆ

ಕನ್ನಡ ನಾಡಿನ ಸೌಹಾರ್ದದ ಪರಂಪರೆಯನ್ನು ನೆನಪಿಸುತ್ತಾ ಶಾಂತಿ ಮತ್ತು ಸೌಹಾರ್ದತೆಗಳು ಸಮಾಜದ ಪ್ರಗತಿಗೆ ಅವಶ್ಯಕ. ವಿಶೇಷವಾಗಿ ದ್ವೇಷ ಹುಟ್ಟಿಸುವ ದ್ವೇಷ ಹೆಚ್ಚಿಸುವ ಕೃತ್ಯಗಳು ನಿಲ್ಲಲಿ ಎನ್ನುವ ಮೂಲಕ ಸೌಹಾರ್ದತೆಯ ಸಂದೇಶವನ್ನು ವಿವಿಧ ರಂಗಗಳ ಪ್ರಮುಖರು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರಿಗೆ ಪತ್ರದ ಮೂಲಕ ಮನವಿ ಮಾಡಿದ್ದರು. ಈಗ ಹಿಜಾಬ್ ಸುತ್ತ ಬೆಳೆದಿರುವ ವಿವಾದದಿಂದಾಗಿ ವಿದ್ಯಾರ್ಥಿನಿಯರು ಪರೀಕ್ಷೆಯ ಅವಕಾಶವನ್ನು ಕಳೆದುಕೊಳ್ಳಬಾರದು. ಎಲ್ಲದಕ್ಕಿಂತ ಇವರ ಭವಿಷ್ಯ ಬಹುಮುಖ್ಯ ಎನ್ನುವ ಕಾಳಜಿಯೊಂದಿಗೆ ಮುಖ್ಯಮಂತ್ರಿಗಳು ಮಧ್ಯಪ್ರವೇಶಿಸಿ ಇಂದಿನ ವಾತಾವರಣವನ್ನು ತಿಳಿಗೊಳಿಸಬೇಕು. ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣದ ಹಕ್ಕನ್ನು ಕಾಪಾಡಬೇಕೆಂದು, ಶಿಕ್ಷಣ ಇಲಾಖೆಯ ಸಮಸ್ತ ಕುರಿತ ಹಿಂಪಡೆಯಬೇಕೆಂದು ಸೌಹಾರ್ದ ಕರ್ನಾಟಕ, ಸಮುದಾಯ ಸಂಘಟನೆಗಳು ಒಳಗೊಂಡು ಮನವಿ ಮಾಡಿದ 61 ಜನ ನಾಡಿನ ವಿವಿಧ ಹಿರಿಯ ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಹಲವು ಜನಚಳುವಳಿಗಳ ಪ್ರಮುಖರಿಗೆ ಜೀವ ಬೆದರಿಕೆ ಹಾಕಿದ ಪತ್ರವೊಂದು ದೊರೆತಿದೆ.

ರಾಜ್ಯದಲ್ಲಿ ಸತತವಾಗಿ ನಡೆಯುತ್ತಿರುವ ಪ್ರಚೋದನಾತ್ಮಕ ಕೋಮು ದ್ವೇಷಿಸುವ ವಿಭಜನಕಾರಿ ಚಟುವಟಿಕೆಗಳ ಹಲವಾರು ನಿದರ್ಶನಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ. ಕಾನೂನು ಸುವ್ಯವಸ್ಥೆಯನ್ನು ಧಿಕ್ಕರಿಸಿ ಮತೀಯ ದ್ವೇಷ ಹೊತ್ತಿಸುವ ಶಕ್ತಿಗಳ ಮೇಲೆ ಕಠಿಣ ಕ್ರಮವಹಿಸಲು ಕೋರಲಾಗಿದೆ.

ರಾಜ್ಯ ಹೈಕೋರ್ಟಿನ ತೀರ್ಪಿನ ವ್ಯಾಪ್ತಿಯಲ್ಲಿಯೂ ರಾಜ್ಯ ಸರ್ಕಾರವು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬಹುದು ಎನ್ನುವುದನ್ನು ತಿಳಿಸಿದೆ. ಮತ್ತು ಮಕ್ಕಳಿಗೆ ಭಗವದ್ಗೀತೆಯನ್ನು ಪಠ್ಯಕ್ರಮದಲ್ಲಿ ಸೇರಿಸಬಾರದು ಯಾಕೆ ಎನ್ನುವ ಅಂಶಗಳು ಬೇಡಿಕೆಯಾಗಿವೆ.

ಹಿರಿಯ ಸಾಹಿತಿಗಳಾದ ಡಾ. ಕೆ. ಮರುಳಸಿದ್ದಪ್ಪ, ಡಾ. ಪುರುಷೋತ್ತಮ ಬಿಳಿಮಲೆ, ಕುಂ. ವೀರಭದ್ರಪ್ಪ, ಡಾ. ವಿಜಯಾ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಡಾ. ರಾಜೇಂದ್ರ ಚೆನ್ನಿ, ಡಾ. ಬಂಜಗೆರೆ ಜಯಪ್ರಕಾಶ್, ಡಾ. ವಸುಂಧರಾ ಭೂಪತಿ, ಬೋಳುವಾರು ಮಹಮದ್ ಕುಂಞ್, ಡಾ. ರಹಮತ್ ತರಿಕೆರೆ, ಐ.ಕೆ. ಬೋಳುವಾರ್, ಪ್ರೊ. ಚಂದ್ರಪೂಜಾರಿ, ಬಿ. ಶ್ರೀಪಾದಭಟ್ಟ, ನಾ. ದಿವಾಕರ, ಚಿದಂಬರರಾವ್ ಜಂಬೆ, ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಕೆ.ನೀಲಾ, ಕೆ.ಎಸ್.ವಿಮಲಾ, ಕೆ.ಎಸ್.ಲಕ್ಷ್ಮಿ, ಟಿ.ಸುರೇಂದ್ರರಾವ್ ಮುಂತಾಗಿ 61 ಜನರ ಹೆಸರುಗಳನ್ನು ಪಟ್ಟಿಮಾಡಿ' ಸಾವು ಹತ್ತಿರವಿದೆ. ಸಿದ್ಧವಾಗಿರಿ. ಹೇಗಾದರೂ ಯಾವ ರೂಪದಲ್ಲಿ ಆಗಲಿ ಸಾವು ಬರಲಿದೆ. ಶವ ಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಳ್ಳಿ' ಎನ್ನುವ ಹತ್ಯೆ ಮಾಡುವ ಬೆದರಿಕೆಯ ಪತ್ರವನ್ನು ಹಿರಿಯ ಸಾಹಿತಿಗಳಿಗೆ ಭದ್ರಾವತಿಯಿಂದ 'ಸಹಿಷ್ಣು ಹಿಂದೂ' ಎಂಬ ಹೆಸರಿನಲ್ಲಿ ಕಳಿಸಲಾಗಿದೆ. ಇದರಲ್ಲಿ ಸಂಘಪರಿವಾರದ ದುಷ್ಕೃತ್ಯಗಳನ್ನು ನಿಷ್ಠುರವಾಗಿಯೇ ಟೀಕಿಸುತ್ತಿರುವ ಮತ್ತು ರಾಜ್ಯದ ಬಿಜೆಪಿ ಸರ್ಕಾರದ ವೈಫಲ್ಯವನ್ನು ತೆರೆದಿಡುತ್ತಿರುವ ಮಾಜಿ ಮುಖ್ಯಮಂತ್ರಿ ಗಳಾದ ಎಚ್ ಡಿ ಕುಮಾರಸ್ವಾಮಿ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರುಗಳಿಗೂ ಬೆದರಿಕೆಯ ಪತ್ರಗಳು ಹೋಗಿವೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಎಲ್ಲರೂ ಶಾಂತಿ, ಸೌಹಾರ್ದತೆ ಕಾಪಾಡುವ ಮತ್ತು ಮತೀಯ ಸಾಮರಸ್ಯಕ್ಕೆ ಕಿಚ್ಚಿಡುವ ಶಕ್ತಿಗಳ ವಿರುದ್ಧ ದೃಢ ಹೋರಾಟವನ್ನು ಮುಂದುವರಿಸುವುದಾಗಿ ತಿಳಿಸಿದ್ದಾರೆ.

ಅಂಗವಿಕಲರ ಪಾಲಕರ ಒಕ್ಕೂಟದಿಂದ ಕುಂದಾಪುರದಲ್ಲಿ ಧರಣಿ:

ಉಡುಪಿ ಜಿಲ್ಲೆಯ ಎಂಡೋಸಲ್ಫಾನ್ ಪೀಡಿತ ಅಂಗವಿಕಲರಿಗಾಗಿ ಕುಂದಾಪುರ ತಾಲೂಕು ಸೇನಾಪುರ ಗ್ರಾಮದ 5 ಎಕರೆ ಭೂಮಿಯಲ್ಲಿ ಪುನರ್ವಸತಿ ಕೇಂದ್ರವನ್ನು ಕೂಡಲೇ ಸ್ಥಾಪಿಸುವಂತೆ ಆಗ್ರಹಿಸಿ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಎಪ್ರಿಲ್ 5 ರಂದು ಕುಂದಾಪುರ ತಾಲೂಕು ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಲಾಯಿತು.

ಪುನರ್ವಸತಿ ಕೇಂದ್ರ ಹಾಗೂ ಸುಸಜ್ಜಿತ ಆಸ್ಪತ್ರೆ ಕಟ್ಟಡಕ್ಕೆ 11 ಕೋಟಿ ರೂ.ಅನುದಾನ ಕೋರಿ ಉಡುಪಿ ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ 5 ವರ್ಷ ಕಳೆದರೂ ಅನುದಾನ ಬಿಡುಗಡೆಯಾಗಿಲ್ಲ ಎಂದು ಧರಣಿ ನಿರತರು ಆಕ್ರೋಶ ವ್ಯಕ್ತಪಡಿಸಿದರು.


ಒಕ್ಕೂಟದ ಜಿಲ್ಲಾ ಗೌರವ ಅಧ್ಯಕ್ಷ ವೆಂಕಟೇಶ ಕೋಣಿ, ಅಧ್ಯಕ್ಷ ಮಂಜುನಾಥ ಹೆಬ್ಬಾರ್, ಪ್ರಧಾನ ಕಾರ್ಯದರ್ಶಿ ಕೃಷ್ಣ ಪೂಜಾರಿ ಕೋಟೇಶ್ವರ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಕೊವಿಡ್ ಕಾಲದಲ್ಲಿ ಶಿಕ್ಷಣ ವಂಚಿತ ಮಕ್ಕಳ ಶೈಕ್ಷಣಿಕ ಪುನಶ್ಚೇತನ......... ಪುಟ 6 ರಿಂದ

ಕಾರ್ಯಕ್ರಮದ ಅನುಷಾನಕ್ಕೆ ಒಕ್ಕೂಟ ಸರ್ಕಾರ ಬಜೆಟ್ಟಿನಲ್ಲಿ ಪ್ರಕಟಿಸಿರುವ ಕಾರ್ಯಯೋಜನೆಗೆ ಅನುದಾನವನ್ನು ನೀಡುವಂತೆ ಒತ್ತಾಯಿಸಬೇಕು.

ರಾಜ್ಯದಲ್ಲಿ 2022–23ನೆಯ ಸಾಲಿನಲ್ಲಿ ರೂಢಿಗತ ಶೈಕ್ಷಣಿಕ ಕಾರ್ಯಕ್ರಮದ ಜೊತೆಯಲ್ಲಿ ವಿಶೇಷ ಶೈಕ್ಷಣಿಕ ಪುನಶ್ಚೇತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಎರಡೂ ಜೊತೆ ಜೊತೆಯಲ್ಲಿ ನಡೆಯಬೇಕು. ಈಗಾಗಲೆ ನ್ಯಾಯಾಲಯಗಳ ಆದೇಶಗಳಿಂದಾಗಿ ಮತ್ತು ಸರ್ಕಾರಗಳ ಅಖಂಡ ವಿಧಾನದ ಅಭಿವೃದ್ಧಿ ನೀತಿಗಳಿಂದಾಗಿ ರಾಜ್ಯದ ಹಿಂದುಳಿದ ವರ್ಗ ಹೈರಾಣಾಗಿದೆ. ಇಂದು ಆಳುವ ವರ್ಗವು ಪ್ರತಿಪಾದಿಸುತ್ತಿರುವ 'ಎಲ್ಲ ಜಾತಿಗಳಲ್ಲಿಯೂ ಬಡವರಿದ್ದಾರೆ' ಎಂಬ ಪ್ರಣಾಳಿಕೆಯಿಂದ ಪ.ಜಾ., ಪ.ಪಂ., ಒಬಿಸಿಗಳಿಗೆ ನ್ಯಾಯ ದೊರೆಯುವುದಿಲ್ಲ. ಈ ಪ್ರಣಾಳಿಕೆಯ ಹುಸಿತನವನ್ನು ಗಮನಿಸಬೇಕು. ಏಕೆಂದರೆ ಪ.ಜಾ.ಯ ಅನಕ್ಷರಸ್ಥ ದಿನಗೂಲಿ ಮಹಿಳೆಯರ ಬಡತನ ಮತ್ತು ಉನ್ನತ ಜಾತಿಯ ಅಕ್ಷರಸ್ಥ ಮಹಿಳೆಯರ ಬಡತನವನ್ನು ಒಂದೆ ತಕ್ಕಡಿಯಲ್ಲಿಟ್ಟು ತೂಗುವುದು ಸರಿಯಲ್ಲ. ಯಾವುದನ್ನು ಜಾನ್ ರಾಲ್ಸ್ 'ಭಿನ್ನತೆಯ ನಿಯಮ' ಎನ್ನುತ್ತಾನೋ ಅದನ್ನು ಶ್ರದ್ಧೆಯಿಂದ ನಾವು ಪಾಲಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ 91 ಲಕ್ಷ ಮಕ್ಕಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ನಮ್ಮ ಸರ್ಕಾರವು ಒಂದು ಬೃಹತ್ ಶೈಕ್ಷಣಿಕ ಪುನಶ್ಚೇತನ ಕಾರ್ಯಕ್ರಮವನ್ನು ತುರ್ತಾಗಿ ಹಮ್ಮಿಕೊಳ್ಳಬೇಕು. ಇಲ್ಲದಿದ್ದರೆ ಯಾವುದನ್ನು ಜನಸಂಖ್ಯಾಶಾಸ್ತ್ರಜ್ಞರು 'ಪಾಪ್ಯುಲೇಶನ್ ಡಿವಿಡೆಂಡ್' ಎನ್ನುತ್ತಾರೋ ಅದರ ಕಾಣಿಕೆಯು ಆರ್ಥಿಕ ಅಭಿವೃದ್ಧಿಗೆ ದೊರೆಯುವುದಿಲ್ಲ. ಈಗಾಗಲೆ ನಮ್ಮ ಯುವ ಜನಾಂಗ ಕುಶಲತೆ ಕೊರತೆಯಿಂದ ಕೂಡಿದೆ ಎಂದು ಟೀಕಿಸಲಾಗುತ್ತಿದೆ. ಈಗ ಎರಡು ವರ್ಷ ಶಿಕ್ಷಣದಿಮದ ವಂಚಿತರಾದ ಮಕ್ಕಳ ಶೈಕ್ಷಣಿಕ ಪುನಶ್ಚೇತನ ಕಾರ್ಯಯೋಜನೆಯನ್ನು ಹಮ್ಮಿಕೊಳ್ಳದಿದ್ದರೆ ಸಮಸ್ಯೆಯು ಮತ್ತಷ್ಟು ಉಲ್ಬಣಗೊಳ್ಳುತ್ತದೆ.

ವಸಂತರಾಜ ಎನ್.ಕೆ.



ವ್ಯಾಕ್ಸೀನ್ ಪೇಟೆಂಟ್ ರಾಜಿ:
ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ

ಪೇಟೆಂಟ್ ವ್ಯವಸ್ಥೆಯು, ವ್ಯಾಕ್ಸೀನಿನ ದುಬಾರಿ ಬೆಲೆಗಳಿಗೆ ಹಾಗೂ ಆ ಮೂಲಕ ಬಡ ದೇಶಗಳಿಗೆ ವ್ಯಾಕ್ಸೀನಿನ ಖರೀದಿಯನ್ನು ಮತ್ತು ಸ್ಥಳೀಯವಾಗಿ ಅದರ ಉತ್ಪಾದನೆಯ ಸಾಧ್ಯತೆಯನ್ನು ಪ್ರತಿಬಂಧಿಸಲು ಕಾರಣವಾಗಿದೆ. ಹಾಗಾಗಿ ಈ ಕೊವಿಡ್ ವ್ಯಾಕ್ಸೀನ್ ಪೇಟೆಂಟನ್ನು 3 ವರ್ಷಗಳ ಅವಧಿಗೆ ಮನ್ನಾ ಮಾಡಬೇಕೆಂದು ಕೊವಿಡ್ ಮಹಾಸೋಂಕಿನ ಆರಂಭ ಘಟ್ಟದಲ್ಲೇ ಭಾರತ, ದಕ್ಷಿಣ ಆಫ್ರಿಕಾಗಳ ನೇತೃತ್ವದಲ್ಲಿ ಸುಮಾರು 100 ಬಡ ದೇಶಗಳು ಒತ್ತಾಯಿಸಿದ್ದವು. ಈ ಪ್ರಸ್ತಾವದ 18 ತಿಂಗಳುಗಳ ಚೌಕಾಶಿಯ ನಂತರ, ಯುರೋ ಕೂಟ ಒಂದು ರಾಜಿ ಒಪ್ಪಂದವನ್ನು ಸೂಚಿಸಿದ್ದು, ಬಡದೇಶಗಳ ನಾಯಕರಾದ ಭಾರತ-ದಕ್ಷಿಣ ಆಫ್ರಿಕಾಗಳು ಇದನ್ನು ಒಪ್ಪಿಕೊಂಡಿವೆಯಂತೆ, ರಾಜಿಯ ಒಪ್ಪಂದ ವ್ಯಾಕ್ಸೀನ್ ಉತ್ಪಾದನೆಗೆ ಇರುವ ತೊಡಕುಗಳನ್ನು ನಿವಾರಿಸುವುದಿಲ್ಲ. ಬದಲಿಗೆ ರಾಜಿಯ ವಿವರಗಳನ್ನು ಪರಿಶೀಲಿಸಿದರೆ, ಇನ್ನಷ್ಟು ಹೆಚ್ಚಿಸುತ್ತದೆ. ವ್ಯಾಕ್ಸೀನ್ ಪೇಟೆಂಟ್ ರಾಜಿ ಒಪ್ಪಂದ, ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ ಇದೆ. ಅದೂ ದಿಡ್ಡಿ ಬಾಗಿಲನ್ನು ಅರ್ಧ ಹಾಕಿದಂತೆ ಆಗಿದೆ. ದೀರ್ಘ ಚೌಕಾಶಿಯ ನಂತರದ ಈ ರಾಜಿ ಒಪ್ಪಂದವನ್ನು ಇನ್ನೂ ಮೃದು ಶಬ್ದಗಳಲ್ಲಿ ಹೇಳಲು ಸಾಧ್ಯವಿಲ್ಲ.

ಭೀಕರ ಜಾಗತಿಕ ಕೊವಿಡ್ ವ್ಯಾಕ್ಸೀನ್ ಅಸಮಾನತೆಯಿಲ್ಲದಿದ್ದರೆ ಇಷ್ಟರೊಳಗೆ ಬಹುಶಃ ಕೊವಿಡ್ ಮಹಾಸೋಂಕನ್ನು ಪೂರ್ಣ ನಿಯಂತ್ರಣಕ್ಕೆ ತರಬಹುದಾಗಿತ್ತು. ಲಕ್ಷಾಂತರ ಜಾಗತಿಕ ಸಾವು-ನೋವುಗಳನ್ನು ತಡೆಯಬಹುದಿತ್ತು ಎಂಬುದು ಹಲವು ಪರಿಣತರ ಅಭಿಪ್ರಾಯ. ಈ ಅಸಮಾನತೆ ಶ್ರೀಮಂತ-ಬಡ ದೇಶಗಳ, ದೇಶದೊಳಗೆ ಶ್ರೀಮಂತ-ಬಡವರ, ವಿವಿಧ ಜಾತಿ-ಮತಧರ್ಮ-ಬುಡಕಟ್ಟುಗಳ ಜನರ ನಡುವೆಯೂ ಇವೆ. ಜನವರಿ ಮೊದಲ ವಾರದ ಈ ಅಂಕೆಸಂಖ್ಯೆಗಳನ್ನು ನೋಡಿದರೆ ಶ್ರೀಮಂತ-ಬಡ ದೇಶಗಳ ನಡುವಿನ ವ್ಯಾಕ್ಸೀನ್ ಅಸಮಾನತೆಯ ಭೀಕರತೆಯ ಅರಿವಾಗುತ್ತದೆ. ಶ್ರೀಮಂತ ದೇಶಗಳ ಜನಸಂಖ್ಯೆಯ ಸುಮಾರು ಶೇ.70 ಭಾಗ ವ್ಯಾಕ್ಸೀನ್ ಪಡೆದಿದ್ದಾರೆ. ಆದರೆ ಬಡ ದೇಶಗಳಲ್ಲಿ ಕೇವಲ ಶೇ. 2.5 ಭಾಗ ವ್ಯಾಕ್ಸೀನ್ ಪಡೆದಿದ್ದಾರೆ. ಶ್ರೀಮಂತ ದೇಶಗಳಲ್ಲಿ ಜನಸಂಖ್ಯೆಯ ಸುಮಾರು ಶೇ.150 ರಷ್ಟು ಡೋಸುಗಳನ್ನು ಕೊಡಲಾಯಿತು. ಆದರೆ ಬಡ ದೇಶಗಳಲ್ಲಿ ಕೇವಲ ಶೇ.7 ರಷ್ಟು ಡೋಸುಗಳನ್ನು ಮಾತ್ರ ಕೊಡಲಾಯಿತು. ಇಡೀ ಆಫ್ರಿಕಾ ಖಂಡದಲ್ಲಿ ಶೇ.10ಕ್ಕಿಂತಲೂ ಕಡಿಮೆ ವಯಸ್ಕರು ಪೂರ್ಣ ವ್ಯಾಕ್ಸೀನ್ ಪಡೆದಿದ್ದಾರೆ. ಈ ಸಮಯದಲ್ಲಿ ಬಡ ದೇಶಗಳಲ್ಲಿ ಕೊವಿಡ್‌ಗೆ ಬಲಿಯಾದವರ ಸಂಖ್ಯೆ ಶ್ರೀಮಂತ ದೇಶಗಳ ಸಂಖ್ಯೆಯ 4 ಪಟ್ಟು. ಇದೇ ಸಮಯದಲ್ಲಿ 2021ರ ಕೊನೆಯ ಹೊತ್ತಿಗೆ ವ್ಯಾಕ್ಸೀನ್ ಕಂಪನಿಗಳು (ಪ್ರಮುಖವಾಗಿ ಫೈಝರ್, ಮೊಡರ್ನಾ) ಪ್ರತಿ ಸೆಕೆಂಡಿಗೆ ಸಾವಿರ ಡಾಲರು ಲಾಭ ಗಳಿಸುತ್ತಿವೆ.

ಸುಲಭ ಲಭ್ಯತೆಗಾಗಿ ಕೊವಿಡ್ ವ್ಯಾಕ್ಸೀನ್ ಹಾಗೂ ಅದರ ಗಳಿಗೆ ಬೌದ್ಧಿಕ ಆಸ್ತಿ ಪದ್ಧತಿಯನ್ನು ಮತ್ತು ಪೇಟೆಂಟ್ ಹಕ್ಕುಗಳನ್ನು ಮನ್ನಾ ಮಾಡಲು ಶ್ರೀಮಂತ ದೇಶಗಳು ನಿರಾಕರಿಸಿದ್ದು ಈ ವ್ಯಾಕ್ಸೀನ್ ಅಸಮಾನತೆಗೆ ಕಾರಣವಾಗಿರುವ ಒಂದು ಅಂಶ. ದೈತ್ಯ ಫಾರ್ಮಾ (ಅಥವಾ ಔಷಧಿ) ಕಂಪನಿಗಳ ಸೂಪರ್ ಲಾಭಗಳನ್ನು ರಕ್ಷಿಸುವ ಉದ್ದೇಶದ ಔಷಧಿಗಳ ಈ ಪೇಟೆಂಟ್ ವ್ಯವಸ್ಥೆಯು, ದುಬಾರಿ ಬೆಲೆಗಳಿಗೆ ಹಾಗೂ ಆ ಮೂಲಕ ಬಡ ದೇಶಗಳಿಗೆ ವ್ಯಾಕ್ಸೀನ್ ಖರೀದಿಯನ್ನು ಮತ್ತು ಸ್ಥಳೀಯವಾಗಿ ವ್ಯಾಕ್ಸೀನ್ ಉತ್ಪಾದನೆಯ ಸಾಧ್ಯತೆಯನ್ನು ಪ್ರತಿಬಂಧಿಸಲು ಕಾರಣವಾಗಿದೆ. ಈ ಪೇಟೆಂಟ್ ವ್ಯವಸ್ಥೆಯನ್ನು WTO ನ TRIPS ಒಪ್ಪಂದದ ಮೂಲಕ ಹೇರಲಾಗಿದೆ. ಹಾಗಾಗಿ ಈ ಕೊವಿಡ್ ವ್ಯಾಕ್ಸೀನ್ ಪೇಟೆಂಟನ್ನು 3 ವರ್ಷಗಳ ಅವಧಿಗೆ ಮನ್ನಾ ಮಾಡಬೇಕೆಂದು ಕೊವಿಡ್ ಮಹಾಸೋಂಕಿನ ಆರಂಭ ಘಟ್ಟದಲ್ಲೇ ಭಾರತ, ದಕ್ಷಿಣ ಆಫ್ರಿಕಾ ಗಳ ನೇತೃತ್ವದಲ್ಲಿ ಸುಮಾರು 100 ಬಡ ದೇಶಗಳು ಒತ್ತಾಯಿಸಿದ್ದವು. ಆದರೆ ದೈತ್ಯ ಔಷಧಿ ಕಂಪನಿಗಳ ಸೂಪರ್ ಲಾಭದ ಹಿತಾಸಕ್ತಿಯನ್ನು ಸಾರ್ವಜನಿಕ ಆರೋಗ್ಯಕ್ಕಿಂತ ಹೆಚ್ಚಿನ ಆದ್ಯತೆಯೆಂದು ಬಗೆಯುವ ಹೆಚ್ಚಿನ ಶ್ರೀಮಂತ ದೇಶಗಳು ಇದನ್ನು ವಿರೋಧಿಸಿದ್ದವು. ಇದರಲ್ಲಿ ಯುರೋಪಿಯನ್ ಕೂಟದ ವಿರೋಧ ಅತ್ಯಂತ ದೃಢವಾಗಿತ್ತು. ಯು.ಎಸ್ ಮೊದಲಿಗೆ ತೀವ್ರವಾಗಿ ವಿರೋಧಿಸಿದ್ದರೂ ಬಿಡೆನ್ ಅಧ್ಯಕ್ಷತೆ ವಹಿಸಿಕೊಂಡ ಮೇಲೆ ತನ್ನ ವಿರೋಧವನ್ನು ಬಿಟ್ಟು ಕೊಟ್ಟಿತು. ಯುರೋ ಕೂಟ ಬಿಟ್ಟು ಇತರ ದೇಶಗಳು ಸಹ ಯು.ಎಸ್ ನ್ನು ಅನುಸರಿಸಿದವು.

ಈ ಪ್ರಸ್ತಾವದ 18 ತಿಂಗಳುಗಳ ಚೌಕಾಶಿಯ ನಂತರ, ಯುರೋ ಕೂಟ ಒಂದು ರಾಜಿ ಒಪ್ಪಂದವನ್ನು ಸೂಚಿಸಿದ್ದು, ಬಡದೇಶಗಳ ನಾಯಕರಾದ ಭಾರತ-ದಕ್ಷಿಣ ಆಫ್ರಿಕಾ ಗಳು ಇದನ್ನು ಒಪ್ಪಿಕೊಂಡಿವೆಯಂತೆ, ಇದು WTO ಮುಂದೆ ಅಂಗೀಕಾರಕ್ಕೆ ಬರಲಿದೆಯಂತೆ. ಈ ವ್ಯಾಕ್ಸೀನ್ ಪೇಟೆಂಟ್ ರಾಜಿ ಒಪ್ಪಂದ, ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ ಇದೆ. ಅದೂ ದಿಡ್ಡಿ ಬಾಗಿಲನ್ನು ಅರ್ಧ ಹಾಕಿದಂತೆ ಆಗಿದೆ. ದೀರ್ಘ ಚೌಕಾಶಿಯ ನಂತರದ ಈ ರಾಜಿ ಒಪ್ಪಂದದ ವಿವರಗಳನ್ನು ಪರಿಶೀಲಿಸಿದರೆ ಇದನ್ನು ಇನ್ನೂ ಮೃದು ಶಬ್ದಗಳಲ್ಲಿ ಹೇಳಲು ಸಾಧ್ಯವಿಲ್ಲ. ಮೊದಲು ಈ ಒಪ್ಪಂದದ ಸಕಾರಾತ್ಮಕ ಅಂಶಗಳನ್ನು ನೋಡಬಹುದು. ಮೊದಲ ಬಾರಿಗೆ ಯುರೋ ಕೂಟ ಮತ್ತು ಶ್ರೀಮಂತ ದೇಶಗಳು ಪೇಟೆಂಟ್ ವ್ಯವಸ್ಥೆ ಜಾಗತಿಕ ಸಾರ್ವಜನಿಕ ಆರೋಗ್ಯಕ್ಕೆ (ಅದರಲ್ಲೂ ಸೋಂಕುಗಳನ್ನು ಎದುರಿಸಲು) ಮಾರಕವೆಂದು ನೀತಿಶಃ ಒಪ್ಪಿಕೊಂಡಂತೆ ಆಗಿದೆ. ಭಾಗಶಃವಾದರೂ ಪೇಟೆಂಟ್ ಮನ್ನಾ ಮಾಡಲು ಒಪ್ಪಿಕೊಂಡಿರುವುದೂ ಸಹ ಅಷ್ಟೇ.



ಈ ರಾಜಿ ಒಪ್ಪಂದ ವ್ಯಾಕ್ಸೀನ್ ಮೇಲೆ ಪೇಟೆಂಟನ್ನು ಮನ್ನಾ ಮಾಡುವುದಿಲ್ಲ. ಬದಲಿಗೆ ಹೆಚ್ಚಿನ ದೇಶಗಳ ಪೇಟೆಂಟ್ ಕಾನೂನುಗಳಲ್ಲಿ ಲಭ್ಯವಿರುವ 'ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ'ಯಲ್ಲಿ ಉತ್ಪಾದನೆಯ "ಕಡ್ಡಾಯ ಲೈಸೆನ್ಸ್"ನ್ನು ಬಳಸಲು ಅನುವು ಮಾಡಿಕೊಡುತ್ತದೆಯಷ್ಟೇ. ಈಗ ಪೇಟೆಂಟ್ ಹೊಂದಿರುವ ಕಂಪನಿ ಉತ್ಪಾದಿಸಲು ನಿರಾಕರಿಸಿದರೆ ಮಾತ್ರ "ಕಡ್ಡಾಯ ಲೈಸೆನ್ಸ್"ನ್ನು ಬಳಸಬಹುದೆಂಬ ಷರತ್ತು ಇದೆ. ಈ ಷರತ್ತನ್ನು ಮಾತ್ರ ತೆಗೆದು ಹಾಕಲು ಯುರೋ ಕೂಟ ಒಪ್ಪಿಕೊಂಡಿದೆ. ಈ ಷರತ್ತು ಮನ್ನಾ ಕೊವಿಡ್ ಚಿಕಿತ್ಸೆಗೆ ಬೇಕಾಗುವ ಔಷಧಿಗಳಿಗೆ ಮತ್ತು ವ್ಯಾಕ್ಸೀನ್ ಉತ್ಪಾದನೆಗೆ ಬೇಕಾದ ತಂತ್ರಜ್ಞಾನ, ಮಾಹಿತಿ, ಯಂತ್ರೋಪಕರಣಗಳು, ಸಾಮಗ್ರಿಗಳಿಗೆ ಅನ್ವಯವಾಗುವುದಿಲ್ಲ.

ರಾಜಿಯ ಒಪ್ಪಂದ ವ್ಯಾಕ್ಸೀನ್ ಉತ್ಪಾದನೆಗೆ ಇರುವ ತೊಡಕುಗಳನ್ನು ನಿವಾರಿಸುವುದಿಲ್ಲ. ಬದಲಿಗೆ ರಾಜಿಯ ವಿವರಗಳನ್ನು ಪರಿಶೀಲಿಸಿದರೆ, ಇನ್ನಷ್ಟು ಹೆಚ್ಚಿಸುತ್ತದೆ. ಮೊದಲನೆಯದಾಗಿ ಇದು "ಜಾಗತಿಕ ವ್ಯಾಕ್ಸೀನ್ ರಫ್ತಿನ ಶೇ.10ಕ್ಕಿಂತ ಕಡಿಮೆ ರಫ್ತು ಮಾಡಿದ" "WTO ಸದಸ್ಯ ದೇಶ"ಗಳಿಗೆ ಮಾತ್ರ ಅನ್ವಯವಾಗುತ್ತದೆ. "ಕಡ್ಡಾಯ ಲೈಸೆನ್ಸ್"ನ್ನು ಬಳಸಲು ಸಂಬಂಧಿತ ವ್ಯಾಕ್ಸೀನಿಗೆ ಸಂಬಂಧಿಸಿದ ಎಲ್ಲ ಪೇಟೆಂಟುಗಳ ಪಟ್ಟಿಯನ್ನು ಪ್ರಕಟಿಸಬೇಕು. ಈ ಮಾಹಿತಿ ಸಾರ್ವಜನಿಕವಾಗಿ ಲಭ್ಯವಿಲ್ಲ. ಪೇಟೆಂಟ್ ಹೊಂದಿರುವ ಕಂಪನಿಗೆ ಮಾತ್ರ ಲಭ್ಯವಿರುತ್ತದೆ. ಮಾತ್ರವಲ್ಲ ಕಡ್ಡಾಯ ಲೈಸೆನ್ಸ್ ಪಡೆಯುವ ಕಂಪನಿಯ ವಿವರಗಳು, ಉತ್ಪಾದನೆ, ರಫ್ತಿನ ಅಂಕೆಸಂಖ್ಯೆಗಳನ್ನು ಕೊಡಬೇಕೆಂಬ (ಇದು ಈಗಿನ TRIPS ನಲ್ಲಿಲ್ಲ) ಷರತ್ತು ಸೇರಿಸಲಾಗಿದೆ.

ಹಾಗಾಗಿ ಈ ರಾಜಿ ಒಪ್ಪಂದದ ನಂತರವೂ, ಜಗತ್ತಿನ 100ಕ್ಕೂ ಹೆಚ್ಚು ಬಡ ದೇಶಗಳ ಮತ್ತಿತರ ವ್ಯಾಕ್ಸೀನ್ ಉತ್ಪಾದಕರು ವ್ಯಾಕ್ಸೀನ್ ಉತ್ಪಾದನೆಯಲ್ಲಿ ತೊಡಗಿ ಲಭ್ಯತೆಯನ್ನು ವೇಗವಾಗಿ ಹೆಚ್ಚಿಸುವುದಕ್ಕಿರುವ ತೊಡಕುಗಳ ನಿವಾರಣೆಯಾಗುವುದಿಲ್ಲ. ಮಾತ್ರವಲ್ಲ, ಇದೇ ಸೂಚನೆಯನ್ನು ಜೂನ್ 2021ರಲ್ಲಿ ಯುರೋ ಕೂಟ ಮಂಡಿಸಿದ್ದು, ಅದನ್ನು ಬಡದೇಶಗಳು ಒಪ್ಪಿಕೊಂಡಿರಲಿಲ್ಲ. ಈಗ ಭಾರತ, ದಕ್ಷಿಣ ಆಫ್ರಿಕಾಗಳು ಈ ರಾಜಿಗೆ ಒಪ್ಪಿರುವುದು ಆಶ್ಚರ್ಯದ ಸಂಗತಿ. ಮೇಲಿನ ವಿವರಗಳನ್ನು ಪರಿಶೀಲಿಸಿದರೆ, ಇದು ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ ಇದೆ. ಅದೂ ದಿಡ್ಡಿ ಬಾಗಿಲನ್ನು ಅರ್ಧ ಹಾಕಿದಂತೆ ಆಗಿದೆ. ಬೇರೆ ಯಾವ ರೀತಿಯಲ್ಲೂ ಇದನ್ನು ವಿವರಿಸುವುದು ಸಾಧ್ಯವಿಲ್ಲ. ಇದನ್ನು ಬಡದೇಶಗಳು ಒಪ್ಪಿಕೊಳ್ಳಬಾರದು.

ಏಕೆಂದರೆ ಮನುಕುಲದ ಅಳಿವು-ಉಳಿವಿನ ಪ್ರಶ್ನೆ ಬಂದಾಗಲೂ ಶ್ರೀಮಂತ ದೇಶಗಳು ಮತ್ತು ಅವುಗಳು ರಕ್ಷಿಸ ಬಯಸುವ ದೈತ್ಯ ಕಂಪನಿಗಳು ಅನ್ಯಾಯಯುತವಾಗಿ ಹೇರಿದ "ಅಂತರ್ರಾಷ್ಟ್ರೀಯ ಒಪ್ಪಂದ"ಗಳನ್ನು ಬದಲಾಯಿಸಲು ಸಿದ್ಧವಿಲ್ಲ ಅಥವಾ ತಮ್ಮ ನಿಗದಿತ ಜವಾಬ್ದಾರಿಯನ್ನು ಹೊರಲು ತಯಾರಿಲ್ಲ ಎಂದು ಮತ್ತೆ ಮತ್ತೆ ಸಿದ್ಧವಾಗಿದೆ. ಇದು ಹವಾಮಾನ ಬದಲಾವಣೆಯ ಒಪ್ಪಂದ ಮತ್ತು ಬಡದೇಶಗಳ ಗೋಣು ಮುರಿಯುವ ಸಾಲ ಮನ್ನಾ ಮಾಡುವ ಕ್ರಮಗಳ ಚರ್ಚೆಗಳಲ್ಲಿ ಈಗಾಗಲೇ ಸಿದ್ಧವಾಗಿದೆ. ಇದನ್ನು ಒಪ್ಪಿಕೊಳ್ಳದೆ ಬಡದೇಶಗಳು ತಮ್ಮ ಹೋರಾಟವನ್ನು ಐಕ್ಯತೆಯಿಂದ ದೃಢತೆಯಿಂದ ಮುಂದುವರೆಸಬೇಕು. ಇದಕ್ಕೆ ಭಾರತ ನಾಯಕತ್ವ ಕೊಡಬೇಕು. ಆಗ ಮಾತ್ರ ಭಾರತ 'ವಿಶ್ವಗುರು' ಎನಿಸಿಕೊಳ್ಳಬಹುದು.

JANASHAKTHI KANNADA VARA PATRIKE APRIL 11-17, 2022 Price: Rs. 10/- Date of Publication: 08 APRIL 2022 RNI No. KARKAN /2006/17926 Posted on 11-04-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಸೌಹಾರ್ದ ಉಗಾದಿ ರಾಜ್ಯದೆಲ್ಲೆಡೆ ಆಚರಣೆ

ಹಿಂದೂ, ಮುಸ್ಲಿಮ್, ಕ್ರೈಸ್ತ ಸಮುದಾಯದಿಂದ ಸೌಹಾರ್ದ ಉಗಾದಿ ಹಬ್ಬದ ಆಚರಣೆಯನ್ನು ಏಪ್ರಿಲ್ 2, 2022 ರಂದು ರಾಜ್ಯಾದ್ಯಂತ ಆಚರಿಸಲಾಯಿತು. ಕೋಮುವಾದಿಗಳು ಹಬ್ಬವನ್ನು ಮತೀಯವಾದೀಕರಿಸಲು ಯತ್ನಿಸಿದ್ದರು.

ಸೌಹಾರ್ದ ಕರ್ನಾಟಕ, ಸಿಪಿಐ(ಎಂ) ಪಕ್ಷ, ಜನಪರ ಸಂಘಟನೆಗಳು ರಾಜ್ಯವ್ಯಾಪಿ ಕಾರ್ಯಕ್ರಮವನ್ನು ಆಯೋಜಿಸಿದ್ದವು. ಕಾರ್ಯಕ್ರಮಕ್ಕೆ ವ್ಯಾಪಕ ಸ್ಪಂದನೆ ದೊರೆತಿದ್ದು ಬೇವು, ಬೆಲ್ಲ ಹಂಚಿ ತಿನ್ನುವ ಮೂಲಕ ಸೌಹಾರ್ದ ಉಗಾದಿಯನ್ನು ಆಚರಿಸಲಾಯಿತು.

ಕಲಬುರಗಿಯ ಜಗತ್ ವೃತ್ತದಲ್ಲಿರುವ ಬಸವೇಶ್ವರ ಪುತ್ಥಳಿಯ ಆವರಣದಲ್ಲಿ ಸರ್ವ ಧರ್ಮದ ಜನ ಸೇರಿ ಉಗಾದಿ ಹಬ್ಬವನ್ನು ಆಚರಿಸಿದ್ದು ವಿಶೇಶವಾಗಿತ್ತು. ಹಿಂದು, ಮುಸ್ಲಿಂ, ಕ್ರಿಶ್ಚಿಯನ್ ಬೌದ್ಧ ಹೀಗೆ ಹಲವಾರು ಸಮುದಾಯ ಧರ್ಮದ ಬಾಂಧವರು ಸೇರಿಕೊಂಡು ಉಗಾದಿ ಹಬ್ಬವನ್ನ ಆಚರಿಸಿ ಬೇವು ಬೆಲ್ಲದ ಪಾನಕವನ್ನ ಸವಿದರು.

ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ಸೌಹಾರ್ದ ವೇದಿಕೆಯಿಂದ ಅತ್ಯಂತ ಸಂಭ್ರಮದಿಂದ ಸೌಹಾರ್ಧ ಉಗಾದಿಯನ್ನು ಆಚರಿಸಲಾಯಿತು. ಹಿಂದೂ–ಮುಸ್ಲಿಂ–ಕ್ರೈಸ್ತ ಮುಂತಾದ ಎಲ್ಲಾ ಧರ್ಮಕ್ಕೂ ಸೇರಿದ ಬಂಧುಗಳು ಅತ್ಯಂತ ಸಂಭ್ರಮದಿಂದ ತಳಿರು ತೋರಣಗಳನ್ನು ಮಸೀದಿ ಮುಂದೆ, ಪ್ರಮುಖ ಸ್ಥಳಗಳಲ್ಲಿ ಕಟ್ಟಿ ಸಿದ್ಧತೆ ನಡೆಸಿದರು.


ಬೆಂಗಳೂರು


ತಿಪಟೂರು


ಚಿಕ್ಕಬಳ್ಳಾಪುರ


ಕಲಬುರಗಿ


ಮಳವಳ್ಳಿ


ಗುಡಿಬಂಡೆ


ಮಂಡ್ಯ


ವಿಜಯನಗರ


ಮೈಸೂರು


ಕೋಲಾರ


ಬೆಂಗಳೂರು

ನಂತರ ಎಲ್ಲರೂ ಒಂದೆಡೆ ಕೂಡಿ ಬೇವು–ಬೆಲ್ಲ ಹಂಚಿಕೊಂಡು ಹಬ್ಬದ ಸಂದೇಶಗಳನ್ನು ಸಾರಿದರು.

ತುಮಕೂರು ನಗರದಲ್ಲಿಯೂ ಟೌನ್ಹಾಲ್ ಬಳಿ ಸೇರಿದ ವಿವಿಧ ಕ್ಷೇತ್ರಗಳ ಗಣ್ಯರು, ಸಮುದಾಯಗಳು ಪ್ರಮುಖರು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು, ಸೌಹಾರ್ದ ಉಗಾದಿ ಹಬ್ಬ ಆಚರಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಸಹ ಅತ್ಯಂತ ಸಂಭ್ರಮದಿಂದ ಉಗಾದಿ ಆಚರಿಸಲಾಯಿತು. ಮಳವಳ್ಳಿ ಪಟ್ಟಣದಲ್ಲಿ ವಿವಿಧ ಸಮುದಾಯಗಳಿಗೆ ಸೇರಿದ ಎಲ್ಲರೂ ಕಲೆತು ಪರಸ್ಪರ ಬೇವು–ಬೆಲ್ಲ ಹಂಚಿಕೊಳ್ಳುವುದರ ಮೂಲಕ ಹಬ್ಬವನ್ನು ಸೌಹಾರ್ದ ಉಗಾದಿ ಹಬ್ಬವಾಗಿ ಆಚರಿಸಲ್ಪಟ್ಟಿತು.

ಸೌಹಾರ್ದ ಕರ್ನಾಟಕ, ಮೈಸೂರು ವತಿಯಿಂದ ಉಗಾದಿ ಹಬ್ಬದ ಅಂಗವಾಗಿ ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಸೌಹಾರ್ದ ಉಗಾದಿ ಆಚರಿಸಲಾಯಿತು. ಮುಸ್ಲಿಂ, ಕ್ರಿಶ್ಚಿಯನ್ ಬಾಂಧವರೊಂದಿಗೆ ಬೇವು ಬೆಲ್ಲ, ಹೋಳಿಗೆಯನ್ನು ಪರಸ್ಪರ ಹಂಚಿಕೊಳ್ಳಲಾಯಿತು.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಗುಡಿಬಂಡೆ ಪಟ್ಟಣದಲ್ಲಿ ಎಲ್ಲಾ ಹಿಂದೂ, ಮುಸ್ಲಿಂ, ಕ್ರೈಸ್ತ ಜನಾಂಗದ ಜನರೆಲ್ಲರೂ ಸೇರಿ ತಾಲೂಕು ಕಚೇರಿಯ ಮುಂಬಾಗ ಬೇವು, ಬೆಲ್ಲ ತಿನ್ನುವ ಮುಖಾಂತರ ಸೌಹಾರ್ದ ಉಗಾದಿ ಹಬ್ಬವನ್ನು ಆಚರಿಸಿದರು ಸರ್ವ ಜನಾಂಗದ ಶಾಂತಿಯ ತೋಟವನ್ನು ಉಳಿಸುವ ಪಣ ತೊಡಲಾಯಿತು.

ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ, ಹಗರಿಬೊಮ್ಮನಹಳ್ಳಿಯಲ್ಲಿ ಸೌಹಾರ್ದ ಕರ್ನಾಟಕದಿಂದ ಸೌಹಾರ್ದ ಉಗಾದಿಯನ್ನು ಆಚರಿಸಲಾಯಿತು. ಸೌಹಾರ್ದ ಪರಂಪರೆಯನ್ನು ಉಳಿಸೋಣ, ಬೇವು ಬೆಲ್ಲ ಸವಿದು ಭಾವವೈಕ್ಯತೆ ಬೆಸಿಯೋಣ ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು ಪಣತೊಟ್ಟರು.

ಜನಪರ ಸಂಘಟನೆಗಳು, ಸೌಹಾರ್ದ ಕರ್ನಾಟಕ ವೇದಿಕೆಯಿಂದ ಕೊಪ್ಪಳ ನಗರದ ತಾಲೂಕು ಕ್ರೀಡಾಂಗಣದಲ್ಲಿ ನಡೆದ ಈ ಸೌಹಾರ್ದ ಉಗಾದಿ ಆಚರಣೆಯಲ್ಲಿ ಪರಸ್ಪರ ಬೇವು ಬೆಲ್ಲ ಹಂಚಿ ಸಂಭ್ರಮಿಸಿದರು ಕಾರ್ಯಕ್ರಮದಲ್ಲಿ ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ ಮತಸ್ಥರು ಪರಸ್ಪರ ಬೇವು ಬೆಲ್ಲ ಹಂಚಿಕೊಂಡು ಉಗಾದಿ ಆಚರಣೆ ಮಾಡಿದರು.

ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಕೋಲಾರ, ಶ್ರೀನಿವಾಸಪುರ, ಹಾಸನ, ಬೀದರ, ಬಳ್ಳಾರಿ, ವಿಜಯಪುರ ಸೇರಿದಂತೆ ಬಹುತೇಕ ಕಡೆಗಳಲ್ಲಿ ಸೌಹಾರ್ದ ಉಗಾದಿಯನ್ನು ಸಂಭ್ರಮದಿಂದ ಆಚರಿಸಲಾಗಿದೆ.

ಭಾರತ ಎಲ್ಲ ಮತಗಳ ಜನರು ಇರುವ ದೇಶ. ಇಂತಹ ವಿಭಿನ್ನ ಸಂಸ್ಕೃತಿಗಳ, ಆಚರಣೆಗಳಿರುವ ಜನಗಳು ಇರುವ ದೇಶದಲ್ಲಿ ಈ ಹಿಂದೆ ಧರ್ಮ, ಧರ್ಮಗಳ ಜನರ ನಡುವೆ ಸಾಮರಸ್ಯವಿತ್ತು. ಆದರೆ, ಈಗ ರಾಜಕಾರಣಕ್ಕಾಗಿ ಜನರ ಮಧ್ಯ ಧರ್ಮದ ವಿಷ ಬೀಜ ಬಿತ್ತಲಾಗುತ್ತಿದೆ. ಹೀಗಾಗಿ ಜನರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಮನುಜ ಮತ ನಮ್ಮದಾಗಬೇಕು. ಹೀಗಾಗಿ ಸರ್ವರೂ ಸಾಮರಸ್ಯದಿಂದ ಇರಬೇಕು ಸರ್ವ ಜನಾಂಗದ ಶಾಂತಿಯ ತೋಟ ಎಂದು ಜನಪರ ಸಂಘಟನೆಗಳು ಹೇಳಿವೆ.

ಉಗಾದಿ ಎಂದರೆ

*#ಉಗಾದಿ ಎಂದರೆ #ವರುಷ_ತೊಡಗು. ಬೇಟೆಯ ಹಬ್ಬ. ಬೇವಿನ ಸೊಪ್ಪನ್ನು ಜಗಿಯುವುದು, ಬೇವಿನ ಸೊಪ್ಪು ಹಾಕಿ ಕಾಯಿಸಿದ ಬಿಸಿನೀರ ಎಣ್ಣೆ ಸ್ನಾನ.

ಎಲ್ಲರೂ ಕೂಡಿ ಬೇಟೆ, ಅಡುಗೆ, ಊಟ. ಸಾಮೂಹಿಕ ಆಟಗಳು, ಬೇಟೆಯ ಕಾಲದ ಸ್ಪರ್ಧೆಗಳು.

* #ಉಗಾದಿ ಎಂದರೆ #ಹೊನ್ನಾರು, ಹೊನ್ನುಕ್ಕೆ, ಮೊದಲುಕ್ಕೆ. ಕೃಷಿ ವ್ಯಾಪಕವಾದ ನಂತರ ಹೊಲವನ್ನು ಸಾಮೂಹಿಕವಾಗಿ ವರ್ಷದ ಮೊದಲ ಉಳುಮೆ ಮಾಡುವುದು.

*#ಉಗಾದಿ ಎಂದರೆ ಬೇವು, ಬೆಲ್ಲ, ಒಬ್ಬಟ್ಟು ಯಾ ಹೋಳಿಗೆ.

ಕಬ್ಬು, ಬೇಳೆ ಕಾಳು ಬೆಳೆಯುವುದು, ಬೆಲ್ಲ ತಯಾರಿಕೆ ಆರಂಭವಾದ ನಂತರ. ಊರೊಟ್ಟಿನ ಜಾಗದಲ್ಲಿ ನೆರೆದು ಬೆಳಗಿನಿಂದ ರಾತ್ರಿಯವರೆಗೆ ಬಟ್ಟೆ ಚೆಂಡಾಟ, ಲಗೋರಿ, ಚಿಣ್ಣಿ ಕೋಲು, ಅಳಿಗುಳಿ ಮನೆ, ಚಕ್ಕಾಬಾರ, ಚದುರಂಗ ಮೊದಲಾದ ಜಾನಪದ ಆಟಗಳು, ಸ್ಪರ್ಧೆಗಳು, ಸಂಜೆ ಕೋಲಾಟ, ಹಾಡು, ನೃತ್ಯಗಳು.

*#ವೈದಿಕ ಪ್ರವೇಶದ ನಂತರ ಸಸ್ಯಾಹಾರದ ಹಬ್ಬ. ಪಂಚಾಂಗ ಓದುವುದು, ವರ್ಷದ ರಾಶಿ ಫಲ ಕೇಳುವುದು.

*ಇತ್ತೀಚೆಗೆ ಸಾಮೂಹಿಕ ಬೇಟೆ, ಸಾಮೂಹಿಕ ಆಟಗಳು ಮಾಯ. ಅವರವರ ಮನೆಯಲ್ಲಿ ಒಬ್ಬಟ್ಟು ಮರುದಿನ ಮಾಂಸದ ಭರ್ಜರಿ ಊಟ.

ಜಿ.ಎನ್. ನಾಗರಾಜ್ ಅವರ ಪೇಸ್ ಬುಕ್ ವಾಲ್ ನಿಂದ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**